# ಜನಪದ ವಿಚಾರ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

**ತಿಂಗಳ ವೈಚಾರಿಕ ಡೈಜೆಸ್ಟ್**

ಸಂಪುಟ-೧೪ ಏಪ್ರಿಲ್-೨೦೧೪ ಸಂಚಿಕೆ-೯



## ಆಮ್ ಆದ್ಮಿ ಪಕ್ಷ
## ಮತ್ತು
## ರಾಜಕಾರಣದ ಶುದ್ಧೀಕರಣ

## ಜನಪದ ವಿಚಾರದಲ್ಲಿ

ಏಪ್ರಿಲ್ - ೨೦೧೪


೧) ಆಮ್ ಆದ್ಮಿ ಪಕ್ಷ ಮತ್ತು ರಾಜಕಾರಣದ ಶುದ್ಧೀಕರಣ

*- ಸುರೇಂದ್ರ ಕೌಲಗಿ* ಪುಟ-೩

ರಾಜಕಾರಣದ ಶುದ್ಧೀಕರಣಕ್ಕೆ ಬಂದಿರುವ ಆಮ್ ಆದ್ಮಿ ಪಕ್ಷಕ್ಕೆ ಸ್ವಾಗತ ಇರುವುದಾದರೂ ಅದು ತನ್ನ ಶುದ್ಧ ಗುರಿ ತಲುಪಲು ತಾನು ಶುದ್ಧವಾಗಿರಬೇಕೆಂಬ ನೀತಿಯನ್ನು ಸೂಚಿಸುವುದಾಗಿದೆ ಈ ಲೇಖನದ ಉದ್ದೇಶ.

೨) ಪ್ರಪಾತದ ಅಂಚಿನಲ್ಲಿಯ ಬದುಕು ೬

*- ದೇವಿಂದರ್ ಶರ್ಮಾ*

ಅನೇಕ ಪ್ರಕಾರದ ಭಾಗ್ಯಗಳ ಸುರಿಮಳೆಯಲ್ಲಿಯೂ ಭಾಗ್ಯ ಹೀನರಾಗಿರುವ ಅರವತ್ತು ಕೋಟಿ ರೈತ ಸಮುದಾಯದ ದುಸ್ಥಿತಿ ಇಲ್ಲಿ ಬಿಂಬಿತವಾಗಿದೆ.

೩) ಗ್ರಾಮದಲ್ಲಿ ದೀಪಾವಳಿ *- ವಿನೋಬಾ* ೯

೪) ಗಾಂಧೀವಾದದ ಪರಿಮಳ : ನೀಲತ್ತಹಳ್ಳಿ ಕಸ್ತೂರಿ ೧೩

*- ಡಿ.ವಿ.ಪ್ರಹ್ಲಾದ್*

ಅಪಾರವಾಗಿ ಗಾಂಧೀ ಸಾಹಿತ್ಯವನ್ನು ಕನ್ನಡಕ್ಕೆ ತಂದ ಚೇತನ ನೀಲತ್ತಹಳ್ಳಿ ಕಸ್ತೂರಿ. ಅವರ ಸಾಧನೆಯ ಪರಿಚಯ ಇಲ್ಲಿದೆ.

೫) ಬೆಳ್ಳೇಕೆರೆ ಹಳ್ಳಿಥೇಟರ್ *- ಪ್ರಸಾದ್ ರಕ್ಷಿದಿ* ೧೭

ಗ್ರಾಮೀಣ ರಂಗಭೂಮಿಯ ಆತ್ಮಕಥನವಿದು. ಇಂಥ ಪುಸ್ತಕಗಳು ಇನ್ನೂ ಬರಬೇಕು. ನಮ್ಮೆಲ್ಲರ ಕಣ್ಣರಳಿಸಬೇಕು ಎಂದು ಮುನ್ನುಡಿಯಲ್ಲಿ ಬರೆದ ಡಾ. ನ.ರತ್ನರವರ ಮಾತನ್ನು ಪುಷ್ಟೀಕರಿಸುತ್ತದೆ ಈ ಲೇಖನ.

೬) ಪ್ರಜಾತಂತ್ರ ವಿಚಾರಗಳು *- ಸಿದ್ಧವನಹಳ್ಳಿ ಕೃಷ್ಣಶರ್ಮ* ೨೨

ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡು ಸರ್ಕಾರ ನಡೆಸುತ್ತಿರುವ ಪ್ರಮುಖ ರಾಷ್ಟ್ರ ಭಾರತ.ಜನತೆಯ ಪಾಲ್ಗೊಳ್ಳುವಿಕೆ ಮತ್ತು ಪ್ರಜಾಪ್ರಭುತ್ವದ ಹಿರಿಮೆ ಗರಿಮೆ ಕುರಿತಾದ ವಿಚಾರಗಳು ಈಗ ಹೆಚ್ಚು ಪ್ರಸ್ತುತ.

೭) ನಾವು ಆಗಬಯಸಿರುವ ಅಮೇರಿಕಾ ಹೀಗಿದೆ ನೋಡಿ ೨೬

*- ಡಾ.ಎ.ಎನ್.ನಾಗರಾಜ್*

೮) ಜನಪದ ಸೇವಾ ಟ್ರಸ್ಟ್ ಸಮಾಚಾರ ೩೨

೯) ಜನಪದ ನಿಲಯದ ಅಂತರಂಗದಲ್ಲಿ - ೧೨೧ ೩೩

೧೦) ಸರ್ವೋದಯ ಆಂದೋಲನದ ಮುನ್ನಡೆ ೩೫

## ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್ - ೨೦೧೪
ಸಂಪುಟ - ೧೪
ಸಂಚಿಕೆ - ೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

# ಮಾನವ ಹೃದಯವು

ಮಾನವ ಹೃದಯವು ಕಲ್ಲೋ ಕಲ್ಲು,
ಹೆಣ್ಣು ಹೃದಯವೋ ಕಲ್ಲಿಗು ಕಲ್ಲು!
ಪ್ರೀತಿಯೆಂಬುದು ಹೊರ ಮೈಬಣ್ಣ;
ಒಳಗೆ ಕಠಿನ ಕರ್ಕಶವೋ ಅಣ್ಣ,
ಬರಿಯ ಕಲ್ಲು ಕಲ್ಲು!

ಕೇಳು, ಕೇಳು, ಕೇಳು:
ಕಿವಿಯ ಕೊರೆಯುವೀ ನಿಜವ ಕೇಳು, ಓ
ಮೂರ್ಖ ಮುಗ್ಧ ಬಾಲ!
ಬೇಕಾಗುವ ವರೆಗೊಲವೂ ನಲವೂ
ನೇಹಮೋಹ ಜಾಲ;
ಮಾತು ಜೇನು; ನಡೆನಿಲುವು ನಾಟ್ಯ;
ಬಾಳೆಲ್ಲ ಬೇಟಗಾಳ!

ಬೇಡವಾದರೀ ನಿನ್ನ ಹೃದಯ ಕೊಳೆ
ಕಸಕು ಕೀಳು ಕೀಳು!
ಒಲಿದ ಹೃದಯವೇ ಆಗ ಮಾಡುವುದು
ಅದನು ಮೆಟ್ಟುಗಲ್ಲು!

ಹೂವೆದೆ ಶಾಪವ ಕೊಂಡು ಹುಟ್ಟಿದೆಯ?
ಅದನು ಕೊಲ್ಲು ಕೊಲ್ಲು;
ಈಗಲೀಗಲೇ ಕಿತ್ತು ಬಿಸುಡು, ಬಹು
ದೂರ ಎತ್ತಿ ಚೆಲ್ಲು!

ಇಲ್ಲವಾದರೆದೆ ಬೆಂಕಿಯಲ್ಲಿ ಬಾ-
ಳೆಲ್ಲ ಸುಟ್ಟು ಕರಗು:
ಕಲ್ಲಕಲ್ಲಿಗೂ ತಾಗಿ ತಾಗಿ ಚೂ-
ರಾಗಿ ನಿನ್ನ ಕರುಳು!

– ಡಾ.ಗೋಪಾಲಕೃಷ್ಣ ಅಡಿಗ

# ವಿಚಾರಕ್ಕೊಂದು ಸಂಗತಿ

ಚಿತ್ತಾಲರು ಸ್ನೇಹ ಸಂಬಂಧಗಳನ್ನು ಬಹಳ ಜತನದಿಂದ, ಘನತೆಯಿಂದ ಕಾಪಾಡುತ್ತಿದ್ದರು. ಅವರೊಡನೆಯ ಒಡನಾಟದಲ್ಲಿ ನಾನಿದನ್ನು ಪ್ರತಿ ಭೇಟಿಯಲ್ಲೂ ಕಂಡಿದ್ದೇನೆ. ಬೆಂಗಳೂರಿನ ಜೊತೆ ಅವರ ನಂಟು ಬಲಗೊಂಡದ್ದು ಜಿ.ಶ್ರೀನಿವಾಸರಾಜು ಹಾಗೂ ಎಚ್.ಎಸ್.ರಾಘವೇಂದ್ರರಾವ್ ಮೂಲಕ. ಅವರಿಬ್ಬರೂ ಚಿತ್ತಾಲರಿಗೆ ಆಪ್ತ ಸ್ನೇಹಿತರು. ಹಿಂದೊಮ್ಮೆ, ಬಹುಶಃ ಇದು ಇಪ್ಪತ್ತೈದು ವರ್ಷಗಳಿಗೂ ಹಿಂದೆ, ಅವರು ಬೆಂಗಳೂರಿಗೆ ಬಂದಿದ್ದಾಗ ಶ್ರೀನಿವಾಸ ರಾಜು ಆಗ ತಾನೇ ಹೊಸ ಟೀವಿ ಖರೀದಿಸಿದ್ದರು. ಅದರ ಉದ್ಘಾಟನೆಗೆ ಅವರು ಚಿತ್ತಾಲರನ್ನು ಆಹ್ವಾನಿಸಿದರು! ಆವತ್ತು ಶ್ರೀನಿವಾಸರಾಜು ಚಿತ್ತಾಲರನ್ನೂ ಹಾಗೂ ಕೆಲವು ಸ್ನೇಹಿತರನ್ನೂ ಮನೆಗೆ ಊಟಕ್ಕೆ ಕರೆದು, ಟಿವಿಯ ಮೇಲಿನ ಮುಸುಕನ್ನು ಚಿತ್ತಾಲರಿಂದ ತೆಗೆಯಿಸಿ ಅದರ ಉದ್ಘಾಟನೆ ಮಾಡಿಸಿದ್ದರು. ಅಂದಿನ ಅಲ್ಲಿಯ ವಾತಾವರಣದಲ್ಲಿದ್ದ ಸ್ನೇಹ, ಪ್ರೀತಿ, ವಿಶ್ವಾಸಗಳನ್ನು ಮಾತಿನಲ್ಲಿಡಲು ಶಕ್ಯವಿಲ್ಲ.

ಇತ್ತೀಚೆಗೆ ಅವರಿಂದ ಕೈಯಿಂದ ಬರೆಯುವುದು ಕಷ್ಟವಾಗತೊಡಗಿತ್ತು. ಅರ್ಧ ಬರೆದ ಕಾದಂಬರಿ ದಿಗಂಬರ ಮುಗಿಸಲಾರೆನೆಂದು ಮಾತಿನ ನಡುವೆ ನನಗೆ ಹೇಳಿದರು. ಡಿಕ್ಟೇಟ್ ಮಾಡಿ ಬರೆಯಿಸಿ ಎಂದು ಸಲಹೆ ಕೊಟ್ಟೆ. ಅವರು "ಛೆ ಛೆ ಸಾಧ್ಯವೇ ಇಲ್ಲ. ನನಗೆ ನನ್ನ ಅಕ್ಷರಗಳು ಕಾಣಬೇಕು. ಬರೆದದ್ದು ಏನೆಂದು ನನ್ನ ಕಣ್ಣ ಮುಂದಿರಬೇಕು. ಹಾಗಲ್ಲದೇ ಬರೆಯುವುದು ನನ್ನಿಂದಾಗದು," ಎಂದು ಉತ್ತರಿಸಿದ್ದರು.

ಚಿತ್ತಾಲರು ನಿಸ್ಸಂದೇಹವಾಗಿ ಈ ಕಾಲದ ಅತ್ಯುತ್ತಮ ಸಾಹಿತಿಗಳಲ್ಲೊಬ್ಬರು. ಅವರ ಬರಹಗಳನ್ನು ಮತ್ತೆ ಓದಿ ಚರ್ಚಿಸಿ ಮುನ್ನೆಲೆಗೆ ತರುವುದೇ ಅವರಿಗೆ ನಾವು ಕೊಡಬಹುದಾದ ಶ್ರದ್ಧಾಂಜಲಿ. ಸಾಮಾನ್ಯವಾಗಿ ಅವರು ಬೆಳಗಿನ ಏಳೂವರೆಯ ಸಮಯದಲ್ಲಿ ನನಗೆ ಫೋನ್ ಮಾಡುತ್ತಿದ್ದರು. ಅವರು ಒಳ್ಳೆಯ ಉಮೇದಿಯಲ್ಲಿದ್ದರೆ ಫೋನ್ ಎತ್ತಿಕೊಳ್ಳುತ್ತಿದ್ದಂತೆ 'ಏನ ಬೇಡಲಿ ನಿನ್ನ ಬಳಿಗೆ ಬಂದು' ಎಂಬ ಸಾಲನ್ನು ಯಕ್ಷಗಾನದ ಧಾಟಿಯಲ್ಲಿ ಹಾಡುತ್ತಿದ್ದರು. ಅದರ ನಂತರವೇ ಮುಂದಿನ ಮಾತು. ಇದು ಎಷ್ಟೋ ವರ್ಷಗಳ ಪರಿಪಾಠ. ಯಾಕೆ ಅವರು ಅದನ್ನು ಹಾಡುತ್ತಿದ್ದರೋ ಗೊತ್ತಿಲ್ಲ. ಆದರೆ ನಾನಂತೂ ಅದನ್ನು ಆನಂದಿಸುತ್ತಿದ್ದೆ. ಅವರಿಲ್ಲದಿರುವ ಈ ಜಗತ್ತಿನಲ್ಲಿ ಈ ಎಲ್ಲ ನೆನಪುಗಳು ಇನ್ನಷ್ಟು ಕಾಡುತ್ತವೆ

– ವಿವೇಕ ಶಾನಭಾಗ

# ಆಮ್ ಆದ್ಮಿ ಪಕ್ಷ
# ಮತ್ತು ರಾಜಕಾರಣದ ಶುದ್ಧೀಕರಣ

*– ಸುರೇಂದ್ರ ಕೌಲಗಿ*

**ಆ**ಮ್ ಆದ್ಮಿ ಪಕ್ಷ ೨೦೧೪ರ ಲೋಕಸಭಾ ಚುನಾವಣೆಯಲ್ಲಿ ರಾಜಕೀಯ ಕ್ಷೇತ್ರದಲ್ಲಿ ಅಲ್ಲೋಲ ಕಲ್ಲೋಲ ಉಂಟುಮಾಡಿದೆ. ಸಾರ್ವಜನಿಕ ಜೀವನದಲ್ಲಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ಕಳೆದ ಹದಿನೈದು ವರ್ಷಗಳಿಂದ ಬೇರೂರಿರುವ ಭ್ರಷ್ಟಾಚಾರವನ್ನು ಹೋಗಲಾಡಿಸುವ ಪ್ರಯತ್ನವನ್ನು ಮಾಡುವ ಏಕೈಕ ಉದ್ದೇಶ ತನ್ನದೆಂದು ಘೋಷಿಸುತ್ತಾ ಆಮ್ ಆದ್ಮಿ ಪಕ್ಷ ಉದಯಿಸಿದೆ.ಅದಕ್ಕೆ ನಗರ ಮತ್ತು ಪಟ್ಟಣಗಳಲ್ಲಿರುವ ಸುಶಿಕ್ಷಿತರ ಬೆಂಬಲ ಅಪಾರವಾಗಿ ದೊರಕಿದೆ. ಬದಲಾವಣೆ ಬಯಸುವ ಯುವಕರು ಅದರ ಕಡೆಗೆ ವಿಶೇಷವಾಗಿ ಆಕರ್ಷಿತರಾಗಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಮಾತ್ರ ಆ ಪಕ್ಷದ ಗಾಳಿ ಸ್ವಲ್ಪವೂ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಪ್ರವೇಶ ಮಾಡದ ಪಕ್ಷ ರಾಷ್ಟ್ರೀಯ ಪಕ್ಷ ಎನಿಸಿಕೊಳ್ಳುವುದಿಲ್ಲ. ಆಮ್ ಆದ್ಮಿ ಪಕ್ಷ ರಾಷ್ಟ್ರೀಯ ಪಕ್ಷವೆಂದು ಅನಿಸಿಕೊಳ್ಳಬೇಕಾದರೆ ದೇಶದ ಹಳ್ಳಿ ಹಳ್ಳಿಗಳನ್ನು ಮುಟ್ಟಬೇಕು ಮತ್ತು ಹಳ್ಳಿಗರ ವಿಶ್ವಾಸವನ್ನು ಗೆಲ್ಲಬೇಕು. ಈ ನಿಟ್ಟಿನಲ್ಲಿ ಆಮ್ ಆದ್ಮಿ ಪಕ್ಷ ಬಹಳಷ್ಟು ಬೆಳೆಯಬೇಕಿದೆ.ಅಲ್ಲಿಯ ವರೆಗೆ ಅದು ಬಲಿಷ್ಠ ರಾಜಕೀಯ ಪಕ್ಷವಾಗಿ ಹೊರ ಹೊಮ್ಮಲು ಸಾಧ್ಯವಾಗುವುದಿಲ್ಲ. ದೇಶದ ಎರಡು ಬಲಿಷ್ಠ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿ.ಜೆ.ಪಿ ಅಧಿಕಾರಕ್ಕೆ ಬರದಂತೆ ತಡೆಯುವುದು ಕೂಡ ಆಮ್ ಆದ್ಮಿ ಪಕ್ಷದ ಉದ್ದೇಶವಾಗಿದೆ. ರಾಜಕಾರಣದಲ್ಲಿ ಹೊಸ ನೀರು ಪ್ರವಹಿಸುವಂತೆ ಮಾಡಿದ ಶ್ರೇಯಸ್ಸು ಆಮ್ ಆದ್ಮಿ ಪಕ್ಷಕ್ಕೆ ಇದೆ. ಭ್ರಷ್ಟಾಚಾರ ಮುಕ್ತ ಆಡಳಿತ ಕೊಡುವ ಪಕ್ಷ ಅಧಿಕಾರಕ್ಕೆ ಬರುವಂತೆ ಆಗುವುದಾದರೆ ಆ ಪಕ್ಷಕ್ಕೆ ಎಲ್ಲ ಪ್ರೋತ್ಸಾಹ ಕೊಡುವುದು ಅಗತ್ಯ ಮತ್ತು ಆ ಪಕ್ಷವೇ ಅಧಿಕಾರ ಸೂತ್ರವನ್ನು ಹಿಡಿಯಲೆಂದು ಹಾರೈಸಬೇಕಾದುದು ಸೂಕ್ತವೇ ಆಗಿದೆ. ಭ್ರಷ್ಟಾಚಾರ ಮುಕ್ತ ಹಾಗೂ ಧರ್ಮ ನಿರಪೇಕ್ಷ ರಾಷ್ಟ್ರವನ್ನಾಗಿ ಭಾರತವನ್ನು ರೂಪಿಸುವುದಾದರೆ ಎಲ್ಲರೂ ಆ ಪಕ್ಷಕ್ಕೆ ಮತ ಹಾಕುವುದು ಧರ್ಮವೆಂದು ತಿಳಿಯಬೇಕಾಗುತ್ತದೆ.

ಆದರೆ ಆಮ್ ಆದ್ಮಿ ಪಕ್ಷದ ನೇತಾರರು ಅಂಥ ದೊಡ್ಡ ಹೊಣೆಯನ್ನು ಹೊರಲು ಸಮರ್ಥರಾಗಿದ್ದಾರೆಯೇ? ಹಾಗೆ ಅನಿಸುತ್ತಿಲ್ಲ. ಕೇಂದ್ರ ಆಡಳಿತ ಪ್ರದೇಶವಾದ ದಿಲ್ಲಿಯಲ್ಲಿ ಆ ಪಕ್ಷ ನಡೆಸಿದ ಅಲ್ಪಕಾಲೀನ ಸರ್ಕಾರದ ಆಡಳಿತ ವೈಖರಿಯ ಕಾರಣದಿಂದ ಅಂಥ ಅನಿಸಿಕೆ ಮೂಡಲು ಕಾರಣವಾಗುತ್ತಿದೆ. ಅದು ಎಷ್ಟೇ ರಾಜಕೀಯ ಲಾಭಾಂಶದಿಂದ ಕೂಡಿದ್ದಾಗಿದ್ದರೂ ಪಕ್ಷದ ಪ್ರಬುದ್ಧ ಬೆಳವಣಿಗೆಗೆ ಸಹಕಾರಿಯಾಗಲಿಲ್ಲವೆಂಬುದು ಸ್ಪಷ್ಟ.

ಶುದ್ಧ ರಾಜಕಾರಣದ ಮಾತನ್ನಾಡುವ ಆಮ್ ಆದ್ಮಿ ಪಕ್ಷ ತಾನು ಇಡುವ ಹೆಜ್ಜೆಯ ಶುದ್ಧತೆಯ ಬಗ್ಗೆಯೂ ಆಲೋಚಿಸಬೇಕಿತ್ತು. ಈಗ ಆ ಪಕ್ಷಕ್ಕೆ ಸೇರಿದವರೆಲ್ಲರೂ ಪ್ರಾಮಾಣಿಕರೂ,ಭ್ರಷ್ಟರಲ್ಲದವರೂ ಎಂದು ಹೇಳಲು ಸಾಧ್ಯವಿಲ್ಲ. ಅಧಿಕಾರ ಕೈಗೆ ಬಂದರೆ ಅವರು ಯಾರೂ ಭ್ರಷ್ಟರಾಗುವುದಿಲ್ಲ ಎಂಬ ನಂಬಿಕೆಯು ಇಲ್ಲ. ಪಕ್ಷಕ್ಕೆ ಸದಸ್ಯರನ್ನು ಮಾಡಿಕೊಳ್ಳುವಾಗಲೇ ಪ್ರತಿಯೊಬ್ಬರ ಚಾರಿತ್ರ್ಯ ಮತ್ತು ಅವರು ಮಾಡಿದ ಸಾರ್ವಜನಿಕ ಸೇವೆ ಮತ್ತು ಜೀವಾನುಭವ ಇತ್ಯಾದಿಗಳನ್ನು ಪರಿಶೀಲಿಸದೆ ಬಂದವರನ್ನೆಲ್ಲ ಸದಸ್ಯರನ್ನಾಗಿ ಮಾಡಿಕೊಳ್ಳುವುದು ತುಂಬಾ ಅಪಾಯಕಾರಿ. ಈಗಾಗಲೇ ಭ್ರಷ್ಟ ರಾಜಕಾರಣದ ವಿರುದ್ಧ ನ್ಯಾಯಾಲಯದಲ್ಲಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ಕೂಗು ಎದ್ದಿರುವುದು ಎಲ್ಲರಿಗೂ ವಿದಿತ. ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಪಕ್ಷಗಳ ಟಿಕೆಟ್ ಕೊಡುವಾಗ ಭ್ರಷ್ಟರಾದ ಉಮೇದುವಾರರಿಗೆ ಟಿಕೆಟ್ ಕೊಡುವ ಬಗ್ಗೆ ಅಥವಾ ಕೊಟ್ಟ ಬಗ್ಗೆ ಅಪಸ್ವರ ಕೇಳಿ ಬರುತ್ತಿದೆ. ಭ್ರಷ್ಟರಲ್ಲದ ಮತ್ತು ಸಚ್ಚಾರಿತ್ರ್ಯಉಳ್ಳವರಿಗೆ ಮಾತ್ರ ಮತವನ್ನು ಹಾಕಬೇಕೆಂಬ ತಿಳುವಳಿಕೆಯನ್ನು ಮತದಾರರಿಗೆ ಕೊಡಲಾಗುತ್ತಿದೆ. ಆಮ್ ಆದ್ಮಿ ಪಕ್ಷ ದೇಶದ ರಾಜಕಾರಣದಲ್ಲಿ ಪ್ರಬಲವಾದ ರಾಜಕೀಯ ಶಕ್ತಿಯಾಗಿ ಮುಂದುವರಿಯುವ ಮಹಾತ್ವಾಕಾಂಕ್ಷೆಯನ್ನು ಇಟ್ಟು ಕೊಂಡಿರುವುದರಿಂದ ಈಗ ಪಕ್ಷದ ಸದಸ್ಯರಾಗಿ ಸೇರುತ್ತಿರುವವರು ಯೋಗ್ಯರಾಗಿಲ್ಲದೇ ಹೋಗಿದ್ದರೆ ಪಕ್ಷ ತನ್ನ ಗುರಿಯನ್ನು ಮುಟ್ಟಲಾರದು. ಇಂಥ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದುದರಿಂದಲೇ ಅಣ್ಣಾ ಹಜಾರೆಯವರು ಕೇಜ್ರಿವಾಲರಿಂದ ದೂರ ಸರಿದರು. ಒಂದು ವೇಳೆ ಇಬ್ಬರೂ ಒಟ್ಟಾಗಿ ಇದ್ದು ನೇತೃತ್ವಕೊಟ್ಟಿದ್ದರೆ ಆಮ್ ಆದ್ಮಿ ಪಕ್ಷ ಇಂದಿಗಿಂತ ಹೆಚ್ಚು ಪ್ರಭಾವಶಾಲಿ ಮತ್ತು ಬಲಶಾಲಿಯಾಗಿರುತ್ತಿತ್ತು. ಆ ಪಕ್ಷದಲ್ಲಿ ಈಗ ಅರವಿಂದ ಕೇಜ್ರಿವಾಲರೊಬ್ಬರೆ ಪ್ರಮುಖವಾಗಿ ಕಾಣುತ್ತಿದ್ದಾರೆ.ಉಳಿದವರ ಪಾತ್ರ ಗೌಣವಾಗಿರುವಂತೆ ಇದೆ. ನಡೆಯಲಿರುವ ಚುನಾವಣೆಯ ಫಲಿತಾಂಶ ಬಂದ ಮೇಲೆ ಆಮ್ ಆದ್ಮಿ ಪಕ್ಷದಲ್ಲಿ ನೇತೃತ್ವದ ಧೃವೀಕರಣ ಆಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಚುನಾವಣೆಯಲ್ಲಿಯ ಜಯಾಪಜಯ ಪಕ್ಷದ ಮುಖಂಡರ ಚಿಂತನೆಯ ಮೇಲೆ ಬೇರೆ ಬೇರೆ ಪ್ರಕಾರದ ಪರಿಣಾಮವನ್ನು ಬೀರುವ ಸಾಧ್ಯತೆ ಇರುವುದರಿಂದ ಹಗ್ಗದ ಎಳೆದಾಟ ಪ್ರಾರಂಭವಾಗಿ ಸಮರ್ಥ ನಾಯಕತ್ವ ರೂಪುಗೊಳ್ಳದೆ ಇರಬಹುದು. ಒಂದು ವೇಳೆ ರೂಪುಗೊಂಡರು ಅಧಿಕಾರದ ದೆಸೆಯಿಂದಾಗಿ ಈಗಿನ ಎಲ್ಲ ಪಕ್ಷಗಳಲ್ಲಿ ಇದ್ದಂತೆ ಆಮ್ ಆದ್ಮಿ ಪಕ್ಷದಲ್ಲಿ ಭಿನ್ನತೆ ಉಂಟಾಗಬಹುದು.

ಆಮ್ ಆದ್ಮಿ ಪಕ್ಷ ಭ್ರಷ್ಟಾಚಾರದ ರಾಜಕಾರಣದ ಒಂದೇ ಅಂಶದ ಕಾರ್ಯಕ್ರಮವನ್ನು ಇಟ್ಟುಕೊಂಡು ಚುನಾಚಣೆ ಕಣಕ್ಕೆ ಇಳಿದಿದೆ. ಅದರ ಆರ್ಥಿಕ,ಕೈಗಾರಿಕಾ ಮತ್ತು ಖಾಸಗೀಕರಣದ ನೀತಿ ಇತ್ಯಾದಿಗಳು ಅಧಿಕೃತವಾಗಿ ಪ್ರಕಟಗೊಂಡಿಲ್ಲ. ಪಕ್ಷದ ಪ್ರಣಾಳಿಕೆ ಏನೆಂಬುದು ಜನತೆಗೆ ಗೊತ್ತಿಲ್ಲ. ಹೀಗೆ ಎಲ್ಲ

ಮಹತ್ವದ ವಿಷಯಗಳ ಬಗ್ಗೆ ಮುಗುಂ ಆಗಿ ಇದ್ದುಕೊಂಡು ಚುನಾವಣೆಯನ್ನು ಎದುರಿಸುವುದು ಎಷ್ಟರ ಮಟ್ಟಿಗೆ ಪ್ರಜಾತಾಂತ್ರಿಕವೆಂದು ಹೇಳಲು ಸಾಧ್ಯವಿಲ್ಲ. ಆ ಪಕ್ಷದ ನಾಯಕ ಕೇಜ್ರಿವಾಲ್ ಈವರೆಗೆ ಅವರು ಮಾಡಿದ ರಾಜಕೀಯ ಚಟುವಟಿಕೆಗಳನ್ನು ಗಮನಿಸಿದಾಗ ಅವರು ಓರ್ವ ಅರ್ನಾಕಿಸ್ಟ್(ದೊಂಬಿಕೋರ) ನಂತೆ ವರ್ತಿಸಿದ್ದಾರೆ. ರಾಜಕಾರಣದಲ್ಲಿ ದೊಂಬಿಕೋರನಂತೆ ವರ್ತಿಸುವುದು ಅಸಹಜವೇನಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧಿಯವರು ನಡೆಸಿದ ಅನೇಕ ಚಳುವಳಿಗಳು ದೊಂಬಿಯ ರೂಪದಲ್ಲಿ ಇದ್ದುದರಿಂದ ಅವರನ್ನು ಅರ್ನಾಕೇಸ್ಟ್ ಎಂದೇ ಇಂಗ್ಲೀಷರು ಬಣ್ಣಿಸಿದ್ದರು. ಈಗ ಸ್ವತಂತ್ರ ಭಾರತದಲ್ಲಿ ಅಂಥ ದೊಂಬಿತನ ಭಾರತೀಯರು ತಮಗೆ ತಾವೇ ಅರ್ಪಿಸಿಕೊಂಡ ಸಂವಿಧಾನದ ಶಿಸ್ತಿಗೆ ಭಂಗ ಉಂಟುಮಾಡುತ್ತದೆ. ಯಾವುದೇ ಪಕ್ಷವಾಗಲಿ ತನ್ನ ಸದಸ್ಯರನ್ನು ಮತ್ತು ಅಭಿಮಾನಿಗಳನ್ನು ಶಿಸ್ತಿನಲ್ಲಿ ಇಡಬೇಕಾದುದು ಮತ್ತು ಸಂವಿಧಾನ ಎಲ್ಲೆಯಲ್ಲೇ ಕಾರ್ಯನಿರ್ವಹಿಸಬೇಕಾದುದು ಅಗತ್ಯ. ಭ್ರಷ್ಟಾಚಾರದ ವಿರುದ್ಧ ಕೂಗು ಹಾಕುವುದು ಎಷ್ಟು ಮುಖ್ಯವೊ ಅದಕ್ಕಿಂತ ಹೆಚ್ಚು ಮುಖ್ಯವಾದುದು ಭ್ರಷ್ಟಾಚಾರದ ನಿರ್ಮೂಲನಕ್ಕೆ ಕೈಗೊಳ್ಳಲಾಗುವ ಕ್ರಮಗಳ ಶುದ್ಧತೆಯು ಮುಖ್ಯ. ಭ್ರಷ್ಟಾಚಾರದ ನಿರ್ಮೂಲನೆ ಆಮ್ ಆದ್ಮಿ ಪಕ್ಷದ ಗುರಿಯಾಗಿದ್ದರೆ ಅದು ಕೈಗೊಳ್ಳುವ ಕಾರ್ಯ ಸಾಧನಗಳು ಕೂಡ ಶುದ್ಧವಾಗಿರಬೇಕಾಗುತ್ತದೆ. ಸಾಧನ ಮತ್ತು ಸಾಧ್ಯಗಳ ಮಧ್ಯದ ಪಾವಿತ್ರತೆಯನ್ನು ಗಾಂಧೀಜಿ ತುಂಬ ಒತ್ತಿಯಾಗಿ ಪ್ರತಿಪಾದಿಸಿದ್ದಾರೆ.ದೇಶದಲ್ಲಿ ತಾಂಡವಾಡುತ್ತಿರುವ ಭ್ರಷ್ಟಾಚಾರ, ಅನ್ಯೆತಿಕತೆ ಮತ್ತು ಇತರ ಸಾಮಾಜಿಕ ಲೋಪದೋಷಗಳಿಗೆ ಕಾರಣವೆಂದರೆ ರಾಜಕೀಯ ಪಕ್ಷಗಳು ಕಲ್ಯಾಣಕಾರಿ ರಾಷ್ಟ್ರ ನಿರ್ಮಾಣಕ್ಕಾಗಿ ಕೈಗೊಂಡ ಅಶುದ್ಧ ಸಾಧನಗಳೇ ಕಾರಣವೆಂಬುದು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತಿದೆ. ಹಣದ ಪ್ರಾಬಲ್ಯದಿಂದ ರಾಜಕಾರಣ ನಡೆಸಿದ ಪರಿಣಾಮವಾಗಿಯೇ ಇಂದು ರಾಜಕಾರಣದಲ್ಲಿ ಹಾಗೂ ಆಡಳಿತದಲ್ಲಿ ಹಣದ ಪ್ರಾಬಲ್ಯವೇ ಹೆಚ್ಚಾಗಿರುವುದನ್ನು ಕಾಣುತ್ತೇವೆ. ಹಣದ ಬಲವಿಲ್ಲದೇ ಯಾವ ಸಾಮಾಜಿಕ ಹಿತವೂ ಸಾಧಿತವಾಗುವುದಿಲ್ಲ ಎಂಬ ದುಃಸ್ಥಿತಿಗೆ ಬಂದು ಮುಟ್ಟಿದ್ದೇವೆ. ಹಣವೇ ಸರ್ವಸ್ವ ಎಂಬ ಸ್ಥಿತಿಗೆ ಬಂದು ಮುಟ್ಟಿದ್ದೇವೆ.

ಆದ್ದರಿಂದ ಆಮ್ ಆದ್ಮಿ ಪಕ್ಷ ರಾಜಕಾರಣದ ಶುದ್ಧಿಗಾಗಿ ಪ್ರಯತ್ನಿಸುತ್ತಿರುವುದಾದರೆ ಅದು ತನ್ನ ಸಾಧನಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬೇಕಾದುದು ಅಗತ್ಯ. ರಾಜಕಾರಣ ಶುದ್ಧವಾಗಿರಬೇಕೆಂಬ ಗುರಿ ಮೆಚ್ಚತಕ್ಕದ್ದಾಗಿದೆ. ಆ ಪರಿಶುದ್ಧ ಗುರಿಗೆ ತಕ್ಕ ಪರಿಶುದ್ಧ ಸಾಧನಗಳು ಇಲ್ಲವಾದರೆ ಆಮ್ ಆದ್ಮಿ ಪಕ್ಷ ಎಲ್ಲ ರಾಜಕೀಯ ಪಕ್ಷಗಳಂತೆ ಒಂದು ಎಂಬ ಹೆಸರು ಪಡೆದು ಕ್ರಮೇಣ ಇತಿಹಾಸದ ಗರ್ಭದಲ್ಲಿ ಮುಚ್ಚಿಹೋಗಬಹುದು. ಇಂಥ ದುರ್ದೆಶೆ ಆಮ್ ಆದ್ಮಿ ಪಕ್ಷಕ್ಕೆ ಬರದಿರಲೆಂದು ಹಾರೈಸೋಣ.

* * *

# ಪ್ರಪಾತದ ಅಂಚಿನಲ್ಲಿಯ ಬದುಕು

*– ದೇವಿಂದರ್ ಶರ್ಮಾ*

**ರಾ**ಜಕಾರಣದ ಕ್ಷೇತ್ರದಲ್ಲಿ ಬದಲಾವಣೆ ಎಂಬುದು ಬಹು ಪ್ರಚಲಿತ ಶಬ್ಧವಾಗಿರುವಾಗ, ನಗರಗಳು ಬದಲಾಗುತ್ತಿರುವಾಗ, ಹಳ್ಳಿಗಳು ಮೊದಲಿನಂತೆ ಇಲ್ಲದಿರುವಾಗ, ಕೇವಲ ಕೆಲವೇ ಜನ ಶಿಕ್ಷಿತರ ಆದಾಯ ಹೆಚ್ಚುತ್ತಿರುವಾಗ ಗೋಪುರದ ಅಡಿಪಾಯದಲ್ಲಿರುವ ಬಡತನ ರೇಖೆಯ ಜನರಿಗೆ ಅನೇಕ ಭಾಗ್ಯಗಳ ಮಳೆ ಸುರುಯುತ್ತಿರುವಾಗ ಇತ್ತೀಚಿನ ವರ್ಷಗಳಲ್ಲಿ ಯಾವುದೇ ಪ್ರಕಾರದ ಬದಲಾವಣೆಯನ್ನು ಕಾಣದ ಭಾರತೀಯ ಸಮುದಾಯವಿದ್ದರೆ ಅದು ಅರವತ್ತು ಕೋಟಿಯಷ್ಟಿರುವ ರೈತ ಸಮುದಾಯ.

ಕಳೆದ ೧೭ವರ್ಷಗಳಲ್ಲಿ ೩ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.೬೫%ರಷ್ಟು ರೈತರು ಅತಿಯಾದ ಸಾಲದಲ್ಲಿ ಮುಳುಗಿದ್ದಾರೆ. ಅಂದರೆ ೪ಕೋಟಿಯಷ್ಟು ಜನ ರೈತರು ಅತಿಯಾದ ಸಾಲದಲ್ಲಿ ಮುಳುಗಿದ್ದಾರೆ. ಅತ್ಯಂತ ಕಡಿಮೆ ಆದಾಯ ಹೊಂದಿದ್ದರೂ ಅತ್ಯಂತ ದೊಡ್ಡ ಪ್ರಮಾಣದ ಜನ ಸಂಖ್ಯೆಗೆ ಬದುಕಿನ ದಾರಿ ಕೃಷಿ ಎಂಬುದೇ ನಂಬಲಾಗದ ಸಂಗತಿಯಾಗಿದೆ. ದೇಶದ ಒಟ್ಟು ಆಂತರಿಕ ಉತ್ಪಾದನೆ(ಜಿ.ಡಿ.ಪಿ)ಯಲ್ಲಿ ವ್ಯವಸಾಯದ ಭಾಗ ವರ್ಷೆ ವರ್ಷೇ ಕಡಿಮೆಯಾಗುತ್ತ ಬಂದು ಈಗ ಪ್ರತಿಶತ್ ೧೩ರಷ್ಟಿದೆ. ಅಂದರೆ ಕೃಷಿ ಕ್ಷೇತ್ರದಲ್ಲಿ ತೊಡಗಿದ ಅಷ್ಟು ದೊಡ್ಡ ಜನಸಂಖ್ಯೆ ಪ್ರಪಾತದ ಅಂಚಿನಲ್ಲಿ ಬದುಕುತ್ತಿದೆ.ವ್ಯವಸಾಯ ಆರ್ಥಿಕವಾಗಿ ಲಾಭದಾಯಕವಲ್ಲದೇ ಇರುವುದರಿಂದ ರೈತರಲ್ಲಿ ೬೦%ರಷ್ಟು ರೈತರು ಮಹಾತ್ಮ ಗಾಂಧೀ ಉದ್ಯೋಗ ಖಾತರಿ ಯೋಜನೆಯನ್ನು ಅವಲಂಬಿಸಿ ಜೀವನ ನಡೆಸುತ್ತಿರುವುದರಲ್ಲಿ ಯಾವ ಆಶ್ಚರ್ಯವಿಲ್ಲ.

ಬೇರೆ ಮಾತುಗಳಲ್ಲಿ ಹೇಳುವುದಾದರೆ ಯಾರು ದೇಶಕ್ಕಾಗಿ ಅನ್ನ ಬೆಳೆಯುತ್ತಾರೊ ಅವರೆ ಸ್ವತಃ ಹಸಿದುಕೊಂಡು ಮಲಗಬೇಕಾದ ಸ್ಥಿತಿಯಿದೆ. ಭಾರತೀಯ ವ್ಯವಸಾಯದ ದುರ್ದೆಶೆ ಎಷ್ಟಿದೆಯಂದರೆ ಕಳೆದ ಏಳು ವರ್ಷಗಳಲ್ಲಿ ೨೦೦೫ರಿಂದ ೨೦೧೨ರವರೆಗೆ ಮೂರು ಕೋಟಿ ಇಪ್ಪತ್ತು ಲಕ್ಷ ರೈತರು ವ್ಯವಸಾಯವನ್ನು ತೊರೆದಿದ್ದಾರೆ ಮತ್ತು ಪಟ್ಟಣಗಳಿಗೆ ಹೋಗಿ ದಾಸ್ಯವೃತ್ತಿಯ ಕೆಲಸವನ್ನು ಹುಡುಕುತ್ತಿದ್ದಾರೆ. ೨೦೧೧ರ ಜನಗಣತಿಯ ಪ್ರಕಾರ ಪ್ರತಿದಿನ ೨೫೦೦ರೈತರು ವ್ಯವಸಾಯವನ್ನು ತೊರೆಯುತ್ತಾರೆ. ಇನ್ನಿತರ ಸಮೀಕ್ಷೆಗಳ ಪ್ರಕಾರ ಅಂದಾಜು ೫೦,೦೦೦ಜನ ಹಳ್ಳಿಯಿಂದ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ.ಎನ್.ಎನ್.ಎಸ್.ಒ (ನ್ಯಾಷನಲ್ ಸ್ಯಾಂಪಲ್ ಸರ್ವೇ

ಆರ್ಗನೈಸೇಷನ್) ಅಧ್ಯಯನ ಪ್ರಕಾರ ೪೨%ರಷ್ಟು ರೈತರು ಪರ್ಯಾಯ ಉದ್ಯೋಗ ದೊರೆತರೆ ವ್ಯವಸಾಯವನ್ನು ತೊರೆಯಲು ಸಿದ್ಧರಿದ್ದಾರೆ. ಯಾರು ವ್ಯವಸಾಯವನ್ನು ತೊರೆಯುತ್ತಾರೊ ತಮ್ಮ ಸಣ್ಣ ಪ್ರಮಾಣದ ಇಳುವರಿ ಜಮೀನನ್ನು ಮತ್ತು ಮನೆ ಮಠಗಳನ್ನು ಮಾರಿ ಜೀವನಾಂಶಕ್ಕಾಗಿ ನಗರಗಳಿಗೆ ಭಾರವಾದ ಹೆಜ್ಜೆಯಿಂದ ಹೋಗುತ್ತಾರೊ ಅವರು ಅಲ್ಲಿ ರಿಕ್ಷಾ ಚಾಲಕರಾಗಿ ಅಥವಾ ಭರದಿಂದ ನಡೆಯುತ್ತಿರುವ ಕಟ್ಟಡಗಳ ನಿರ್ಮಾಣದ ಕೆಲಸದಲ್ಲಿ ದಿನಗೂಲಿಗಳಾಗಿ ಬದುಕುತ್ತಾರೆ. ಇದನ್ನೇ ಅರ್ಥಶಾಸ್ತ್ರಜ್ಞರು ಮತ್ತು ನೀತಿ ನಿರೂಪಕರು ಆರ್ಥಿಕ ಬೆಳವಣಿಗೆಯ ಕುರುಹು ಎಂದು ಹೇಳುತ್ತಾರೆ! ಭಾರತದ ರಿಸರ್ವ್ ಬ್ಯಾಂಕಿನ ಗವರ್ನರ್ ರಘುರಾಮ್ ರಾಜನ್ ಪ್ರಕಾರ ಜನರನ್ನು ವ್ಯವಸಾಯದಿಂದ ಹೊರ ಹೋಗುವಂತೆ ಮಾಡುವುದೇ ಅಂತಿಮ ಬೆಳವಣಿಗೆಯ ಗುರಿ ಎಂದು ಹೇಳುತ್ತಾರೆ. ವ್ಯವಸಾಯದಿಂದ ಹೊರಹಾಕಿ ಭೂರಹಿತ ಕಾರ್ಮಿಕರ ವರ್ಗಕ್ಕೆ ಸೇರಿಸುವುದೇ ಹೊಸ ಆರ್ಥಿಕ ಮಂತ್ರವಾಗಿದೆ.೭೦%ರಷ್ಟು ರೈತರು ವ್ಯವಸಾಯಕ್ಕೆ ಬೇಕಿಲ್ಲವೆಂದು ಪ್ರಧಾನಮಂತ್ರಿ ಮನಮೋಹನ ಸಿಂಗ್ ಹೇಳುತ್ತಾರೆ.ಅವರನ್ನು ಹೊರಗೆ ಕಳುಹಿಸಬೇಕು ಎಂದೂ ಹೇಳುತ್ತಾರೆ.ಭಾರತ ೪೦ ಕೋಟಿ ಜನಗಳನ್ನು ಹಳ್ಳಿಗಳಿಂದ ನಗರಗಳಿಗೆ ೨೦೧೫ನೇ ಇಸವಿ ವೇಳೆಗೆ ಹೋಗುವಂತೆ ಮಾಡಬೇಕೆಂದು ವಿಶ್ವಬ್ಯಾಂಕ್ ಹೇಳುತ್ತದೆ. ಇಷ್ಟು ಬೃಹತ್ ಜನ ಸಮುದಾಯವನ್ನು ಉಚ್ಚಾಟಿಸಿ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ಹೋಗುವಂತೆ ಮಾಡುವುದರ ಹಿಂದೆ ಇರುವ ಅರ್ಥಶಾಸ್ತ್ರದ ತರ್ಕ ನನಗೆ ಎಂದೂ ಅರ್ಥವಾಗಿಲ್ಲ.

ಕೃಷಿಯಿಂದ ಹೊರದೂಡಲ್ಪಡುತ್ತಿರುವ ಈ ಜನ ತಮ್ಮ ಹಳ್ಳಿಗಳಲ್ಲಿ ವ್ಯವಸಾಯ ಮಾಡುತ್ತ ಮತ್ತು ಅದಕ್ಕೆ ಸಂಬಂಧಿಸಿದ ವೃತ್ತಿಗಳನ್ನು ಮಾಡುತ್ತಾ ಹೇಗೋ ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆ.ಅವರು ಅರೆ ನಿರುದ್ಯೋಗಿಗಳು ಆಗಿರಬಹುದು.ಆದರೆ ಅವರನ್ನು ಹೊರಹಾಕಿ ಅವರು ಕಟ್ಟಡ ನಿರ್ಮಾಣದಂಥ ಕೆಲಸದಲ್ಲಿ ಅಗ್ಗದ ಕೂಲಿಗಳನ್ನಾಗಿ ಮಾಡುವುದು ಕೃಷಿಯ ಗಂಡಾಂತರವನ್ನು ಪರಿಹರಿಸುವ ಕ್ರಮವಲ್ಲ. ದೇಶದಲ್ಲಿ ವ್ಯವಸಾಯವೇ ಉದ್ಯೋಗವಕಾಶವನ್ನು ಗರಿಷ್ಠ ಪ್ರಮಾಣದಲ್ಲಿ ಕೊಡುವ ಕ್ಷೇತ್ರವಾಗಿದೆ. ವ್ಯವಸಾಯ ಆರ್ಥಿಕವಾಗಿ ದುರ್ಬಲಗೊಳ್ಳುವಂತೆ ಮಾಡುವುದರ ಮೂಲಕ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸುವ ಕೆಲಸ ಮಾಡುತ್ತಿದ್ದೇವೆ. ಯೋಜನಾ ಆಯೋಗದ ಇನ್ನೊಂದು ಅಧ್ಯಯನವನ್ನು ಗಮನಿಸಿರಿ. ದೇಶದ(ಜಿ.ಡಿ.ಪಿ)೨೦೦೫ರಿಂದ ೨೦೧೦ರ ಅವಧಿಯಲ್ಲಿ ೮% ರಿಂದ ೯% ರಷ್ಟು ಮಿತಿಯಲ್ಲಿದ್ದಾಗ ೧.೪೦ ಕೋಟಿ ರೈತರು ವ್ಯವಸಾಯವನ್ನು ತ್ಯಜಿಸಿದ್ದರು. ಹೀಗೆ ವ್ಯವಸಾಯವನ್ನು ತ್ಯಜಿಸಿ ಬಂದಂಥ ರೈತರಿಗೆ ಉತ್ಪಾದನಾ ಕ್ಷೇತ್ರದಲ್ಲಿ ಕೆಲಸ ಕೊಡಲಾಗುವುದೆಂದು ಸಾಮಾನ್ಯವಾಗಿ ತಿಳಿಯಲಾಗಿತ್ತು. ಆದರೆ ಉತ್ಪಾದಕ ಕ್ಷೇತ್ರದಲ್ಲಿ ಕೂಡ ಸಕಾರಾತ್ಮಕ ಬೆಳವಣಿಗೆ

ಇರಲಿಲ್ಲ. ೫೦ಲಕ್ಷ ಉದ್ಯೋಗವಕಾಶಗಳಿಗೆ ಸೀಮಿತಗೊಳಿಸಲಾಗಿತ್ತು. ಹಾಗಾದರೆ ಈ ಲಕ್ಷಾಂತರ ಜನರು ಎಲ್ಲಿಗೆ ಹೋದರು?

ಇಂಥ ಹತಾಶದಾಯಕ ಪರಿಸ್ಥಿತಿಯಲ್ಲಿ ಜನರನ್ನು ವ್ಯವಸಾಯದಿಂದ ಹೊರಹಾಕುವುದು ಯಾವುದೇ ದೃಷ್ಟಿಕೋನದಿಂದ ಆರ್ಥಿಕವಾಗಿಯಾಗಲಿ, ರಾಜಕೀಯವಾಗಿಯಾಗಲಿ ಅರ್ಥವಿಹೀನ. ಬಡ ರೈತರು ಇಬ್ಬಗೆಯ ಸಂಕಟವನ್ನು ಅನುಭವಿಸುತ್ತಾರೆ. ಅವರು ತಮ್ಮ ಸಣ್ಣ ಹಿಡುವಳಿಯನ್ನು ಮಾರಿ ನಗರಗಳಿಗೆ ವಲಸೆ ಹೋಗುತ್ತಾರೆ.ಆದರೆ ಆರ್ಥಿಕ ಬೆಳವಣಿಗೆ ನಿಧಾನವಾದರೆ ನಗರಗಳಲ್ಲಿಯ ದಿನಗೂಲಿ ಕೆಲಸಗಳು ಕಡಿಮೆಯಾದರೆ ಅವರು ಮತ್ತೆ ಹಳ್ಳಿಗೆ ಹಿಂದಿರುಗಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಆಗ ಅವರು ಕೆಲಸ ಮಾಡಬಹುದಾದ ಜಮೀನು ಇಲ್ಲದೇ ಇದ್ದಾಗ ನರೇಗಾ ಕೆಲಸಗಳ ಮೇಲೆ ಸಂಪೂರ್ಣವಾಗಿ ಅವಲಂಬಿಸಬೇಕಾಗುತ್ತದೆ ಅಥವಾ ಕೃಷಿ ಕಾರ್ಮಿಕನಾಗಬೇಕಾಗುತ್ತದೆ. ಕ್ರೈಸಿಲ್ ದ ಪ್ರಕಾರ ೨೦೧೨ ಮತ್ತು ೨೦೧೮ರ ಮಧ್ಯದಲ್ಲಿ ಒಂದೂವರೆ ಕೋಟಿ ಜನ ರೈತರು ನಗರಗಳಲ್ಲಿ ಕೆಲಸ ದೊರೆಯದೆ ಹಳ್ಳಿಗಳಿಗೆ ಹಿಂದಿರುಗುವರು.

ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ಅತಿದೊಡ್ಡ ಜನಸಂಖ್ಯೆ ಚಲಿಸುವಂತೆ ಮಾಡುವುದು ದೇಶದ ಆರ್ಥಿಕ ನೀತಿಗಳಲ್ಲಿ ಪ್ರತಿಫಲಿಸುತ್ತದೆ.ಬಹು ದೊಡ್ಡ ಜನಸಮುದಾಯದ ಬದಲಾವಣೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಣಾಮಗಳನ್ನು ಮುಖ್ಯವಾಹಿನಿಯ ಅರ್ಥಶಾಸ್ತ್ರಜ್ಞರು ಅರಿಯುತ್ತಿಲ್ಲವಲ್ಲ ಎಂಬ ಚಿಂತೆ ಬೇರೆಲ್ಲ ಚಿಂತೆಗಳಿಗಿಂತ ಹೆಚ್ಚಾಗಿದೆ.ಅನೇಕ ಅಧ್ಯಯನಗಳ ಪ್ರಕಾರ ೨೦೫೦ರ ವೇಳೆಗೆ ಸುಮಾರು ೫೦%ರಷ್ಟು ಜನಸಂಖ್ಯೆ ನಗರಗಳಲ್ಲಿ ವಾಸ ಮಾಡುತ್ತಾರೆ.ಇದರಿಂದಾಗಿ ನಗರಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸುವುದೊಂದು ಬಹು ದೊಡ್ಡ ಸಮಸ್ಯೆಯಾಗುತ್ತದೆ. ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವುದು ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಆರ್ಥಿಕ ಬೆಳವಣಿಗೆ ನಿರುದ್ಯೋಗ ಹೆಚ್ಚಳದ ಮೇಲೆ ಅವಲಂಬಿತವಾಗಿರುತ್ತದೆ.

ಯಾವುದಾದರೂ ಅರ್ಥವತ್ತಾದ ಬದಲಾವಣೆ ಆಗುವುದಿದ್ದರೆ ಅದು ಕೃಷಿ ಕ್ಷೇತ್ರದಲ್ಲಿಯೇ. ಆದರೆ ಗುತ್ತಿಗೆ ವ್ಯವಸಾಯ ಮತ್ತು ಕಂಪನಿ ಆಧಾರಿತ ವ್ಯವಸಾಯದ ಮೂಲಕ ಬದಲಾವಣೆ ನಿರೀಕ್ಷಿಸುತ್ತಿದ್ದರೆ ಮತ್ತು ಅದರೊಂದಿಗೆ ಭೂ ಸ್ವಾಧೀನ ಕ್ರಿಯೆಯನ್ನು ಮಾಡುತ್ತಾ ಹೋದರೆ ವ್ಯವಸಾಯ ಕ್ಷೇತ್ರದಲ್ಲಿ ಉಂಟಾಗಬಹುದಾದ ಭೀಕರ ದುರ್ದೆಶೆಯನ್ನು ತಡೆಯಲಾರಿರಿ. ಬದಲಾವಣೆ ಏನಿದ್ದರೂ ಹಳ್ಳಿಗಳಲ್ಲಿ ಲಾಭದಾಯಕ ಉದ್ಯೋಗಗಳನ್ನು ಸೃಷ್ಟಿಸುವ ಮೂಲಕ ಮತ್ತು ಸುಸ್ಥಿರ ವ್ಯವಸಾಯವನ್ನು ಪುನರುಜ್ಜೀವಿತಗೊಳಿಸುವುದರ ಮೂಲಕ ಮಾತ್ರವೇ ಸಾಧ್ಯ.

* * *

# ಗ್ರಾಮದಲ್ಲಿ ದೀಪಾವಳಿ ಯಾವಾಗ?

– *ವಿನೋಬಾ*

ನಮ್ಮ ಹಳ್ಳಿಯಲ್ಲಿ ಯಾವುದೇ ಒಬ್ಬ ಮನುಷ್ಯ ದುಃಖದಿಂದ ಇದ್ದರೆ ಅಲ್ಲಿಯವರೆಗೆ ನಾವು ದೀಪಾವಳಿ ಆಚರಿಸುವುದಿಲ್ಲ. ಎಲ್ಲರ ಹೃದಯದಲ್ಲಿ ಸಮಾಧಾನ ಸಂತೋಷ ಇರಬೇಕು.ಎಲ್ಲರಿಗೂ ಊಟ ಸಿಗಬೇಕು. ಎಲ್ಲರಿಗೂ ವಿದ್ಯೆ ಕೂಡ ಬೇಕು. ಎಲ್ಲರಿಗೂ ಪ್ರೇಮ ದೊರೆಯಬೇಕು.ಎಲ್ಲಿಯವರೆಗೆ ವ್ಯಕ್ತಿ ಆರೋಗ್ಯ ವಿಹೀನ, ಜ್ಞಾನ ವಿಹೀನ, ಪ್ರೀತಿ ವಿಹೀನ ಇರುತ್ತಾನೋ ಅಲ್ಲಿಯವರೆಗೆ ದೀಪಾವಳಿ ಆಗಲಾರದು.

ನಮ್ಮ ಮನೆಯಲ್ಲಿ ಐದು ಜನರಿದ್ದಾರೆ ಎಂದು ತಿಳಿಯಿರಿ. ಅವರಲ್ಲಿ ನಾಲ್ಕು ಜನ ಆರೋಗ್ಯವಂತರಿದ್ದಾರೆ. ಒಬ್ಬ ಮಾತ್ರ ಕಾಯಿಲೆಯಿಂದ ಇದ್ದಾನೆ. ಉಳಿದವರೆಲ್ಲ ಚೆನ್ನಾಗಿದ್ದಾರೆ, ಆದರೂ ಕೂಡ ಉಳಿದ ನಾಲ್ವರಿಗೆ ಸಮಾಧಾನವಿಲ್ಲ. ಅವರ ಮುಖದಲ್ಲಿ ಸುಖದ ಪ್ರಭೆ ಇಲ್ಲ, ದುಃಖದ ಛಾಯೆಯೇ ಕಾಣುತ್ತದೆ. ಸ್ವಂತದ ಆರೋಗ್ಯದ ಖುಷಿ ಅವರಿಗಿಲ್ಲ. ಬದಲಿಗೆ ಒಬ್ಬನ ಅನಾರೋಗ್ಯದ ದುಃಖವಿದೆ.

ಯಾವ ರೀತಿ ಇದು ಕುಟುಂಬದಲ್ಲಿದೆಯೋ ಅದೇ ರೀತಿ ಸಮಾಜದಲ್ಲಿ ಆದಾಗ ಅದು ಸಜೀವ ಸಮಾಜವೆಂದು ಕರೆಸಿಕೊಳ್ಳುವುದು. ಹಳ್ಳಿಯಲ್ಲಿ ಒಂದು ಪರಿವಾರ ದುಃಖದಲ್ಲಿದೆ, ಅದರ ಸ್ಪರ್ಶ ಹಳ್ಳಿಗೆ ಆಗದಿದ್ದರೆ ಹಳ್ಳಿ ಜೀವಂತವಾಗಿಲ್ಲವೆಂದು ತಿಳಿಯತಕ್ಕದ್ದು. ನಿಮ್ಮ ಕಾಲಿಗೆ ಚೇಳು ಕಚ್ಚಿದೆ ಎಂದು ತಿಳಿಯಿರಿ. ಶರೀರದ ಉಳಿದ ಭಾಗಕ್ಕೆ ನೋವು ಕಾಣಿಸದಿದ್ದರೆ ಕಣ್ಣು–ಕೈ–ಕಿವಿ–ಮನಸ್ಸು ಆ ನೋವಿನ ಬಗ್ಗೆ ಯಾವ ಆಲೋಚನೆಯನ್ನು ಮಾಡದೇ ನಿಶ್ಚಿಂತೆಯಿಂದ ಇದ್ದರೆ ಆ ಶರೀರವನ್ನು ಹೆಣವೆಂದು ಭಾವಿಸಲಾಗುವುದು. ಏಕೆಂದರೆ ಸಜೀವ ಶರೀರಕ್ಕೆ ಚೇಳು ಕಚ್ಚಿದರೆ ತಕ್ಷಣ ಕೈಗಳು ಕಾಲಿನ ಸಹಾಯಕ್ಕಾಗಿ ಹೋಗುತ್ತವೆ. ಇದು ಸಜೀವ ದೇಹದ ಲಕ್ಷಣ. ಅದೇ ರೀತಿ ಹಳ್ಳಿಯಲ್ಲಿ ಯಾರಾದರೂ ದುಃಖದಿಂದಿದ್ದು ಅದರ ಸ್ಪರ್ಶ ಹಳ್ಳಿಯವರಿಗೆ ಆಗದಿದ್ದರೆ ಆ ಹಳ್ಳಿಯನ್ನು ಹೆಣವೆಂದು ತಿಳಿಯಬೇಕು. ಯಾರಿಗಾದರೂ ದುಃಖವಿದೆಯೆಂದರೆ ಅದನ್ನು ದೂರ ಮಾಡಲು ಓಡಬೇಕು. ಅಕ್ಕಿಯ ಒಂದು ರಾಶಿಯಿದೆ. ಅದರಲ್ಲಿಂದ ಒಂದು ಸೇರು ಅಕ್ಕಿಯನ್ನು ತೆಗೆದು ಹಾಕಿದರೆ ಆ ರಾಶಿಯಲ್ಲಿ ಗುಳಿ ಉಂಟಾಗುವುದು ಆ ಗುಳಿಯನ್ನು ತುಂಬುವ ಪ್ರಯತ್ನವನ್ನು ಉಳಿದ ಅಕ್ಕಿ ಮಾಡುವುದಿಲ್ಲ. ಆ ಉಳಿದೆಲ್ಲ ಅಕ್ಕಿ ಹೃದಯ ಹೀನ ಮತ್ತು ಸಹಾನುಭೂತಿ ಶೂನ್ಯ ಆಗಿರುತ್ತದೆ. ತಮ್ಮ ಸಮಾಜದಲ್ಲಿ ಗುಂಡಿ ಬಿದ್ದಿದೆ, ಅದನ್ನು ತುಂಬಬೇಕೆಂದು ಅವು ಆಲೋಚಿಸುವುದಿಲ್ಲ. ಆ ರಾಶಿಯಲ್ಲಿ ೧೦–೨೦ ಮಹಾತ್ಮ ಅಕ್ಕಿ ಇರುತ್ತವೆ. ಅವು ಆ ಗುಳಿಯನ್ನು ತುಂಬುವ ಪ್ರಯತ್ನ ಮಾಡುತ್ತವೆ. ಸ್ವಾರ್ಥಿ ಅಕ್ಕಿ ಸುಮ್ಮನೇ ಕುಳಿತುಕೊಂಡಿರುತ್ತದೆ. ಆದರೆ ಬಾವಿಯಿಂದ ಬಕೆಟ್ ನೀರನ್ನು ಹೊರ ತೆಗೆದರೆ ನಾಲ್ಕು ಕಡೆಯಿಂದ ನೀರು ಓಡಿಬಂದು ಗುಳಿ ಬೀಳುವ ಮೊದಲೇ ಅದನ್ನು ತುಂಬಿ ಬಿಡುವುದು. ಮೊದಲು ಯಾವ ರೀತಿ ಇತ್ತೊ ಅದೇ ರೀತಿ ಆಯಿತು. ಸಜೀವ ಸಮಾಜ ಮತ್ತು ಸತ್ತ ಸಮಾಜದಲ್ಲಿ ಇದೇ ವ್ಯತ್ಯಾಸ. ಅಕ್ಕಿಯ ರಾಶಿ ಸತ್ತ ಸಮಾಜವಾದರೆ ಬಾವಿ ಸಜೀವ ಸಮಾಜ. ಸಜೀವ

ಸಮಾಜದಲ್ಲಿ ಒಬ್ಬ ಮನುಷ್ಯ ದುಃಖದಲ್ಲಿದ್ದರೂ ಅವನ ದುಃಖವನ್ನು ಹಳ್ಳಿಯ ಜನರು ಹಂಚಿಕೊಳ್ಳುವರು.

ಕುಟುಂಬದಲ್ಲಿ ಹೀಗೆಯೇ ನಡೆಯುತ್ತದೆ. ಏಕೆಂದರೆ ಕುಟುಂಬ ಸಜೀವ ಸಮಾಜ. ಕುಟುಂಬದಲ್ಲಿ ಪ್ರೀತಿಯಿದೆ ಮತ್ತು ಪ್ರೀತಿಯೇ ಮನುಷ್ಯನ ಪ್ರಾಣ. ಯಾವ ಮನುಷ್ಯನಲ್ಲಿ ಪ್ರೇಮವಿಲ್ಲವೊ ಆ ಮನುಷ್ಯನಲ್ಲಿ ಪ್ರಾಣವಿಲ್ಲ. ಅವನು ಸತ್ತನೆಂದೇ ತಿಳಿಯಿರಿ. ಸಮಾಜ ಪ್ರೇಮಮಯವಾದಾಗ ಯಾವುದೇ ಒಬ್ಬ ಮನುಷ್ಯ ದುಃಖದಲ್ಲಿದ್ದರೇ ಅದನ್ನು ದೂರ ಮಾಡಲು ಎಲ್ಲರೂ ಓಡುವರು. ಇಡೀ ಹಳ್ಳಿ ಒಂದು ಪರಿವಾರವೇ ಆಗುವುದು.

ನಮ್ಮ ಶರೀರ ಮತ್ತು ಕುಟುಂಬದ ಬಗ್ಗೆ ಯಾವ ಅನುರಾಗವಿದೆಯೋ ಅದು ಒಂದು ಒಳ್ಳೆಯ ಗುಣ, ಆದರೆ ಅದನ್ನು ಸೀಮಿತಗೊಳಿಸಬೇಡಿ, ವ್ಯಾಪಕಮಾಡಿ. ನನ್ನ ಉದ್ದೇಶ ವೈರಾಗ್ಯ ಪ್ರಚಾರದಲ್ಲಿ ಅನುರಾಗದ ವಿಸ್ತಾರ ಮಾಡಬಯಸುತ್ತೇನೆ. ನಮ್ಮದೊಂದು ದೊಡ್ಡ ಕುಟುಂಬವೆಂದು ತಿಳಿಯಬೇಕು. ಈವರೆಗೆ ನಾವು ನಮ್ಮದು ಚಿಕ್ಕ ಕುಟುಂಬವೆಂದು ತಿಳಿದುಬಿಟ್ಟಿದ್ದೇವೆ. ಈ ಕಾರಣವಾಗಿಯೇ ಸಂಕುಚಿತ ಆಗಿ ಬಿಟ್ಟಿದ್ದೇವೆ. ಅದರಿಂದಾಗಿ ಅನೇಕ ದುಃಖ ಉಂಟಾದವು.

ನನ್ನ ಈ ಮಾತನ್ನು ಒಪ್ಪುತ್ತಲೇ ಕೆಲವರು ಆಕ್ಷೇಪವೆತ್ತುತ್ತಾರೆ. ಅವರ ಅಭಿಪ್ರಾಯವೇನೆಂದರೇ"ದೊಡ್ಡ ಪರಿವಾರದಲ್ಲಿ ಮನುಷ್ಯನಿಗೆ ಕರ್ತವ್ಯದ ಪ್ರೇರಣೆ ದೊರೆಯುವುದಿಲ್ಲ. ಚಿಕ್ಕ ಕುಟುಂಬದಲ್ಲೇ ಮಾತ್ರ ಅದು ದೊರೆಯುತ್ತದೆ. ಒಂದು ವೇಳೆ ಇಡೀ ಭೂಮಿ ದೇಶದ್ದು ಹಾಗೂ ಸಂಪತ್ತು ಸಮಾಜದ್ದು ಎಂದು ಜನರಿಗೆ ಹೇಳಿದರೆ ನಿಮ್ಮ ವಿಚಾರವನ್ನು ಜನರು ಒಪ್ಪುವರು. ಆದರೂ ಕೂಡ ಆ ವಿಷಯ ಅವರಿಗೆ ಒಪ್ಪಿಗೆ ಆಗುವುದಿಲ್ಲ. ಅವರ ಮೇಲೆ ಆ ವಿಚಾರವನ್ನು ಹೇರಿದರೆ ಅವರಲ್ಲಿ ಕರ್ತವ್ಯದ ಭಾವನೆ ಇರುವುದಿಲ್ಲ". ಇದರ ಉತ್ತರವಿಷ್ಟೇ ಒಡೆತನದ ಸಂಬಂಧದಲ್ಲಿ ಈಶ್ವರನ ಹೆಸರಿಡಬೇಕೆಂದು ಬಯಸುತ್ತೇನೆ ಅದನ್ನು ಎಲ್ಲರು ಒಪ್ಪುತ್ತಾರೆ. ಈಶ್ವರನ ಪರವಾಗಿ ಹಳ್ಳಿಯನ್ನು ಕುಟುಂಬವನ್ನಾಗಿ ಮಾಡಲು ಬಯಸುತ್ತೇನೆ. ಚಿಕ್ಕ ಹಂತದಲ್ಲಿ ಉಪಾಸನೇ ಚೆನ್ನಾಗಿರುತ್ತದೆ ಮತ್ತು ಬಹು ದೊಡ್ಡ ವಿಸ್ತೃತ ಆಕಾರವಾದರೆ ಅದು ಅವ್ಯಕ್ತವಾಗುತ್ತದೆ. ಆದ್ದರಿಂದ ವಿಚಾರ ಮಾನ್ಯವಾದರೂ ಕೂಡ ಅದು ಕಾರ್ಯಗತವಾಗುವುದಿಲ್ಲ ಹಾಗೂ ಅದರಿಂದ ಪ್ರೇರಣೆ ಸಿಗುವುದಿಲ್ಲ. ಈ ಕಾರಣದಿಂದಲೇ ನಾನು ಇಡೀ ದೇಶದ ಒಡೆತನ ಅಥವಾ ಸರ್ಕಾರದ ಯಜಮಾನಿಕೆಯ ಮಾತನ್ನು ಆಡುವುದಿಲ್ಲ. ನಮ್ಮ ಕುಟುಂಬವನ್ನು ವ್ಯಾಪಕ ಮಾಡಬೇಕೆಂದು ನಾನು ಹೇಳುತ್ತೇನೆ ಆದರೆ ಅದು ಅತಿ ವ್ಯಾಪಕವೂ ಆಗಬಾರದು.ಸ್ವಲ್ಪದರಲ್ಲಿಯೇ ಅರ್ಥವಾಗುವಷ್ಟು ವ್ಯಾಪಕವಾಗಲಿ. ಸಮುದ್ರದಲ್ಲಿ ಹೆದರಿಕೆ ಉಂಟಾಗುತ್ತದೆ. ಅದರಲ್ಲಿ ಈಜುವ ಧೈರ್ಯ ಮನುಷ್ಯನಿಗೆ ಆಗುವುದಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಸಣ್ಣ ಕಾಲುವೆಯಲ್ಲೂ ಕೂಡ ಅಪಾಯವಿರುತ್ತದೆ ಎಂದು ಹೇಳ ಬಯಸುತ್ತೇನೆ. ಅದರಲ್ಲಿ ಅನೇಕ ಪ್ರಕಾರದ ಕೊಳೆಯಿರುತ್ತದೆ.ಆದ್ದರಿಂದ ನೀವು ಹಿಡಿದಿಟ್ಟುಕೊಂಡಿರುವ ಈ ಕಾಲುವೆಯಿಂದ ನಮ್ಮ ಉದ್ದೇಶ ಸಾಧಿತವಾಗುವುದಿಲ್ಲವೆಂದು ಹೇಳುತ್ತಿದ್ದೇನೆ. ನಾವು ಸಮುದ್ರದ ಕಡೆಗೂ ಹೋಗಬೇಕಿಲ್ಲ ಬದಲಿಗೆ ಸಣ್ಣದಾದ ಸುಂದರವಾದ ನದಿಯನ್ನು ಉಂಟುಮಾಡಬೇಕಿದೆ. ಇದುವರೆಗೆ ಆಗಿರುವ ಮಾನವತೆಯ ವಿಕಾಸ ಮತ್ತು ವಿಜ್ಞಾನದ

ವಿಕಾಸವನ್ನು ಗಮನದಲ್ಲಿರಿಸಿಕೊಂಡು ನೀವು ಇದುವರೆಗೆ ನಿಮ್ಮ ಕುಟುಂಬವನ್ನು ನಾಳೆಯಷ್ಟಕ್ಕೆ ಸೀಮಿತಗೊಳಿಸಿದ್ದಿರೊ ಅದನ್ನು ಗ್ರಾಮದವರೆಗೆ ವ್ಯಾಪಕ ಮಾಡಬೇಕು. ಈ ರೀತಿ ನಾನು ಚಿಕ್ಕ ಕಾಲುವೆಯನ್ನು ಬಿಟ್ಟು ಸಮುದ್ರದ ಕಡೆಗೂ ಹೋಗದೆ ಮಧ್ಯದ ಹಂತವನ್ನು ಒಪ್ಪುತ್ತೇನೆ. ಅದರಲ್ಲಿ ಸೇವಾ ಕ್ಷೇತ್ರ ಚೆನ್ನಾಗಿರುತ್ತದೆ ಮತ್ತು ಬುದ್ಧಿ ಕೂಡ ವ್ಯಾಪಕವಾಗುತ್ತದೆ.

ಹಳ್ಳಿಯನ್ನೇ ಕುಟುಂಬವನ್ನಾಗಿ ಮಾಡಬೇಕೆಂಬ ಕಲ್ಪನೆಯ ಅನುರಾಗ ಅವ್ಯಕ್ತವಾಗದಷ್ಟು ಇರಬೇಕು. ಇದೊಂದು ಮಧ್ಯಮ ಮಾರ್ಗವೆಂದು ನನ್ನ ಖಚಿತ ಅಭಿಪ್ರಾಯ.

ಅಣ್ಣ ತಮ್ಮಂದಿರಲ್ಲಿಯೇ ಹೊಂದಾಣಿಕೆ ಆಗದಿರುವಾಗ ನೀವು ಇಡೀ ಹಳ್ಳಿ ಒಂದಾಗಬೇಕೆಂಬ ಮಾತನ್ನು ಹೇಳುತ್ತಿದ್ದೀರಿ ಇದು ಹೇಗೆ ಸಾಧ್ಯ. ವಿನೋಬಾ ಉತ್ತರ ಕೊಡಲಾರದಂಥ ಪ್ರಶ್ನೆಯನ್ನು ಕೇಳಿದ್ದೇವೆಂದು ಪ್ರಶ್ನಿಸುವವರು ಅಂದುಕೊಳ್ಳುತ್ತಾರೆ. ಆದರೆ ನಾನು ಉತ್ತರಿಸುತ್ತೇನೆ.ಮನೆಯಲ್ಲಿ ಅಣ್ಣ ತಮ್ಮಂದಿರಿಗೆ ಹೊಂದಾಣಿಕೆ ಏಕೆ ಆಗುವುದಿಲ್ಲ ಎಂದರೆ ಎಲ್ಲಿ ಮೊದಲು ಪ್ರೇಮವಿತ್ತೋ ಅಲ್ಲಿ ಕಾನೂನು ಅಸ್ತಿತ್ವಕ್ಕೆ ಬಂದಿದೆ.ಕಾನೂನಿನಲ್ಲಿ ಅಣ್ಣನ ಹಕ್ಕು, ಅಕ್ಕನ ಹಕ್ಕು, ಹೆಂಡತಿಯ ಹಕ್ಕು ಇತ್ಯಾದಿಗಳು ಇರುತ್ತವೆ. ಒಂದು ವೇಳೆ ಕಾನೂನು ತನ್ನ ಮುಖ ತೋರಿಸದೆ ಹೋದರೆ ಮನೆಯಲ್ಲಿ ಪ್ರೇಮವೇ ಇರುತ್ತಿತ್ತು. ಇಲ್ಲಿ ಇನ್ನೊಂದು ಮಾತಿದೆ. ಎಲ್ಲಿ ವ್ಯಕ್ತಿಗತ ಒಡೆತನ ಅಳಿಸಿ ಹೋಗುತ್ತದೋ ಅಲ್ಲಿ ಕಾನೂನಿನ ಅಸ್ತಿತ್ವ ಇರುವುದಿಲ್ಲ. ಆಗ ಅಣ್ಣ ತಮ್ಮ ಎಂಬ ಸಂಬಂಧವಿರದೆ ಮಿತ್ರ–ಮಿತ್ರರ ಸಂಬಂಧ ಉಂಟಾಗುವುದು.ನಾನು ಹಳ್ಳಿಯನ್ನು ಮಿತ್ರ ಸಮಾಜವನ್ನಾಗಿ ಮಾಡ ಬಯಸುತ್ತೇನೆ. ಅಲ್ಲಿಂದ ಕಾನೂನನ್ನು ಓಡಿಸಬಯಸುತ್ತೇನೆ.

ಯುದಿಷ್ಠಿರ ಸ್ವರ್ಗಾರೋಹಣ ಮಾಡಿದ. ಭಾರತ ವರ್ಷವನ್ನು ನೆಗೆದು ಹರಿವರ್ಷದಲ್ಲಿ ಹೋದರು. ಹೋಗುವ ಸಮಯದಲ್ಲಿ ಅವನ ಪತ್ನಿ ಮತ್ತು ಅಣ್ಣ ತಮ್ಮಂದಿರು ಒಬ್ಬೊಬ್ಬರಾಗಿ ಬಿದ್ದು ಬಿಟ್ಟರು. ಜೊತೆಯಲ್ಲಿ ಕೊನೆಯವರೆಗೆ ಒಂದು ನಾಯಿಯಿತ್ತು. ಹಿಮಾಲಯದಲ್ಲಿ ನಾಯಿಗಳಿವೆ. ಅವುಗಳ ಶರೀರದ ಮೇಲೆ ಉಣ್ಣೆಯಿರುತ್ತದೆ. ಚಳಿಯಿಂದ ರಕ್ಷಿಸಿಕೊಳ್ಳುತ್ತವೆ. ಸ್ವರ್ಗ ಎಲ್ಲಿದೆ ಎಂಬುದು ಗೊತ್ತಿಲ್ಲ. ಅವನು ಸ್ವರ್ಗದ ಬಾಗಿಲನ್ನು ತಲುಪಿದ. ಸ್ವರ್ಗದ ಬಾಗಿಲು ತೆರೆಯಿತು. ಏಕೆಂದರೆ ಅವನು ಶ್ರೇಷ್ಠ ಧಾರ್ಮಿಕ' ಪುರುಷನಾಗಿದ್ದ. ನಾಯಿ ಚಪಲ ಜೀವಿ. ಯುಧಿಷ್ಠಿರನಿಗಿಂತ ಮೊದಲೇ ಅದು ಒಳಗೆ ಹೋಗಲಾರಂಭಿಸಿತು. ಅಲ್ಲಿಯ ಕಾವಲುಗಾರ ತಡೆದ ಮತ್ತು ನಾಯಿಗಳಿಗೆ ಸ್ವರ್ಗದಲ್ಲಿ ಪ್ರವೇಶವಿಲ್ಲವೆಂದು ಹೇಳಿದ ಆಗ ಯುದಿಷ್ಠಿರ ಇದಕ್ಕೆ ಪ್ರವೇಶವಿಲ್ಲದಿದ್ದರೆ ನಾನು ಕೂಡ ಪ್ರವೇಶ ಮಾಡುವುದಿಲ್ಲ ಎಂದು ಹೇಳಿದ. ನನ್ನ ಕೊನೆಯ ಜೊತೆಗಾರನನ್ನು ಬಿಟ್ಟು ಸ್ವರ್ಗವನ್ನು ಸ್ವೀಕರಿಸಲಾರೆ. ಇದೇ ಮಹಾಭಾರತದ ಸಂದೇಶ. ಎಲ್ಲರಿಗಿಂತ ಕೆಳಗಿನ ಹಂತದಲ್ಲಿರುವ ಜೊತೆಗಾರರನ್ನು ಮೇಲಕ್ಕೆ ಎತ್ತದಿದ್ದರೆ ಅದೊಂದು ನಮಗೆ ಬಹು ದೊಡ್ಡ ಅಭಿಶಾಪವಾಗುವುದು. ನಾವು ನಮ್ಮ ಅಂತಿಮ ಜೊತೆಗಾರರನ್ನು ಬಿಡುವುದಕ್ಕಾಗುವುದಿಲ್ಲ. ವಿದ್ಯೆಯಲ್ಲಿ, ಶಕ್ತಿಯಲ್ಲಿ, ಆರೋಗ್ಯದಲ್ಲಿ, ಸಂಪತ್ತಿನಲ್ಲಿ, ಜಮೀನಿನಲ್ಲಿ ಎಲ್ಲರಿಗಿಂತ ಕೆಳಗಿರುವವರನ್ನು ನಾವು ಕೈ ಬಿಡುವುದಿಲ್ಲ. ಅವರಿಗೆ ಭೂಮಿ ಕೊಟ್ಟು ಕುಟುಂಬದಲ್ಲಿ ಸೇರಿಸಿಕೊಳ್ಳುವೆವು.

ಮತ್ತು ಪ್ರೇಮದ ಸ್ನಾನ ಮಾಡಿಸುವೆವು. ಅವರು ನಮ್ಮ ಕುಟುಂಬದ ಒಂದು ಅಂಗವೆಂದು ಅವರಿಗೆ ವಿಶ್ವಾಸ ಕೊಡುವೆವು. ವಿಶ್ವಾಸವನ್ನು ಉಂಟುಮಾಡುವುದು, ಶ್ರದ್ಧೆಯನ್ನು ಉಂಟುಮಾಡುವುದು ನಮ್ಮ ಕರ್ತವ್ಯ. ಹೀಗೆ ಆದರೆ ಮಾತ್ರ ಭಾರತ ಉಳಿಯುವುದು. ಇಲ್ಲವಾದರೆ ಭಾರತ ಛಿನ್ನವಿಚ್ಛಿನ್ನವಾಗುವುದು. ಹಳ್ಳಿಯ ಎಲ್ಲ ಶಕ್ತಿಯನ್ನು ಒಟ್ಟುಗೂಡಿಸಬೇಕು. ಮುಖ್ಯವಾಗಿ ಹಳ್ಳಿಯ ಕೂಲಿಕಾರರು, ಮಾಲೀಕರು ಮತ್ತು ವ್ಯಾಪಾರಸ್ಥರು ಈ ಮೂವರು ಒಟ್ಟುಗೂಡಲಿ ಇವರಲ್ಲಿ ಅನ್ಯೋನ್ಯತೆ ಇಲ್ಲದಿದ್ದರೆ ಕೂಲಿಯವರಿಗೆ ಮಾಲೀಕರ ಹೊಲಗಳಲ್ಲಿ ಕೆಲಸ ಮಾಡುವುದರಲ್ಲಿ ಆಸಕ್ತಿ ಇರುವುದಿಲ್ಲ. ಈಗ ಯಾವ ರೀತಿ ನಡೆಯುತ್ತಿದೆಯೋ ಅದೇ ರೀತಿ ನಡೆಯುವುದು. ಕೂಲಿಯವ ಎಂಟು ಗಂಟೆ ಕೆಲಸಕ್ಕಾಗಿ ಬರುವನು ಹೆಚ್ಚೆಂದರೆ ನಾಲ್ಕು ಗಂಟೆಯ ಕೆಲಸ ಮಾಡುವನು. ಏನಾದರೂ ಉಸ್ತುವಾರಿ ಕಡಿಮೆಯಾದರೆ ಕೆಲಸ ನಿಲ್ಲಿಸುವನು. ಎತ್ತುಗಳ ಹಿಂದಿರುವವನು ನಿಂತರೆ ಅವು ನಿಲ್ಲುವವು. ಈ ರೀತಿ ನಡೆಯುತ್ತದೆ. ಹೊಲದಲ್ಲಿ ಕೆಲಸ ಮಾಡುವ ರುಚಿ ಬರದಿದ್ದರೆ ಅವನು ಉತ್ಸಾಹದಿಂದ ಕೆಲಸ ಮಾಡುವುದಿಲ್ಲ. ಇದು ಅವನ ಸ್ಥಿತಿ. ಅವನ ಬಳಿ ಕೆಲಸ ಮಾಡುವ ಶಕ್ತಿಯಿದೆ. ಕೆಲಸದಲ್ಲಿ ಕಳ್ಳತನ ಮಾಡುತ್ತಾನೆ. ಮಾಲೀಕನ ಬಳಿ ಬೆಲೆಯಿದೆ. ಅವನು ಬೆಲೆಯಲ್ಲಿ ಕಳ್ಳತನ ಮಾಡುತ್ತಾನೆ. ಒಬ್ಬ ಕೆಲಸಗಳ್ಳ ಮತ್ತೊಬ್ಬ ಬೆಲೆಗಳ್ಳ. ಇಬ್ಬರು ಸೇರಿದರೆ ಹೊಲದ ಕಥೆಯೇನು? ಒಂದು ಗಾಡಿಗೆ ಎರಡು ಎತ್ತನ್ನು ಹೂಡಲಾಗಿದೆ. ಎರಡು ಒಂದು ಇನ್ನೊಂದರ ಮೇಲೆ ಭಾರ ಹಾಕುತ್ತದೆ. ಎರಡರ ದೆಸೆಯಿಂದ ಗಾಡಿ ನಿಲ್ಲುತ್ತದೆ. ಎರಡನೇಯದರ ಮೇಲೆ ಭಾರ ಹಾಕುವ ಸೋಮಾರಿ ಎತ್ತಿನ ತರಹದ ಸ್ಥಿತಿ ನಮ್ಮ ದೇಶದ್ದಾಗಿದೆ.

ಇದಕ್ಕೆ ಕಾರಣವೇನು? ಏಕೆಂದರೆ ಕೆಲಸ ಮಾಡುವವರು ಬೇರೆಯಾಗಿದ್ದಾರೆ. ಒಬ್ಬನ ಬಳಿ ಶ್ರಮ ಶಕ್ತಿ ಮತ್ತೊಬ್ಬನ ಬಳಿ ಬುದ್ಧಿ ಶಕ್ತಿ ಮತ್ತು ಮೂರನೇಯದು ಧನಶಕ್ತಿ. ವ್ಯಾಪಾರಿಗಳ ಬಳಿ ಧನಶಕ್ತಿಯಿದೆ, ಅವರ ಸಹಕಾರ ಕೂಡ ಬೇಕಿದೆ ಅವರಿಗೆ ತಿಳುವಳಿಕೆ ಕೊಟ್ಟು ಅವರ ಸಹಕಾರ ಪಡೆಯಲು ಪ್ರಯತ್ನಿಸಬೇಕು. ವ್ಯಾಪಾರಸ್ಥರ ಬಳಿ ಕೇವಲ ಬಂಡವಾಳವಷ್ಟೇ ಅಲ್ಲ ಅವರಲ್ಲಿ ಯೋಜನಾ ಶಕ್ತಿಯಿದೆ ಮತ್ತು ದಯೆ ಧರ್ಮದ ಭಾವನೆ ಕೂಡ ಇದೆ ಅವರು ಸಾಲ ಕೊಡಬಲ್ಲರು, ಬಂಡವಾಳದ ವ್ಯವಸ್ಥೆ ಮಾಡಬಲ್ಲರು. ಜೊತೆಗೆ ಗ್ರಾಮ ಸಭೆಯಲ್ಲಿ ಸ್ವತಃ ಭಾಗವಹಿಸುವವರು ಹಣದ ಒಳ್ಳೆಯ ಉಪಯೋಗ ಹೇಗೆ ಆಗಬಲ್ಲದು ಎಂಬ ಬಗ್ಗೆ ಅವರ ಮಾರ್ಗದರ್ಶನವೂ ಸಿಗುವುದು, ನೇತೃತ್ವವೂ ಸಿಗುವುದು. ಈ ರೀತಿ ಹಳ್ಳಿ ಒಂದಾಗುವುದು. ಆಗ ಕೆಲಸ ಸಾಧಿತವಾಗುವುದು. ಮಾಲೀಕ, ಕೂಲಿಯವ, ವ್ಯಾಪಾರಸ್ಥರು – ಮೂವರು ಒಂದಾಗಲಿ ಇಂಥ ಟಿಪಾಯಿಯನ್ನು ತಯಾರಿಸಬೇಕಾಗುವುದು.

ಎಲ್ಲರೂ ಪ್ರೇಮದಿಂದ ಇದ್ದರೆ ಜಗಳ ಕಡಿಮೆಯಾಗುವುದು ವಕೀಲರ ಹಿಡಿತದಿಂದ ಮುಕ್ತರಾಗುವರು. ಗ್ರಾಮಸ್ಥರೆಲ್ಲಾ ಸೇರಿ ವ್ಯವಸ್ಥೆ ಮಾಡಿಕೊಳ್ಳುವರು. ರಾತ್ರಿಯಲ್ಲಿ ಒಬ್ಬರ ಎತ್ತು ಇನ್ನೊಬ್ಬರ ಹೊಲಕ್ಕೆ ಹೋಗದಂತೆ ತಡೆಯಲು ಎಲ್ಲರು ಎಚ್ಚರ ಇರಬೇಕಾಗಿಲ್ಲ. ಸರದಿಯಂತೆ ಪ್ರತಿಯೊಬ್ಬ ವ್ಯಕ್ತಿ ನಿಯುಕ್ತಗೊಳ್ಳುವನು. ತಮ್ಮ ತಮ್ಮ ಪಾಳಿಯಂತೆ ಕೆಲಸ ಮಾಡುವರು ಉಳಿದ ಜನ ಸುಖವಾಗಿ ನಿದ್ರಿಸುವರು.

# ಗಾಂಧೀವಾದದ ಪರಿಮಳ ; ನೀಲತ್ತಹಳ್ಳಿ ಕಸ್ತೂರಿ

*- ಡಿ.ವಿ.ಪ್ರಹ್ಲಾದ್*

**ಬು**ದ್ಧನ ಪ್ರಕಾರ ಒಬ್ಬ ಜ್ಞಾನಿಯಾದವನು ಈ ಜಗತ್ತಿನಲ್ಲಿ ಒಂದು ಜೇನ್ನೊಣದ ಹಾಗೆ ಬದುಕುತ್ತಾನೆ. ಜಗತ್ತಿನ ಸೌಂದರ್ಯವನ್ನೂ, ಸುಗಂಧವನ್ನೂ ಕೆಡಿಸದೆ ಸದ್ದಿಲ್ಲದೇ ಇದ್ದು ಮೌನವಾಗಿಯೇ ಸಾಗುತ್ತಾನೆ.ಬೇಕಾದಷ್ಟನ್ನು ಮಾತ್ರ ಪಡೆದುಕೊಂಡು ಸರಳವಾಗಿ ಬದುಕುತ್ತಾನೆ. ನಾಳೆಗಳಿಗಾಗಿ ಏನನ್ನೂ ಕೂಡಿಡುವುದಿಲ್ಲ. ಜೆನ್ನೊಣ ನಾಳೆಗಾಗಿ ಏನನ್ನೂ ಸಂಗ್ರಹಿಸುವುದಿಲ್ಲ. ಅದಕ್ಕೇನಿದ್ದರೂ ಇವತ್ತಿಗಷ್ಟೇ ಸಾಕು–ಈ ಕ್ಷಣದ ಬದುಕು.

ಇತ್ತೀಚೆಗೆ ನಮ್ಮನ್ನಗಲಿದ ಗಾಂಧಿವಾದದ ಪರಿಮಳದ ನೀಲತ್ತಹಳ್ಳಿ ಕಸ್ತೂರಿಯವರನ್ನು ನೆನಪಿಸಿಕೊಂಡಾಗ ಬುದ್ಧ ಹೇಳಿದ ಜೇನಿನ ಹೋಲಿಕೆ ಅವರಂಥವರಿಗೆ ಹೊಂದುತ್ತದೆ. ಈ ಗಾಂಧಿ ಎನ್ನುವ ಆಯಸ್ಕಾಂತ ಅದೆಷ್ಟು ಜನಗಳನ್ನು,ತಲೆಮಾರುಗಳನ್ನು ತನ್ನ ತೆಕ್ಕೆಯಲ್ಲಿಟ್ಟುಕೊಂಡು ಕಾಂತಮಯವಾಗಿಸಿತು ಅಂತ ಆಲೋಚಿಸುವಾಗ ವಿಸ್ಮಯವಾಗುತ್ತದೆ.

ನಿಮ್ಮಂಥ ಯುವಕರು ಒಂದೆಡೆ ಸೇರಿ ಒಟ್ಟಾಗಿ ಬೀಡಿ ಸೇದಿದರೂ ಸಮಾಜಕ್ಕೆ ಉಪಯುಕ್ತವಾದ ಹಾಗೆ ಅಂತ ಶರ್ಮಾಜಿ ಹೇಳುತ್ತಿದ್ದರು ಅಂತ ನಮ್ಮೊಂದಿಗಿನ ತಮ್ಮ ಮೊದಲ ಭೇಟಿಯಲ್ಲೇ ಅವರು ತಮ್ಮ ಗುರು ಸಿದ್ಧವನಹಳ್ಳಿ ಕೃಷ್ಣಶರ್ಮರ ಬಗ್ಗೆಯೂ ಸ್ಮರಿಸಿದ್ದರು. ಅದು ಡಿವಿಜಿ ಜನ್ಮಶತಾಬ್ದಿ ವರ್ಷ. ಸಂಚಯದ ಮೊದಲ ದೊಡ್ಡ ಕಾರ್ಯಕ್ರಮ. ಗಾಂಧಿ ಸಾಹಿತ್ಯ ಸಂಘದಲ್ಲಿ ಮಂಕುತ್ತಿಮ್ಮನ ಕಗ್ಗ ಕುರಿತ ಉಪನ್ಯಾಸಕ್ಕೆ ಅಧ್ಯಕ್ಷತೆ ನಿಮ್ಮದೇ ಅಂದೆವು. ಕಾರ್ಯಕ್ರಮದ ದಿವಸ ನಮ್ಮ ಹಾಗೇ ಅವರು ಎಲ್ಲರಿಗಿಂತ ಮುಂಚೆ ಬಂದು ಕುರ್ಚಿಗಳ ಧೂಳು ಒರೆಸಿ, ನಮ್ಮ ವಯಸ್ಸಿನವರ ಹಾಗೇ ವರ್ತಿಸಿದ್ದರು.ಚಿಕ್ಕ ಹುಡುಗರ ಹಾಗೆ ಒಂದರ ಹಿಂದೆ ಮತ್ತೊಂದು ಬಿಸ್ಕೇಟು ತಿಂದಿದ್ದರು. ನಮ್ಮ ಕಾಲೇಜುಗಳಲ್ಲಿ ಏರು ಹುಬ್ಬಿನ ಅತಿಥಿಗಳನ್ನೇ ಕಂಡಿದ್ದ ನಮಗೆ ಇವರ ಸರಳತೆ ಅರ್ಥವಾಗದೇ ಗೊಂದಲವಾಗಿತ್ತು. ಆಶ್ಚರ್ಯವೂ ಆಗಿತ್ತು.

ನಾವುಗಳು ಜೊತೆಗೂಡುವ ಕಾಲಕ್ಕೆ ಗಾಂಧಿವಾದಿಗಳಿಗೂ, ಗಾಂಧಿ ಸಾಹಿತ್ಯ ಸಂಘಕ್ಕೂ ಸಾಕಷ್ಟು ವಯಸ್ಸಾಗಿತ್ತು. ನಮ್ಮ ಉದ್ದೇಶಗಳನ್ನ ಅದರ ಅಸಲಿಯತ್ತನ್ನ ಗುರುತಿಸಿದ ಈ ಹಿರಿಯರು ನಮ್ಮ ಎಲ್ಲ ಚಟುವಟಿಕೆಗಳಿಗೂ ಬೆಂಬಲವಾಗಿ ನಿಂತಿದ್ದು ಅವರ ದೊಡ್ಡತನದ ಗುರುತು. ಕೊಂಚ ಕೊಂಚವಾಗಿ ಗಾಂಧಿತನ ಈ ಹಿರಿಯರ ನಡೆನುಡಿಗಳ ಮೂಲಕ ಅವರ ವರ್ತನೆಗಳ ಮೂಲಕ ನಮ್ಮನ್ನೂ ಪ್ರಭಾವಿಸುತ್ತಿತ್ತು. ಅಮೂಲ್ಯವಾದ ಪುಸ್ತಕಗಳ ಪುರಾತನ ಲೈಬ್ರೆರಿ ಅದರ ಜೊತೆಗೇ ಸಾಗುತ್ತಿದ್ದ ಗಾಂಧಿ ಸಾಹಿತ್ಯ ಸಂಘದ ಬೇರೆ ಬೇರೆ ಕಾರ್ಯಕ್ರಮಗಳು, ಗಮಕ ರೂಪಕಗಳಿಗೆ

ನಡೆಯುತ್ತಿದ್ದ ಅಭ್ಯಾಸ ನಮ್ಮಗಳ ಕಿವಿಗಳಿಗೂ ತಲುಪುತ್ತಾ ಹಳಗನ್ನಡದ ಕಾವ್ಯಗಳು ತನ್ನ ಛಾಪು ಮೂಡಿಸಿತ್ತು. ಗಾಂಧಿ ಸಾಹಿತ್ಯ ಸಂಘ ಒಂದು ದೊಡ್ಡ ಮರದ ಹಾಗೆ ಅನೇಕ ಚಟುವಟಿಕೆಗಳ ಆಶ್ರಯ ತಾಣವಾಗಿತ್ತು. ಮೇಲಿನ ಪ್ರಕೃತಿ ಜೀವನ ಕೇಂದ್ರ, ಬುದ್ಧಿಮಾಂದ್ಯ ಮಕ್ಕಳ ಶಾಲೆ: ಬಾಲಮನೋವಿಕಾಸ ಕೇಂದ್ರ, ಆರಂಭ ಕಾಲದ ಚಿತ್ರಕಲಾ ಪರಿಷತ್ತು,ಗಮಕ ಪರಿಷತ್ತು, ಮಾಸ್ತಿಯವರ ಜೀವನ ಪತ್ರಿಕೆಯ ಕೊನೆಯ ಘಟ್ಟ, ರಾಜರತ್ನಂ ಅವರ ಮಕ್ಕಳ ವಾರಾಂತ್ಯ ತರಗತಿಗಳು, ವಿವಿಧ ವಿಷಯ ಕುರಿತ ಉಪನ್ಯಾಸಗಳು,ಎಂಭತ್ತರ ದಶಕದ ಕೊನೆಕೊನೆಯಲ್ಲಿ ಸೇರಿದ ಸಂಚಯ, ಪ್ರತಿಭಾ ಕಲಾವಿದರ ಸಂಘ(ಈಗಿನ ಅಭಿನವ)ಗೆಳೆಯ ಶಾಂತರಾಜರ ಚಿತ್ರಕಲೆ ತರಗತಿಗಳು ಮತ್ತು ರಘುನಾಥರ ಸಾಮಾಜಿಕ ಚಟುವಟಿಕೆಗಳು, ಎಂ.ಎನ್.ಚಂದ್ರಶೇಖರ ಅವರ ಸಂಸ್ಕೃತ ತರಗತಿಗಳು ಮಲ್ಲೇಶ್ವರದ ಎಲ್ಲಾ ಬಹುಮುಖಿತನ ಇಲ್ಲಿ ಮೇಳವಿಸಿತ್ತು. ಅವು ತಂತಮ್ಮ ಕಾರ್ಯ ನಡೆಸಿ ತಮ್ಮ ನೆಲೆಗೋ ಅಥವಾ ಕಾಲದ ಅನಂತದೊಳಗೋ ಸೇರುತ್ತಿದ್ದವು. ಆದರೆ ಗಾಂಧಿ ಸಂಘ ಮಾತ್ರ ತನ್ನ ಪಾಡಿಗೆ ತಾನು ಇವೆಲ್ಲವುಗಳ ಆಶ್ರಯದಾತೆಯಾಗಿ ಇದೆ. ಇಲ್ಲ ಯಾರೂ ದೊಡ್ಡವರಲ್ಲ ಚಿಕ್ಕವರೂ ಅಲ್ಲ ಎಲ್ಲರೂ ಕೆಲಸಗಾರರೇ ಅನ್ನುವ ನಂಬಿಕೆಯಿಂದ ಬದುಕಿದ್ದ ಈ ಹಿರಿಯರು ಸದ್ದಿಲ್ಲದೆ ಸರಳವಾಗಿ ಕೆಲಸ ಮಾಡುವುದನ್ನು ತಮ್ಮ ಕಿರಿಯರಿಗೆ ತಮ್ಮ ಕೃತಿಯಿಂದ ಕಲಿಸುತ್ತಿದ್ದರು.ಹೇಗೆಂದರೆ ಕಲಿತೆನೆಂಬುದು ನಮ್ಮ ಅರಿವಿಗೂ ಬಾರದ ಹಾಗೆ!

ಪ್ರತಿದಿನ ನಾವು ಗೆಳೆಯರು ಕೂಡುವ ತಾಣವಾಗಿದ್ದ, ಕೇಂದ್ರ ಬಿಂದುವಾಗಿದ್ದ ಗಾಂಧಿ ಸಾಹಿತ್ಯ ಸಂಘದಲ್ಲಿ ಹರಟೆಗೆ ಕೊರತೆ ಇರಲಿಲ್ಲ.ನಮ್ಮ ಗೆಳೆಯರು ಸಿಕ್ಕರೆ ಉಂಟು ಇಲ್ಲದಿದ್ದರೆ ಸದಾ ಇರುತ್ತಿದ್ದ ಕಸ್ತೂರಿ ಅವರಂತೂ ಯಾವಾಗಲೂ ನಮ್ಮ ಜೊತೆಗೆ ಜಗತ್ತಿನ ಯಾವುದೇ ವಿಷಯ ಕುರಿತು ಹಂಚಿಕೊಳ್ಳಲು ಸದಾ ಸಿದ್ಧ. ವಯೋ ಸಹಜವಾಗಿ ಇವರು ಎಷ್ಟೊಂದು ಮಾತಾಡುತ್ತಾರೆ, ಹಳೆ ನೆನಪುಗಳಲ್ಲಿ ಮುಳುಗುತ್ತಾರೆ ಅಂತ ಅನ್ನಿಸುತ್ತಿದ್ದರೂ ಆ ಹರಟೆಗಳು ನಮ್ಮನ್ನು ಎಷ್ಟು ಸಂಪನ್ನಗೊಳಿಸಿತು ಅಂತ ಈಗ ತುಂಬಿ ಬರುತ್ತದೆ. ಸಾಮಾನ್ಯ ಹರಟೆಯಲ್ಲಿ ತುಂಬಾ ಮಾತಾಡುತ್ತಿದ್ದ ಕಸ್ತೂರಿಯವರು ಭಾಷಣದಲ್ಲಿ ಅದರ ಔಚಿತ್ಯ ತುಂಬಾ ಚೆನ್ನಾಗಿ ಕಾಪಾಡುತ್ತಿದ್ದರು. ಕೇಳುವವರಿಗೆ ಹಿತವಾಗುವ ಹಾಗೆ ಅದರಲ್ಲೂ ಯುವಕರಿಗೆ ಕೊಂಚ ತಮಾಷೆಯಾಗಿ ಸರಳವಾಗಿ ಆದರೆ ಹೇಳಬೇಕಾದಷ್ಟನ್ನ ಯಾವ ಆಡಂಬರವೂ ಇಲ್ಲದೆ ಎಷ್ಟು ಚೆನ್ನಾಗಿ ಮಾತಾಡಿದರು ಅಂತನ್ನಿಸುವ ಹಾಗೆ ಮಾತಾಡಿ ಮುಗಿಸುತ್ತಿದ್ದರು.

ಅದು ತೊಂಭತ್ತೆರಡರ ಬಾಬ್ರಿ ಮಸೀದಿ ಘಟನೆಯಾದ ಹೊಸದು; ನಮ್ಮ ಗುಂಪಿಗೇಕೆ ಇಡೀ ದೇಶಕ್ಕೇ ಅದೊಂದು ಬಹು ಚರ್ಚೆಯ ವಿಷಯ ಕಸ್ತೂರಿಯವರು mob mentality ಕುರಿತು ಹೇಳುತ್ತಾ ಗುಂಪಿನ ವಿವೇಕ ಮಂಕಾಗಿ ಹೀಗಾಗಿ ಬಿಡುತ್ತೆ ಅನ್ನುವ ಮಾತು ವಿಷಾದದಿಂದಗೇ ಹೇಳಿದ್ದರು.ನನ್ನ ಗೆಳೆಯ ಅವರ ಮಾತುಗಳನ್ನು ಅಪಾರ್ಥ ಮಾಡಿಕೊಂಡು ಹುಚ್ಚುಚ್ಚಾಗಿ ಎಗರಾಡಿದ್ದು ನೆನಪಾಗುತ್ತದೆ.

ಮತ್ತೊಮ್ಮೆ 'ಭೂಮಿದಿನ'ದ ಕಾರ್ಯಕ್ರಮ, ಅವತ್ತು ನಾವು ಗೆಳೆಯರು ರಾತ್ರಿ ಇಡೀ ಒಂದು ಬೃಹತ್ ಪೇಪರ್‌ಗ್ಲೋಬ್ ನಿರ್ಮಿಸಿ ಅದನ್ನು ಮಲ್ಲೇಶ್ವರದಲ್ಲಿ ಮೆರವಣಿಗೆ ಮಾಡುವ ಇರಾದೆ. ಕಸ್ತೂರಿಗಳು ಚಿಕ್ಕ ಹುಡುಗರ ಹಾಗೆ ತಮ್ಮ

ದಟ್ಟಿ ಪಂಚೆ ಎತ್ತಿಕಟ್ಟಿ ಆ ಗ್ಲೋಬು ಹೆಗಲಿಗೆ ಹೊತ್ತು ನಮ್ಮ ಮೆರವಣಿಗೆಯ ಭಾಗವಾಗಿದ್ದು ನೆನಪಾದಾಗ ಅವರ ಸರಳತೆಯ ಬಗ್ಗೆ ಗೌರವ ಉಕ್ಕುತ್ತದೆ. ಬೀದಿ ನಾಟಕ, ವಿಚಾರ ಸಂಕಿರಣ, ಪುಸ್ತಕ, ಪತ್ರಿಕೆ ಏನು ಮಾಡಿದರೂ ನಿಮ್ಮ ಜೊತೆಗೆ ನಾನು ಎನ್ನುವುದು ಅವರ ಮಂತ್ರ. ಪರಿಸರವಾದ, ಗಾಂಧೀತತ್ವಗಳನ್ನು ಆಧರಿಸಿದ ಸಂಘಟನೆಗಳು, ಕಾರ್ಯಕ್ರಮಗಳೊಡನೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಲ್ಲದೆ ನಮ್ಮನ್ನೂ ತೊಡಗಿಸುತ್ತಿದ್ದುದು ವಿಶೇಷ. ಪ್ರತಿ ಗಾಂಧಿ ಜಯಂತಿಗೂ ಯುವಕರ ಕಾರ್ಯಕ್ರಮವೊಂದಕ್ಕೆ ನಮ್ಮ ಪಾಲೂ ಇರುತ್ತಿತ್ತು.

ಒಬ್ಬ ಮನುಷ್ಯ ಅರವತ್ತು ವರ್ಷಗಳ ಕಾಲ ತನ್ನ ಬದುಕಿನ ಬಹುಮುಖ್ಯ ಚಟುವಟಿಕೆಯಾಗಿ ಯಾವುದನ್ನೇ ನಡೆಸುವುದೂ ಸುಲಭವಲ್ಲ. ಕೃಷ್ಣಶರ್ಮರ ಶಿಷ್ಯ ಕಸ್ತೂರಿಯವರು ತಮ್ಮ ಜೀವಿತದ ಅರವತ್ತು ವರ್ಷ,ಪ್ರತಿ ದಿನ ಸಂಜೆ ಗಾಂಧಿ ಸಾಹಿತ್ಯ ಸಂಘಕ್ಕೆ, ಅದರ ಕೆಲಸಕ್ಕೆ ವ್ರತಧಾರಿಯಂತೆ ನಡೆದುಕೊಂಡರು. ಅವರ ಮಗಳು ಅಂದುಕೊಂಡದ್ದು ನಿಜ; ಕಸ್ತೂರಿ ಸಂಘಕ್ಕೆ ಬರೀ ಚಪ್ಪಲೀ ಸವೆಸಲಿಲ್ಲ ದಾರುಯನ್ನೇ ಸವೆಸಿದರು. ಚಳಿ, ಮಳೆ, ಅನಾರೋಗ್ಯ ಯಾವುದೂ ಅವರ ಒಳಗಿನ ಕೆಲಸಗಾರನನ್ನ ಕುಗ್ಗಿಸಲಿಲ್ಲ. ಅಂದುಕೊಂಡ ಕೆಲಸಗಳನ್ನ ಮಾಡಿ ಮುಗಿಸಬೇಕೆನ್ನುವ ಚಡಪಡಿಕೆ ಅವರಲ್ಲಿ ಸದಾ ಇರುತ್ತಿತ್ತು. ಕಸ್ತೂರಿ ಸಾಕಷ್ಟು ಬರೆದೂ ಇದ್ದಾರೆ. ಸಿದ್ಧವನಹಳ್ಳಿ ಕೃಷ್ಣಶರ್ಮ, ರಾಜರತ್ನಂ, ಡಿವಿಜಿ ಮುಂತಾದವರ ಕುರಿತ ಜೀವನ ಚರಿತ್ರೆಗಳ ಪುಸ್ತಕಗಳು, ಕನ್ನಡ ಸಾಹಿತ್ಯದಲ್ಲಿ ಗಾಂಧಿ, ಮಕ್ಕಳಿಗಾಗಿಯೇ ಅನೇಕ ಪುಸ್ತಕಗಳು, ಗಾಂಧಿ ಸಾಹಿತ್ಯದ ಸಂಪ್ಯಟಗಳ ಅನುವಾದ, ರಾಜರತ್ನಂ ಮಕ್ಕಳ ಸಾಹಿತ್ಯ ಸಂಪುಟ ಸಂಪಾದನೆ, ಹೀಗೆ ಅನೇಕ ಕೃತಿಗಳು ಕಸ್ತೂರಿ ಅವರ ಕರ್ತೃತ್ವದ ಫಲಗಳು.ಅನೇಕ ಗೌರವಗಳು ಅವರನ್ನು ಹುಡುಕಿಕೊಂಡು ಬಂದರೂ ಅವರಿಗೆ ಅವುಗಳ ಬಗ್ಗೆ ಯಾವತ್ತಿನ ಕೆಲಸಗಾರನ ನಿರ್ಲಿಪ್ತಿ ಹಾಗೂ ವಿನಯ. ಕಸ್ತೂರಿಯವರು ಗಾಂಧಿ ಸಾಹಿತ್ಯ ಸಂಘದ ಭಾಗವಾಗಿ ತಮ್ಮ ಹಿರಿಯರು ತೋರಿದ ಹಾದಿಯಲ್ಲಿ ಸಾಗಿ ತಮ್ಮ ಬದುಕನ್ನಷ್ಟೇ ಅಲ್ಲ ಅನೇಕ ಸಾಮಾಜಿಕ ಅಗತ್ಯಗಳನ್ನು ಸಂಪನ್ನಗೊಳಿಸಿದರು, ಸದ್ದುಗದ್ದಲವಿಲ್ಲದೇ ನಿರಾಡಂಬರವಾಗಿ ಅದೇ ಗಾಂಧಿತನದಲ್ಲಿ.

ಅವರ ಮಾತುಗಳಲ್ಲಿ ಈ ಕಾಲದ ರಾಜಕೀಯ, ಸಾಮಾಜಿಕ, ಕೌಟುಂಬಿಕ ಪರಿಸ್ಥಿತಿಗಳ ಕುರಿತ ಕಳವಳ–ಆತಂಕಗಳು ವ್ಯಕ್ತವಾಗುತ್ತಿತ್ತು. ಹಾಗೆಯೇ ಜಗತ್ತಿನ ಯಾವುದೇ ಮೂಲೆಯ ಗಾಂಧಿಗಿರಿ ಬಗ್ಗೆ, ಗಾಂಧೀಜಿಯವರ ಬಗ್ಗೆ ಸಲ್ಲುವ ಹೊಗಳಿಕೆ, ಟೀಕೆ ಎಲ್ಲದರ ಬಗೆಗೆ ಅವರ ಮನಸ್ಸು ಸದಾ ಜಾಗೃತಗೊಂಡಿರುತ್ತಿತ್ತು. ಒಬಾಮ ಗಾಂಧೀಜಿಯನ್ನು ಮೆಚ್ಚಿ ಮಾತನಾಡಿದಾಗಲೂ ಅಮೆರಿಕೆಯ ಎಲ್ಲ ಅವಗುಣಗಳನ್ನು ಮರೆತು ಮೆಚ್ಚುವ ದೊಡ್ಡಸ್ತಿಕೆ, ಮುಗ್ಧತನ ಕಸ್ತೂರಿಯವರಿಗಿತ್ತು. ಕಸ್ತೂರಿಯವರ ಮಲ್ಲೇಶ್ವರದ ಮನೆ ಹೆಸರು ‘ಮಿಥಿಲಾ’ಅನೇಕ ವರ್ಷಗಳು ನೀರೆರೆದು ಬೆಳೆಸಿದ ಹಸಿರು ಗಿಡ ಮರಗಳ ತಂಪು ಒಂಟಿ ಮನೆಗೆ ಒಂದು ಸೊಬಗನ್ನ ನೀಡಿತ್ತು. ಆ ಮನೆಯನ್ನ ತನ್ನ ಬಂಧು–ಬಾಂಧವರ ಜೊತೆಗೂಡಿ ಕಾಲಕ್ಕೆ ತಕ್ಕ ಹಾಗೆ ಅಪಾರ್ಟ್‌ಮೆಂಟ್ ಆಗಿ ರೂಪುಗೊಳಿಸಿದಾಗಲೂ ಅವರಲ್ಲಿದ್ದ ಹಂಚಿಕೊಂಡು ಬದುಕುವ ಗಾಂಧಿಗಿರಿಯೇ ಮೇಲುಗೈ ಸಾಧಿಸಿತ್ತು. ಈಚೆಗೆ ಭೇಟಿಯೊಂದರಲ್ಲಿ

ತಮ್ಮ ಅನಾರೋಗ್ಯ ಹಣ್ಣುಮಾಡಿರುವ ಬೇಸರಕ್ಕಿಂತಲೂ ಡಯಾಲಿಸಿಸ್ ಮುಂತಾದ ಚಿಕಿತ್ಸೆಗಳ ದುಬಾರಿತನ ಅವರ ಬೇಸರಕ್ಕೆ ಕಾರಣವಾಗಿತ್ತು. ವರ್ಷಗಟ್ಟಲೆ ಕಷ್ಟಪಟ್ಟು ಮುಂದೆ ಓದಬೇಕು ಅಂದುಕೊಂಡು ಸಂಗ್ರಹಿಸಿದ ಪುಸ್ತಕಗಳನ್ನು ಓದಲು ತ್ರಾಣವಿಲ್ಲದ ತಮ್ಮ ಅನಾರೋಗ್ಯದ ಹಿನ್ನೆಲೆಯಲ್ಲಿ ಯಾರಿಗಾದರೂ ದಾನ ಮಾಡಬೇಕೆಂದು ವಿಷಾದದಿಂದ ಹೇಳಿಕೊಂಡಿದ್ದರು.

ಯಾವುದೇ ಕಾರ್ಯಕ್ಕೆ ಮಾತುಗಳ, ವಸ್ತುಗಳ ಹಾಗೂ ಮನುಷ್ಯರ ಆಡಂಬರ ನಿರಾಕರಿಸುವ ಗಾಂಧೀತನ ಕಸ್ತೂರಿಯವರಿಗೆ ರಕ್ತಗತವಾಗಿತ್ತು. ಅದು ಅವರ ಬದುಕಿನ ಎಲ್ಲ ಹೆಜ್ಜೆಗಳಲ್ಲೂ ವ್ಯಕ್ತವಾಗಿತ್ತು. ಗಿಜಿಗುಡುವ ಟ್ರಾಫಿಕ್ಕು, ನಿತ್ಯ ಮಾರುಕಟ್ಟೆಯ ಝುಗಮಗಿಸುವ ಬೆಳಕಿನಡಿಯ ಮಲ್ಲೇಶ್ವರದ ಎಂಟನೆಯ ಕ್ರಾಸಿಗೆ ಸದ್ದಿಲ್ಲದೆ ಸರಿದುಹೋದ ಗಾಂಧಿವಾದದ ಪರಿಮಳದ ಕಸ್ತೂರಿಯವರು ನೆನಪಾಗಲಿಕ್ಕೆ, ಗುರುತಾಗಲಿಕ್ಕೆ ಅದರ ಪಾಪದ ಅಕೌಂಟುಗಳು ಬಿಡುವುದಿಲ್ಲ ಅನ್ನುವುದು ನಮ್ಮ ಕಾಲದ ಕಟುವಾದ ನಿಜ. (ಸಾಭಾರ : ಸಂಚಯ)

* * *

## *ಸನ್ಮಾನ್ಯರಿಂದ...*

ಕರ್ನಾಟಕ ಸರ್ಕಾರವು 2013ರ ರಾಜ್ಯ ಪ್ರಶಸ್ತಿಗಳನ್ನು ನೀಡುತ್ತಾ,ನಾಟಕ ಕ್ಷೇತ್ರದಲ್ಲಿ ನನ್ನ ಸೇವೆಯನ್ನು ಗುರುತಿಸಿ,ನನಗೂ ಪ್ರಶಸ್ತಿ ನೀಡಿತು ಎಂದು ತಿಳಿಸಲು ಸಂತೋಷವಾಗುತ್ತದೆ. ಆ ಪ್ರಶಸ್ತಿಯಲ್ಲಿ ನನಗೊಂದು ಪ್ರಶಸ್ತಿ ಪತ್ರ, ಒಂದು ಚಿನ್ನದ ಪದಕ, ರೂಪಾಯಿ ಒಂದು ಲಕ್ಷ ನಗದು ನೀಡಲಾಯಿತು. ಪ್ರಶಸ್ತಿ ಪತ್ರ ಮತ್ತು ಪದಕವನ್ನು ನಾನು ಇಟ್ಟುಕೊಂಡಿದ್ದೇನೆ. ಜೊತೆಗೆ ನೀಡಲಾದ ಹಣವನ್ನು ನಾನು ನನ್ನನ್ನು ಬೆಳೆಸಿದ ಮತ್ತು ನನ್ನ ಮನಸ್ಸನ್ನು ತಟ್ಟಿದ ಕೆಲವು ಸಂಸ್ಥೆಗಳೊಡನೆ ಹಂಚಿಕೊಂಡು ಬಿಡಬೇಕೆಂದು ನನ್ನ ಇಚ್ಛೆ.

ದಯವಿಟ್ಟು ನನ್ನ ಖುಷಿಯನ್ನು ನೀವೂ ಹಂಚಿಕೊಳ್ಳಿ. ಇದರೊಂದಿಗೆ ಇಟ್ಟಿರುವ ಹಣವನ್ನು ತಾವು ತಮ್ಮ ಚಟುವಟುಕೆಗಳಿಗೆ ಉಪಯೋಗಿಸಿಕೊಳ್ಳಿ ನನ್ನ ನಾಟಕದ ಚಟುವಟಿಕೆಗಳಿಗೆ ಬಂದ ಪ್ರಶಸ್ತಿ ಆದುದರಿಂದ ಈ ಹಣವನ್ನು ನಾಟಕ ಪುಸ್ತಕ, ಧ್ವನಿ ಮುದ್ರಿಕೆ, ವೃತ್ತಿಪರ ಧ್ವನಿ ರಕ್ಷಣೆಯ ಪುಸ್ತಕಗಳು, ರಂಗಗೀತೆಗಳ ಮುದ್ರಿಕೆ ಮತ್ತಿತರ ರಂಗಸಂಬಂಧೀ ಕೆಲಸ, ಪುಸ್ತಕಗಳಿಗೆ ಉಪಯೋಗಿಸಿಕೊಂಡರೆ ಹೆಚ್ಚು ಸಂತೋಷವಾಗುತ್ತದೆ.

ಇತಿ,

**ರಂಗಪ್ರೇಮಿ ನ.ರತ್ನ**

# ಬೆಳ್ಳೇಕರೆ ಹಳ್ಳಿಥೇಟರ್

- ಪ್ರಸಾದ್ ರಕ್ಷಿದಿ

**ಮುನ್ನುಡಿ - ಡಾ. ನ.ರತ್ನ**

ನಾನು ಬೆಳದದ್ದೆಲ್ಲ ಪಟ್ಟಣಗಳಲ್ಲಿ, ನಾನು ಅಮೆರಿಕಾದಲ್ಲಿ ವಿದ್ಯಾರ್ಥಿಯಾಗಿದ್ದಾಗ ಮೂರು ವರ್ಷ ಇಂಡಿಯಾನ ವಿಶ್ವವಿದ್ಯಾಲಯದ ಸುತ್ತ ಬೆಳೆದಿದ್ದ ಬ್ಲೂಮಿಂಗ್‌ಟನ್ ಎನ್ನುವ ಹಳ್ಳಿಯಲ್ಲಿದ್ದೆ. ಅದೇ ನಾನಿದ್ದ ಸಣ್ಣ ಊರು. ಅದು ಬಿಟ್ಟರೆ ನಾನಿದ್ದದ್ದೆಲ್ಲ ಮೈಸೂರು, ಬೆಂಗಳೂರು, ಭುವನೇಶ್ವರ್, ದೆಹಲಿ, ಮುಂಬಯಿ, ಇಂಡಿಯಾನ ಪೊಲೀಸ್, ವಾಷಿಂಗ್‌ಟನ್ ಡಿ ಸಿ ಮತ್ತು ನ್ಯೂಯಾರ್ಕ್ ನಗರಗಳಲ್ಲಿ. ನನ್ನ ಜೀವನ ಯಾವ ರೀತಿಯಲ್ಲೂ ಶ್ರೀಮಂತವಲ್ಲದಿದ್ದರೂ ಕೊರತೆ ಇಲ್ಲದ ಒಂದು ತರಹ ಸಮಮಟ್ಟದ ನಿರ್ಲಿಪ್ತ, ಸಂತೃಪ್ತ ಬದುಕು. ಹೀಗಾಗಿ ನಾನು ನನ್ನ ಮನೆ, ಆಟ, ಪಾಠ, ಕೆಲಸ, ಆತ್ಮೀಯ ಸ್ನೇಹಿತರು, ನೆಂಟರಿಷ್ಟರು, ನನ್ನ ನಾಟಕಗಳು ಅಷ್ಟೇ ನನ್ನ ಪ್ರಪಂಚ. ಈ ಸೀಮಿತ ಕೂಪದಲ್ಲಿಯೇ ತಟಸ್ಥವಾಗಿ ಬದುಕಿ ಬೆಳೆದ ನನಗೆ ಪ್ರಸಾದ್ ರಕ್ಷಿದಿಯವರ 'ಬೆಳ್ಳೇಕೆರೆ ಹಳ್ಳಿ ಥೇಟರ್'ಎರಡು ರೀತಿಯಲ್ಲಿ ದಿಗ್ಭ್ರಮೆ ಹುಟ್ಟಿಸಿತು.

ಮೊದಲನೆಯದು, ಅದರಲ್ಲಿ ಮೂಡಿ ಬರುವ ಹಳ್ಳಿಯ ಚಿತ್ರ, ನಾನು ನನ್ನ ಅಜ್ಞಾನದಲ್ಲಿ, ಮನಸ್ಸಿನಲ್ಲಿ ಕಲ್ಪಿಸಿಕೊಂಡಿದ್ದ ರಂಜಕ, ಭಾವನಾತ್ಮಕ ಚಿತ್ರದಂತೆ, ಹಳ್ಳಿಯ ಜೀವನ ಮುಗ್ಧ, ಸರಳ ಮತ್ತು ನೇರ. ಆದರೆ ಈ ಪುಸ್ತಕ, ವಾಸ್ತವವಾಗಿ ಅದು ಅತಿ ಸಂಕೀರ್ಣ, ಕ್ಲಿಷ್ಟ ಮತ್ತು ಗೊಂದಲಮಯವೂ ಆಗಿದೆಯೆಂದು ಎಚ್ಚರಿಸಿತು. ರಾಜಕೀಯ ವೈಮನಸ್ಯ, ಸಾಮಾಜಿಕ ವೈಷಮ್ಯ ಮತ್ತು ಸಾಂದ್ರತೆ ಗ್ರಾಮೀಣ ಪ್ರದೇಶಗಳಲ್ಲೂ ಇದ್ದು ಅವುಗಳ ಪರಿಣಾಮ ಪಟ್ಟಣಕ್ಕಿಂತ ಹೆಚ್ಚು ವ್ಯಾಪಕವಾಗಿ ಎಲ್ಲರನ್ನೂ ಕಾಡುತ್ತದೆ ಎಂದೂ ನನಗೆ ಅರಿವಾಯಿತು.

ಎರಡನೆಯ ಕೌತುಕವೆಂದರೆ, ಆ ಸಂಕೀರ್ಣ ಪರಿಸರದಲ್ಲಿಯೇ, ಹಳ್ಳಿಗರ ಬಡತನ, ನಿರಕ್ಷರತೆ, ಸಾಮಾಜಿಕ ಮತ್ತು ರಾಜಕೀಯ ವೈಮನಸ್ಯ, ವೈಷಮ್ಯಗಳ ನಡುವಯೇ ಪ್ರಸಾದ್ ರಕ್ಷಿದಿ ಮತ್ತು ಗೆಳೆಯರು ಒಂದು ನಾಟಕ ತಂಡವನ್ನು ಕಟ್ಟಿ, ದೀರ್ಘಕಾಲ ಬೆಳೆಸಿ, ಉಳಿಸಿಕೊಂಡು ಬಂದಿರುವುದು ಅದ್ಭುತ ಸಾಧನೆ.

ಪಟ್ಟಣದಲ್ಲಿಯೇ ಉಳಿದು ರಂಗಚಟುವಟಿಕೆಯಲ್ಲಿ ಸುಮಾರು ಐವತ್ತೈದು ವರ್ಷಗಳ ಕಾಲ ಸಕ್ರೀಯವಾಗಿ, ಖುಷಿಯಿಂದ ಬೆಳೆದು ಬಂದಿರುವ ನನಗೆ, ಈ ಗ್ರಾಮೀಣ ರಂಗಭೂಮಿಯ ಆತ್ಮಕಥನ ಓದಿದಷ್ಟೂ, ಈ ರಂಗ ಬೆಳೆದು ನಿಂತಿರುವ ರೀತಿ, ಆ ತಂಡದವರ ಸಾಧನೆ ಬಗ್ಗೆ ಆಶ್ಚರ್ಯ, ಗೌರವ ಮತ್ತು ಒಂದು ಮಟ್ಟದ ಹೊಟ್ಟೆಕಿಚ್ಚು ಆಯಿತು. ನಮ್ಮಲ್ಲಿಯ ಅನೇಕ ತಂಡಗಳು ಬೆಳ್ಳೇಕೆರೆಯ 'ಜೈ ಕರ್ನಾಟಕ ಸಂಘ' ಸಾಧಿಸಿದಷ್ಟು ವೈವಿಧ್ಯಮಯ, ಸಾರ್ಥಕ ರಂಗಸೇವೆಯನ್ನು ಸತತವಾಗಿ ಮಾಡಿಕೊಂಡು ಬಂದಿಲ್ಲ. ನಮ್ಮ ಆಸುಪಾಸಿನಲ್ಲಿ ಸಕಲ, ಅಲ್ಲದಿದ್ದರೂ, ಸಾಕಷ್ಟು ಸೌಲಭ್ಯಗಳು ದೊರೆಯುವುದರಿಂದ, ನಮ್ಮಲ್ಲಿ ಅನೇಕ ತಂಡಗಳು ತಮ್ಮದೇ

ಸ್ವಂತ ಪರದೆಗಳು, ಪರಿಕರಗಳು, ರಂಗದೀಪಗಳು, ಉಡುಪುಗಳು ಇತ್ಯಾದಿಗಳನ್ನು ಹೊಂದಿಸಿಕೊಂಡಿಲ್ಲ. ಇವು ಸುಲಭವಾಗಿ ಲಭ್ಯವಿಲ್ಲದ ಕಾರಣದಿಂದಲೂ ತಮ್ಮ ಸ್ವಂತ ಉತ್ಸಾಹ ಮತ್ತು ಕೌಶಲ್ಯಗಳಿಂದ ಈ ಬೆಳ್ಳೇಕೆರೆ ತಂಡವು ಸ್ವಾವಲಂಬನೆ ಗಳಿಸಿಕೊಂಡು ಹೆಮ್ಮರವಾಗಿ ಬೆಳೆದು ನಿಂತಿರುವುದು ನನ್ನಂತಹವರ ಅಸೂಯೆಗೆ ಬಾಧ್ಯವಾಗುವುದು ಸಹಜ.ಆ ಭಾವನೆಗೆ ಸೆಲೆ ಅಪ್ಪಟ ಮೆಚ್ಚುಗೆ.

ಈ ಸಾಧನೆಗೆ ರೂವಾರಿಯಾಗಿ ತಂಡದ ಸದಸ್ಯರುಗಳನ್ನು ಒಟ್ಟುಗೂಡಿಸಿ,ಹುರಿದುಂಬಿಸಿ, ಓಲೈಸುತ್ತಾ, ನಾಟಕದಲ್ಲಿ ಹುಚ್ಚು ಹತ್ತಿಸಿ, ಅವರ ಜೊತೆಯಾಗಿ ಬೆಳೆದ, ಪ್ರಸಾದ್ ರಕ್ಷಿದಿಯವರಿಗೆ ನನ್ನ ಸಾಷ್ಟಾಂಗ ನಮನಗಳು. ಯಾವುದೇ ಗುಂಪನ್ನು ಕಟ್ಟಿ, ಹಿಡಿದು, ದೀರ್ಘಕಾಲ ನಿಲ್ಲಿಸುವುದು, ಎಲ್ಲಿಯೇ ಆಗಲಿ ಸುಲಭದ ಕೆಲಸವಲ್ಲ, ಅಚಿತಹದರಲ್ಲಿ ನನಗೀಗ ಪರಿಚಯವಾಗಿರುವಂತೆ, ಯಾವುದೇ ಕ್ಷುಲ್ಲಕ ವೈಮನಸ್ಯ ಕೂಡ ಬೇಗ ಉಲ್ಬಣಿಸಿ ಸಿಡಿಯುವಚಿತಹ ಗ್ರಾಮೀಣ ಪರಿಸರದಲ್ಲಿ ಅನೇಕರನ್ನು, ಅವರ ಮಧ್ಯದ ರಾಜಕೀಯ, ಸಾಮಾಜಿಕ ಭಿನ್ನಮತಗಳನ್ನು ಸರಿದೂಗಿಸಿಕೊಂಡು ನಾಟಕ ಕ್ರಿಯೆಗೆ ಭಂಗ ತರದಂತೆ ತಂಡದ ಆರೋಗ್ಯ, ಉತ್ಸಾಹ ಉಳಿಸಿಕೊಂಡಿರುವುದು ಮಾಂತ್ರಿಕವೇ ಹೌದು.

ಆದರೂ ಪುಸ್ತಕದಲ್ಲಿ ಪ್ರಸಾದ್ ರಕ್ಷಿದಿಯವರು ಎಲ್ಲೂ ತಮ್ಮದೇ ಬೆನ್ನು ಚಪ್ಪರಿಸಿಕೊಂಡಿಲ್ಲ. ತಾವು ಹಿನ್ನೆಲೆಯಲ್ಲೇ ಇದ್ದು ತಮ್ಮ ಮಿತ್ರರೆಲ್ಲರ ಸಹಕಾರ ಸ್ಮರಿಸಿದ್ದಾರೆ. ಅದು ಸೌಜನ್ಯ.

ಇಂತಹ ಸಾಹಸದ ಕಥೆಯನ್ನು ಕೃತಿಗಿಳಿಸಿ ಪ್ರಸಾದ್ ರಕ್ಷಿದಿಯವರು ನಮ್ಮೆಲ್ಲರಿಗೂ ಬಹಳ ಸಹಾಯ ಮಾಡಿದ್ದಾರೆ.ನನ್ನ ನಾಟಕದ ಜೀವನದಿಂದ, ಅದು ನನಗೆ ತಂದುಕೊಟ್ಟ ಸಂತೋಷ, ಮಿತ್ರಲಾಭ ಮತ್ತು ಪ್ರಸಿದ್ಧಿಯಿಂದ ಸಂತೃಪ್ತನಾಗಿ ಹೆಮ್ಮೆಯಿಂದ ಬೀಗುತ್ತಿದ್ದ ನನ್ನ ಗರ್ವಭಂಗ ಮಾಡಿ ನನ್ನನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದಾರೆ. ಅವರ ಶ್ರಮ, ಸಾಧನೆ, ಇತರ ಪಟ್ಟಣ ವಾಸಿಗಳಿಗೂ ತಾಕುತ್ತದೆಂದು ನನ್ನ ವಿಶ್ವಾಸ. ನಮಗೆ ಇಂತಹ ವಿಭಿನ್ನ ಅನುಭವಗಳ ಉದಾಹರಣೆಗಳಿಂದ ನಮ್ಮ ನಮ್ಮ ಸ್ವಂತ ಕೊಡುಗೆಯ ಬಗ್ಗೆ ಒಂದು ಸಮತೋಲ ದೃಷ್ಟಿ ಬೆಳೆಯುತ್ತದೆ.ಅದು ಶ್ರೇಯಸ್ಕರ.

ಪ್ರಸಾದ್ ಅವರು ತಮ್ಮ ತಂಡ ಬೆಳೆದು ಬಂದ ಚರಿತ್ರೆಯನ್ನು 'ಆತ್ಮ ಕಥನ' ಎಂದು ಕರೆದಿರುವುದು ಔಚಿತ್ಯಮಯ.ಅದು ತಮ್ಮ ತಂಡದ ವಿವಿಧ ಮಜಲುಗಳ, ಘಟನೆಗಳ ಸುತ್ತ ಹೆಣೆದುಕೊಳ್ಳುತ್ತಾ, ರಂಗಭೂಮಿಯ ಅಚಿತರಾಳವನ್ನು ಹೊರಚೆಲ್ಲುತ್ತದೆ. ಆತ್ಮಚರಿತ್ರೆ ಎನ್ನುವುದು ಇಲ್ಲಿ ತಾನೆ ಬರೆದುಕೊಂಡದ್ದು ಅಲ್ಲ. ತಂಡದ ಅಂತಃಸತ್ವವನ್ನು ನಿರೂಪಿಸುವುದು.ಒಂದೊಂದು ಘಟನೆಯೂ ಸ್ವತಃ ಪ್ರತ್ಯೇಕ ಕಥೆಯಂತೆ ಕಂಡರೂ ಅವು ಬಿಡಿ ಮಣಿಗಳಂತೆ ಪೋಣಿಸಿಕೊಳ್ಳುತ್ತಾ ಹೋಗಿ ಒಂದು ವಿಸ್ಮಯಕಾರಿ ಸರವಾಗುತ್ತದೆ. ಕಥೆಗೆ ಒಂದು ನಿರ್ದಿಷ್ಟ ಪ್ರಾರಂಭವಿದ್ದರೂ ಅದಕ್ಕೊಂದು ಕೊನೆಯಿಲ್ಲದಿರುವುದು ಸಹಜವೇ ಸರಿ. ವಿಜಯ ಎನ್ನುವ ಗೆಳೆಯ ಎಲ್ಲ ಸೌಕರ್ಯಗಳೂ, ಸೌಲಭ್ಯಗಳೂ ಇದ್ದ ಕಂಪನಿ ಕೆಲಸ ಬಿಟ್ಟು ಬೆಳ್ಳೇಕೆರೆಗೆ ಹಿಂದಿರುಗಿದಾಗ ಅವನು ಕೊಡುವ ಕಾರಣ 'ಅಲ್ಲಿ ಇಲ್ಲ ಇದ್ದರೂ ನಾಟಕವಿಲ್ಲ' ಎನ್ನುವುದರೊಂದಿಗೆ ಪುಸ್ತಕ ಕೊನೆಗೊಳ್ಳುತ್ತದೆ.ಅದರೆ ಅವನ ರಂಗಜೀವನ

ಮುಂದುವರೆಯುತ್ತದೆ ಎನ್ನುವ ಆಶ್ವಾಸನೆ ಕಾಣುತ್ತದೇ ಹಾಗೆಯೇ ಈ ರಂಗತಂಡದ ಜೀವನ ಕೂಡ.ಅದಕ್ಕೆ ಕೊನೆ ಬೇಡ.

ಈ ಪುಸ್ತಕದ ಮೊದಲ ಘಟನೆ 'ಲಕ್ಷ್ಮಯ್ಯನ ಕಾಗುಣಿತ' ಪ್ರತಿ ಘಟನೆಗೂ ಬಹಳ ಸ್ವಾರಸ್ಯಕರವಾದ ಶಿರೋನಾಮವಿದೆ.ಆ ಮೊದಲು ಕಥೆಯೂ ಒಂದು ಕಲಾತ್ಮಕವಾದ ಸಣ್ಣಕಥೆಯಂತೆಯೇ ಸಾಗುತ್ತದೆ. ಅನಕ್ಷರಸ್ಥ ಲಕ್ಷ್ಮಯ್ಯ ಜಿದ್ದಿಗೆದ್ದು ಗುಟ್ಟಾಗಿ ಅಕ್ಷರ ಕಲಿಯುವುದಕ್ಕೂ ರಂಗಭೂಮಿಗೂ ಇರುವ ಸಂಬಂಧ ಮುಂದಿನ ಕಥೆಗಳಲ್ಲಿ ತೆರೆದುಕೊಳ್ಳುತ್ತದೆ. ಹಾಗೆ ನೋಡಿದರೆ ಪುಸ್ತಕದುದ್ದಕ್ಕೂ ಪ್ರಸಾದ್ ರಕ್ಷಿದಿಯವರ ಕಲಾತ್ಮಕತೆ, ಸಾಹಿತ್ಯ ಪ್ರವೃತ್ತಿ, ಸಹವರ್ತಿಗಳೊಂದಿಗಿನ ಅನುಕಂಪ, ಮಧುರ ಬಂಧುತ್ವ, ನಾಟಕ ಬದ್ಧತೆ ಮತ್ತು ಸ್ನೇಹಪರ ನಾಯಕಶೀಲತೆ ಎದ್ದು ಕಾಣುತ್ತದೆ.

ಪ್ರೌಢಶಾಲೆಯಲ್ಲಿ ನಾಟಕಗಳಲ್ಲಿ ವಿಜೃಂಭಿಸಿದ ಪ್ರಸಾದ್‌ರವರು, ಉಡುಪಿಯ ಕಾಲೇಜಿನಲ್ಲಿ ನಾಟಕಗಳಲ್ಲಿ ಭಾಗವಹಿಸುವ ಅವಕಾಶ ಸಿಗದಿದ್ದರೂ, ನಾಟಕದ ಪೂರ್ವಾಭ್ಯಾಸಗಳನ್ನು ನೋಡುವ, ಉತ್ತಮ ನಾಟಕಗಳನ್ನು ನೋಡುವ, ಅವುಗಳ ಬಗ್ಗೆ ಚರ್ಚೆ ಮಾಡುವ ಅವಕಾಶಗಳಿಂದ ನಾಟಕಾಸಕ್ತಿ ಬೆಳೆಸಿಕೊಂಡು ಊರಿಗೆ ಹಿಂದಿರುಗಿದಾಗ, ಅವರು ಎಸ್ಟೇಟಿನ ಡ್ರೈರಿಘಾರಂನ ಉಸ್ತುವಾರಿಯ ಕೆಲಸಕ್ಕೆ ಸೇರಿ,ಒಬ್ಬ ಕಥೆಗಾರನಾಗಿ ತಮ್ಮ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡವರು. ಅವರು ತಮ್ಮ ಒಡನಾಡಿಗಳೊಂದಿಗೆ ಮೊದಲು ಧುಮುಕಿದ್ದು ರಾಜಕೀಯ ಆಂದೋಲನದಲ್ಲಿ. ಆಗ ಪ್ರತಿದಿನ, ಕೆಲಸದ ನಂತರ ಎಸ್ಟೇಟಿನ ಕಣ, ಅಂದರೆ ಒಂದು ವಿಶಾಲವಾದ ಖಾಲಿ ಬಯಲಿನಲ್ಲಿ, ಕೂಡುತ್ತಿದ್ದ ಯುವಕರ ತಂಡ ವೃಥಾ ಕಾಲಹರಣ ಮಾಡದೇ ದೇಶದ ಸುದ್ದಿ, ಪರಿಸ್ಥಿತಿ, ರಾಜಕೀಯ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು. ಅವರಲ್ಲಿದ್ದ ಅನೇಕ ಅನಕ್ಷರಸ್ಥರು ಆಗ ಅವರಿಗೆಲ್ಲ ಪ್ರಿಯವಾದ ಸಿನಿಮಾ ಹಾಡುಗಳ ಮಾತುಗಳನ್ನು ಕಲಿಯುವ ಪ್ರಯತ್ನದಲ್ಲಿ, ಅಕ್ಷರಾಭ್ಯಾಸ ಆರಂಭಿಸಿದರು. ಅವರ ತೋಟದ ಬಯಲೇ ಶಾಲೆಯಾಯಿತು. ಅಲ್ಲಿನ ಗೋಡೆ ಮತ್ತು ನೆಲಗಳೇ ಅಕ್ಷರಾಭ್ಯಾಸದ ಫಲಕಗಳಾದವು.ಹೀಗೆ ಲಕ್ಷ್ಮಯ್ಯನಿಂದ ಪ್ರಾರಂಭವಾದ ಅಕ್ಷರ ಕಲಿಕೆ, ಅನೇಕ ಅನಕ್ಷರಸ್ಥ ತರುಣರ ಅಕ್ಷರಾಭ್ಯಾಸದಲ್ಲಿ ಮುಂದುವರೆದು ನಾಟಕ ಪ್ರಯೋಗಕ್ಕೆ ದಾರಿ ಮಾಡಿತು.

ಈ ನಾಟಕ ಚಳುವಳಿಯು ಕೇವಲ ಒಂದು ಹವ್ಯಾಸವಾಗಿರದೆ ಶೀಘ್ರವಾಗಿ ಅವರೆಲ್ಲರ ರಾಜಕೀಯ, ಸಾಮಾಜಿಕ ಕಳಕಳಿಗಳ ಅಭಿವ್ಯಕ್ತಿ ಮಾಧ್ಯಮವಾಗಿ ಬೆಳೆದಿದ್ದು ನಿಜಕ್ಕೂ ಅನುಕರಣೀಯ. ಕಾರ್ಮಿಕ ಮಿತ್ರ ಸಂಘ, ರಕ್ಷಿದಿ ತಮ್ಮ ಸದಸ್ಯರಿಂದ ವಾರಕ್ಕೆ ನಾಲ್ಕಾಣೆ ವಂತಿಗೆ ಪಡೆದು ನಾಟಕಭ್ಯಾಸ ಮಾಡಲು ಉಪಕ್ರಮಿಸಿದರು.

ಅನೇಕ ನಟರು ಆಗಿನ್ನೂ ಓದು ಕಲಿಯುತ್ತಿದ್ದುದರಿಂದ, ಎಲ್ಲರಿಗೂ ಹಳ್ಳಿಯ ನಾಟಕದ ಮೇಷ್ಟ್ರು ಮಾಡುವಂತೆ, ನಾಟಕದ ಮಾತುಗಳನ್ನು ಗಟ್ಟಿಯಾಗಿ ಹೇಳಿ, ಹೇಳಿಸಿ, ಮಾತು ಕಲಿಸಬೇಕಾಯಿತು. ಹೀಗೆ ಮಾತು ಕಲಿಯಲು ಅಭ್ಯಾಸ ಮಾಡಿಕೊಂಡ ಹಲವರು ಓದು ಕಲಿತಾದ ಮೇಲೂ, ಇನ್ನೊಬ್ಬರು ಮಾತುಗಳಾಡುವುದನ್ನು ಕೇಳಿಸಿಕೊಂಡು ನಾಟಕದ ಮಾತು ಕಲಿಯುವುದನ್ನು ಬಿಡಲಿಲ್ಲವಂತೆ, ನಾಟಕದ ಮಾತು ಕಲಿಯಲು ಇದೊಂದು ಸಮರ್ಥ ವಿಧಾನವೆಂದಾಯಿತು.

ತಾವೇ ಬರೆದ ನಾಟಕ, ತಮ್ಮ ತಮ್ಮ ಮನೆಗಳಿಂದ ತಂದ, ತೋಟದಿಂದ ಕೊಡಲ್ಪಟ್ಟಿದ್ದ ಕಂಬಳಿಗಳೇ ಪರದೆಗಳು, ತಾವೇ ತಯಾರಿಸಿಕೊಂಡ ರಂಗದೀಪಗಳು, ರಂಗಪರಿಕರಗಳು, ರಂಗಸಜ್ಜಿಕೆಗಳನ್ನು ಉಪಯೋಗಿಸಿದ ತಮ್ಮದೇ ಶೈಲಿಯ ಮೊದಲ ನಾಟಕ ಪ್ರದರ್ಶನ ಒಂದು ಯಶಸ್ವಿ ಪ್ರಯೋಗವಾಯಿತು. ಈ ತಂಡದ ಮೊದಲ ನಾಟಕ ಮಾತ್ರ ಕೇವಲ ರಂಜನೀಯವಾದುದು. ಆ ತಂಡದ ಮುಂದಿನ ನಾಟಕಗಳು ಆ ತರುಣರ ಸಾಮಾಜಿಕ ಕಳಕಳಿಗೆ ಸ್ಪಂದಿಸುವಂತಹವು.

ನಾಟಕಗಳಿಗೆ ಎಸ್ಟೇಟ್ ಮಾಲೀಕರ, ಸಹ ಕಾರ್ಮಿಕರ, ಊರ ಜನರ ಪ್ರೋತ್ಸಾಹ ದೊರೆಯಿತು. ತಂಡ ಗಟ್ಟಿಯಾಗಿ ಬೆಳೆದು ಬೇರೂರಲು ಸಾಧ್ಯವಾಯಿತು. ಕಿತ್ತಲೇ ಹಣ್ಣಿನ ಗುತ್ತಿಗೆ ಪಡೆದು ಬಂದ ಲಾಭದಿಂದ ತಂಡ ಸ್ವಂತ ಪರದೆಗಳನ್ನೂ, ಡಿಮ್ಮರ್‌ಗಳನ್ನೂ ಇತರ ಸೌಲಭ್ಯಗಳನ್ನೂ ತಾವೇ ಹೊಂದಿಸಿಕೊಂಡು, ಮುಂದೆ ತಂಡ ರೈತ ಸಂಘಟನೆಯೊಡನೆ ಕೈ ಜೋಡಿಸಿ ವೃದ್ಧಿಸಿತು. ಈ ಯುವಕರು ನಾಟಕದ ಪ್ರದರ್ಶನಗಳನ್ನು ಅಕ್ಕಪಕ್ಕದ ಊರುಗಳಲ್ಲಿ ಆಡಿ ಅಲ್ಲಿಯೂ ನಾಟಕದ ಹುಚ್ಚು ಹರಡಿದರು. ಗಾಣದ ಹೊಳೆಯಲ್ಲಿ 'ಮಿತ್ರ ಯುವಕ ಸಂಘ' ಸ್ಥಾಪಿಸಿ ನಾಟಕಗಳಾಡಿದರು. ಬೇರೆ ಬೇರೆ ಭಾಷೆಗಳಲ್ಲಿ ನಾಟಕ ಆಡಿದರು. ಕಾರಣಾಂತರದಿಂದ ಆ ಸಂಘ ನಿಂತು, ಮತ್ತೇ ಬೆಳ್ಳೇಕೆರೆಗೆ ಹಿಂದಿರುಗಿ ಅಲ್ಲಿಯೇ ನೆಲೆಸಿದರು.

ಈ ರಂಗ ಬೆಳವಣಿಗೆ ಹಳ್ಳಿಗಳ ರಾಜಕೀಯದೊಡನೆ ಹಾಸುಹೊಕ್ಕಾಗಿ ಸಾಗುತ್ತಾ, ಅನೇಕ ವೇಳೆ ರಾಜಕೀಯ ವೈಮನಸ್ಸುಗಳನ್ನು ಮೀರಿ ನಡೆದು ಬಂದಿರುವುದು ಆ ತಂಡದ ಸದಸ್ಯರ ಮಾನಸಿಕ ಪಕ್ವತೆಗೆ ಸೂಚಿ. ತಂಡದ ಸದಸ್ಯರು ನಾಟಕದ ಜೊತೆಗೆ ಗ್ರಾಮದ ಇತರ ಚಟುವಟಿಕೆಗಳಲ್ಲೂ, ಚಳುವಳಿಗಳಲ್ಲೂ, ಹಬ್ಬ ಹರಿದಿನ ಸಂಭ್ರಮಗಳಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಾ ಕ್ರಿಯಾಶೀಲರಾಗಿ ಇದ್ದರು. ಸಣ್ಣ ಗ್ರಾಮದಲ್ಲಿ ಎಲ್ಲ ಚಟುವಟಿಕೆಗಳಲ್ಲೂ ಅದೇ ಜನ ಭಾಗವಹಿಸುವುದು ಅನಿವಾರ್ಯ ಅಲ್ಲವೇ?ನಾಟಕವನ್ನು ಹತ್ತಿರದ ಸಕಲೇಶಪುರದಲ್ಲೂ ಆಡಿ, ಅಲ್ಲಿಯ ರೋಟರಿ ಕ್ಲಬ್ಬಿನೊಡನೆ ಸೃಜನಾತ್ಮಕ ಸಂಬಂಧ ಬೆಳೆಸಿಕೊಂಡರು. ಇತರ ಊರುಗಳಲ್ಲಿಯೂ ಪ್ರದರ್ಶನ ನೀಡಿ ಎಲ್ಲರ ಪ್ರೀತಿಗೆ ಪಾತ್ರರಾದರು.

ಕೆಲವು ಸದಸ್ಯರು ಹೆಗ್ಗೋಡಿಗೂ ಹೋಗಿ ಕ್ರಮೇಣ ಅಲ್ಲಿ ಕೆಲವರು ತರಬೇತಿ ಪಡೆದರು. ಕೆ.ವಿ.ಸುಬ್ಬಣ್ಣ ಮತ್ತು ನೀನಾಸಂ ಜೊತೆ ನಿಕಟ ಸಂಪರ್ಕ ಬೆಳೆಸಿಕೊಂಡರು. ಈ ತಂಡದ ಸಕ್ರಿಯತೆಯು ಕರ್ನಾಟಕದ ವಿವಿಧೆಡೆ ಗುರುತಿಸಲ್ಪಟ್ಟಿತು.ತಮ್ಮಲ್ಲಿಯೇ ಒಂದು ರಂಗವೇದಿಕೆಯನ್ನು ನಿರ್ಮಿಸಿಕೊಂಡು ಪರವೂರಿನ ತಂಡಗಳನ್ನು ಕರೆಸಿಕೊಂಡು ಅವರ ಪ್ರದರ್ಶನಗಳನ್ನು ಏರ್ಪಡಿಸಿದರು. ಕೇರಳ ತಂಡ, ಕೊಡಗು ರಂಗ, ನೀನಾಸಂ ಇತ್ಯಾದಿ ತಂಡಗಳನ್ನು ನೋಡಿ, ಅವರೊಡನೆ ಒಡನಾಡಿ ತಮ್ಮ ರಂಗಜ್ಞಾನವನ್ನು ಹೆಚ್ಚಿಸಿಕೊಂಡರು. ಆ ತಂಡಗಳಂತೆ ತಾವೂ ವೃದ್ಧಿಸಬೇಕೆಂದು ಪಣತೊಟ್ಟು 'ಜೈ ಕರ್ನಾಟಕ ಸಂಘ, ಬೆಳ್ಳೇಕೆರೆ' ಸ್ಥಾಪಿಸಿದರು.

ತಮ್ಮದೇ ಶ್ರಮದಾನದಿಂದ ರಕ್ಷಿದಿಯಲ್ಲಿ 'ಪ್ರಕೃತಿ ರಂಗಮಂಚ' ಮತ್ತು 'ವನರಂಗ' ವ್ಯವಸ್ಥೆ ಮಾಡಿದರು. ತಮ್ಮಲ್ಲಿ ಹಲವು ರಂಗ ಶಿಬಿರಗಳನ್ನು ಏರ್ಪಡಿಸಿದರು. ಕಪ್ಪಣ್ಣ, ರಮೇಶ್ ಮತ್ತು ಇತರ ಹಿರಿಯ ರಂಗಕರ್ಮಿಗಳ ಮತ್ತು ನಾಟಕ ಅಕಾಡೆಮಿಯ ಪ್ರೋತ್ಸಾಹ ಪಡೆದು ಹೆಚ್ಚು ಹೆಚ್ಚು ಯಶಸ್ಸು ಪಡೆದರು.

ಮುಂದೆ ಬೆಳೆದ ತಂಡ ಪರವೂರುಗಳಲ್ಲಿಯೂ ನಾಟಕ ಪ್ರಯೋಗ ಪ್ರದರ್ಶಿಸಿತು. ಗುಲ್ಬರ್ಗದಲ್ಲಿ ರಂಗೋತ್ಸವದಲ್ಲಿ ನಾಟಕವಾಡಿ ಪ್ರಶಸ್ತಿಗೆದ್ದರು. 'ರಾತ್ರಿ ಶಾಲೆಯಲ್ಲಿ ಅಭ್ಯಾಸ ಮಾಡುತ್ತಾ ಬಣ್ಣ ಹಚ್ಚಿಕೊಂಡ ಹುಡುಗರು' ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದರು.

ಈ ತಂಡ ಕರ್ನಾಟಕದ ಬೇರೆ ಬೇರೆ ಕಡೆ ಯಶಸ್ವಿ ಪ್ರದರ್ಶನಗಳನ್ನು ನೀಡಿದೆ.ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ಮೈಸೂರಿನ ರಂಗಾಯಣ, ಹೂವಿನಹಡಗಲಿ ಮತ್ತು ಇತರ ಸ್ಥಳಗಳಲ್ಲಿ ನಾಟಕವಾಡಿ ಜಯಭೇರಿ ಬಾರಿಸಿದ್ದಾರೆ. ಈ ತಂಡ ೨೦೦೩ನೆಯ ಇಸವಿಯಲ್ಲಿ ತನ್ನ ಬೆಳ್ಳಿಹಬ್ಬ ಆಚರಿಸಿತು. ತನ್ನ ಸ್ವಂತ ಮಣ್ಣಿನ ರಂಗಮಂಚದ ಜೊತೆ ಈಗ ನವೀನವಾದ ಬಯಲುರಂಗಮಂದಿರ, ಒಳಾಂಗಣ ರಂಗಮಂದಿರ, ಗ್ರಂಥಾಲಯ ಕಚೇರಿ, ಗೋಡೌನ್ ಒಳಗೊಂಡ ಸುಸಜ್ಜಿತ ಕುವೆಂಪು 'ರಂಗಮಂದಿರ ಸಂಕೀರ್ಣ' ಸ್ಥಾಪಿಸುವ ಕಾಯಕ ಪ್ರಾರಂಭವಾಗಿದೆ. ಇಷ್ಟೆಲ್ಲ ಸಾಧನೆಗೆ ಆ ಹಳ್ಳಿಗಳ ಅನೇಕ ಜನರ ಸಹಕಾರ ಮುಖ್ಯ. ಇವೆಲ್ಲವನ್ನೂ ಒಳಗೊಂಡು ಗ್ರಾಮೀಣ ಜೀವನದ ಅನೇಕ ಕಠಿಣ ಸನ್ನಿವೇಶಗಳಲ್ಲೂ ಸಮಾಧಾನ ತಂದು ಮುನ್ನಡೆಸಿದ ಪ್ರಸಾದ್ ರಕ್ಷಿದಿಯವರಿಗೂ, ಅವರೆಲ್ಲರ ಗೆಳೆಯರಿಗೂ,ಅವರನ್ನು ಪ್ರೋತ್ಸಾಹಿಸಿದ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ಎಷ್ಟು ಧನ್ಯವಾದ ಹೇಳಿದರೂ ಸಾಲದು.

ಎಲ್ಲಕ್ಕಿಂತ ಮುಖ್ಯವಾಗಿ ಈ ತಂಡದ ಸದಸ್ಯರು ಶ್ಲಾಘನೀಯರು.ಅವರೆಲ್ಲದೂ ನಾಟಕದ ಬಗ್ಗೆ, ರಂಗಕ್ರಿಯೆಯ ಬಗ್ಗೆ, ನಿಷ್ಠೆಯಿಂದಿದ್ದು ದುಡಿದಿರುವುದು ಇವರ ಯಶಸ್ಸಿನ ಮೂಲಸತ್ವ. ಅವರಲ್ಲಿ ಎಲ್ಲ ಸೇರಿದ್ದಾರೆ. ನಿರಕ್ಷರರು, ವಿದ್ಯಾವಂತರು, ವಾಹನ ಚಾಲಕರು, ದರ್ಜಿಗಳು, ಬಡಗಿಗಳು ಮತ್ತಿತರ ಕುಶಲಕರ್ಮಿಗಳು,ತೋಟದ ಕೆಲಸಗಾರರು ಎಲ್ಲರೂ ಬೇಧಭಾವವಿಲ್ಲದೇ ನಿಸ್ಪೃಹರಾಗಿ ಕೈಜೋಡಿಸಿ ದುಡಿದಿರುವುದು ದುಡಿಯುತ್ತಾ ಬಂದಿರುವುದು ಗಣನೀಯ. ಎಂದರೋ ಮಹಾನುಭಾವಲು!

ಇಂತಹ ಇನ್ನೆಷ್ಟು ಸಂಸ್ಥೆಗಳಿವೆಯೋ, ರಾಜ್ಯದ, ದೇಶದ ಮೂಲೆಗಳಲ್ಲಿ ಎಲೆ ಮರೆಯಲ್ಲಿ ಅರಳಿರುವ, ಅರಳುತ್ತಿರುವ ಗುಂಪುಗಳೆಷ್ಟೋ! ಅವರೆಲ್ಲ ಧನ್ಯರು. ಮತ್ತೆ ಹೇಳಬಹುದು 'ಎಂದರೋ ಮಹಾನುಭಾವಲು!'

'ಬೆಳ್ಳೇಕೆರೆ ಗ್ರಾಮೀಣ ಥೇಟರ್'ದಂತ ಪುಸ್ತಕಗಳು ಇನ್ನೂ ಬರಬೇಕು. ನಮ್ಮೆಲ್ಲರ ಕಣ್ಣರಳಿಸಬೇಕು.

ಈ ಪುಸ್ತಕಕ್ಕೆ ಮುನ್ನುಡಿಯನ್ನು ಬಹಳ ನಮ್ರವಾಗಿ ಬರೆದಿದ್ದೇನೆ. ಇದನ್ನು ಇನ್ನೂ ಮುಂಚೆಯೇ ಬರೆಯಬೇಕಿತ್ತು. ನನ್ನ ದೈಹಿಕ, ಮಾನಸಿಕ ಆಲಸ್ಯದಿಂದ ತಡವಾಯಿತು. ಈ ಮುನ್ನುಡಿಯನ್ನು ಬರೆಯಲು ಅವಕಾಶವನ್ನು ಕೊಟ್ಟು, ತಾಳ್ಮೆಯಿಂದ ಕಾದ ಪ್ರಸಾದ್ ರಕ್ಷಿದಿಯವರಿಗೆ ನನ್ನ ಕೃತಜ್ಞತೆಗಳು.

ಬೆಳ್ಳೇಕೆರೆಯ 'ಜೈ ಕರ್ನಾಟಕ ಸಂಘ'ಕ್ಕೆ ಇನ್ನೂ ಹೆಚ್ಚಿನ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇನೆ.

– *ನ.ರತ್ನ, ಮೈಸೂರು*

# ಪ್ರಜಾತಂತ್ರ ವಿಚಾರಗಳು

*- ಸಿದ್ಧವನಹಳ್ಳಿ ಕೃಷ್ಣಶರ್ಮ*

ಪ್ರಜಾತಂತ್ರ ಎಂದರೆ ವಿಚಾರ ಬಲದ ಮೇಲೆ ಕಟ್ಟಿದ ರಾಜ್ಯ. ಪ್ರಜೆಗಳು ಪರಸ್ಪರ ವಿಚಾರ ವಿನಿಮಯ ಮಾಡಿ, ಒಬ್ಬರ ಮೇಲೆ ಒಬ್ಬರು ತಮ್ಮ ವಿಚಾರದ ಪ್ರಭಾವ ಬೀರಿ, ಒಬ್ಬರನ್ನು ಒಬ್ಬರು ಒಲಿಸಿಕೊಂಡು ಸರ್ವಸಮ್ಮತ ಆಗಿ ರಾಜ್ಯ ನಡೆಸುವ ವ್ಯವಸ್ಥೆ.

ಸರ್ವಸಮ್ಮತ ಅಲ್ಲದಿದ್ದರೂ ಸರ್ವ ಅನುಮತದಿಂದ ಎಂದರೆ ಅವಿರೋಧ ಆಗಿ ನಡೆಯಬೇಕಾದ ರಾಜ್ಯ ವ್ಯವಸ್ಥೆ.

ವಿರೋಧ ಬಂದರೆ ಒತ್ತಾಯ ಇದ್ದೇ ಇದೆ. ವಿರೋಧ ನಿರಸನ ಆಗಬೇಕಲ್ಲ.

ವಿಚಾರ ಮಾಡಿ ವಿರೋಧವನ್ನು ಕರಗಿಸುವ ದಾರಿ ಒಂದು. ಶಾಸನಬಲದಿಂದ ವಿರೋಧವನ್ನು ತುಳಿಯುವ ದಾರಿ ಒಂದು.

ಮೊದಲನೆಯದೇ ಪ್ರಜಾಪ್ರಭುತ್ವ. ಎರಡನೆಯದು ವರ್ಗ ಪ್ರಭುತ್ವ-class rule.

ನಮ್ಮದು ಪ್ರಜಾಪ್ರಭುತ್ವ ಆದ್ದರಿಂದ ನಮ್ಮಲ್ಲಿ ವಿಚಾರದ್ದೇ ಮಹತ್ವ, ನಮ್ಮ ರಾಜ್ಯದ ಬಲ ವಿಚಾರ, ಬಲ-ವಿಚಾರವೆ ತೇಜೋಬಲ.

ವಿಚಾರ ಎರಡು ಬಗೆಯಲ್ಲಿ ಪ್ರಕಟ ಆಗುತ್ತದೆ: ಮಾತು, ಬರಹ. ಮಾತು ಎಂದರೆ ಭಾಷಣ, ಚರ್ಚೆ; ಬರಹ ಎಂದರೆ ಲೇಖನ ವ್ಯವಸಾಯ.

ಈ ಎರಡು ಸಾಧನಗಳನ್ನೂ ಪ್ರಜಾಪ್ರಭುತ್ವ ಸರಿಯಾಗಿ ಬೆಳೆಸಬೇಕು.

ಚರ್ಚೆ-ಭಾಷಣಗಳ ಕಲೆ ಸಾಕಷ್ಟು ಬೆಳೆದಿಲ್ಲ ಎಂದೇ ನಮ್ಮ ವಿಧಾನ ಮಂಡಳದ ಚರ್ಚೆಗಳಲ್ಲಿ ಸ್ವಾರಸ್ಯ ಕಡಿಮೆ. ಒಬ್ಬರನ್ನೊಬ್ಬರು ಬೈದಾಡಿದಾಗಲೇ ಚರ್ಚೆ ಜನರಿಗೆ ರುಚಿ ಆಗುತ್ತದೆ.

ಕಳೆದ ಶತಮಾನದ ಗಂಭೀರ ಭಾಷಣಗಳನ್ನು ಸರಿಗಟ್ಟುವ ಭಾಷಣಗಳನ್ನು ಯಾವ ಪಕ್ಷದವರಿಂದಲೂ ನಾವು ಈಗ ಕೇಳುತ್ತಿಲ್ಲ.

ಭಾಷಣ ಇರಲಿ. ಬರಹವೋ ಎಂದರೆ ಅದರಲ್ಲೂ ಹುರಿ, ಹುರುಳು ಕಡಿಮೆ.

ನಮ್ಮ ಸಾಹಿತ್ಯವೆಲ್ಲ ರಾಜಾಶ್ರಯದಲ್ಲಿ ಬೆಳೆದು ಬರೀ ಕಾವ್ಯ ಸಾಹಿತ್ಯ ಆಯಿತು. ಭಕ್ತಿಯ ಪಂಥದಲ್ಲಿ ಬೆಳೆದು ಬರೀ ಸ್ತೋತ್ರ ಸಾಹಿತ್ಯ ಆಯಿತು.

ಜೀವನ ಸಾಹಿತ್ಯ, ವಿಚಾರ ಸಾಹಿತ್ಯ ಆಗಲಿಲ್ಲ.

ಆಧ್ಯಾತ್ಮದಲ್ಲಿ ಸತ್ಯವನ್ನು ಶೋಧಿಸಲು ಹೋಗಿ ಜೀವನದಲ್ಲಿ ಏನಾದರೂ ಸತ್ಯ ಇದೆಯೇ ಎಂದು ಅರಸುವುದನ್ನು ಕೈಬಿಟ್ಟೆವು.

ಕಾವ್ಯ ದೃಷ್ಟಿ, ಭಾವನಾ ದೃಷ್ಟಿ ಬಲವಾಯಿತು. ಶಾಸ್ತ್ರೀಯ ವೈಜ್ಞಾನಿಕ ದೃಷ್ಟಿ

ಕಡಮೆ.

ಈಗ ಈ ಕಡೆ ನಮ್ಮ ದೃಷ್ಟಿ ಹರಿಯಬೇಕು.

ಜೀವನದಲ್ಲಿ ಜಗತ್ತಿನಲ್ಲೂ ಸತ್ಯ ಇದೆ. ಅದಕ್ಕೇ ವಿನೋಬಾ ಹೇಳಿದುದು– ಬ್ರಹ್ಮ ಸತ್ಯಂ, ಜಗತ್ ಸ್ಫೂರ್ತಿಃ, ಜೀವನಂ ಸತ್ಯ ಶೋಧನಂ.

ಜೀವನದಲ್ಲಿ ಸತ್ಯವನ್ನು ಅರಸುವುದು ಕಷ್ಟದ ಕೆಲಸ. ಯಾವುದು ಸತ್ಯ ಜೀವನದಲ್ಲಿ? ದೈವೀ ಸಂಪತ್ತಿಯೇ ಅಸುರಿ ಸಂಪತ್ತಿಯೇ? ಹಣವೆ ಗುಣವೆ?
ಕಾಂಗ್ರೆಸ್ಸಿನಲ್ಲಿ ಅಷ್ಟು ದುಡಿದಿರಿ, ಅಷ್ಟು ಸೇವೆ ಮಾಡಿದಿರಿ, ಏನೂ ಗಂಟು ಮಾಡಿಕೊಳ್ಳಲಿಲ್ಲ. ಯಾವ ಪದವಿಗೂ ಏರಲಿಲ್ಲ. ಬದುಕನ್ನು ಹಾಳುಮಾಡಿಕೊಂಡಿರಿ ಎಂದು ಎಷ್ಟೋ ಜನ ನನ್ನನ್ನು ತೆಗಳುತ್ತಾರೆ.

ಬಹಳ ಒಳ್ಳೆಯದು ಮಾಡಿದಿರಿ ಹಿಂದೆ ನಿಂತು. ಯಾವುದಕ್ಕೂ ಆಸೆ ಪಟ್ಟು ಅದಕ್ಕಾಗಿ ತಂತ್ರ ಮಾಡಲಿಲ್ಲ ಎನ್ನುವವರೂ ಇದ್ದಾರೆ.

ಈ ವಿರುದ್ಧ ಅಭಿಪ್ರಾಯಗಳಲ್ಲಿ ಯಾವುದು ಸರಿ? ಗಾಂಧೀವಾದಿಗಳೆಲ್ಲ, ಸರ್ವೋದಯವಾದಿಗಳೆಲ್ಲ ದೂರ ನಿಂತಿದ್ದಾರಲ್ಲ. ಸರಿಯೆ?

ವಿಜ್ಞಾನ ನುಗ್ಗಿ ಬರುತ್ತಿದೆ. ಯಂತ್ರ ಶಾಸ್ತ್ರದ ಹೆಗಲ ಮೇಲೇರಿ ಬರುತ್ತಿದೆ. ಮತಧರ್ಮಗಳೆಲ್ಲ ಅದರ ಮುಂದೆ ಮಾಯವಾಗಿ ಹೋಗಿವೆ.

ಸಮಾಜ ಹೆಚ್ಚು ಹೆಚ್ಚು ಲೌಕಿಕ ಸಮಾಜ ಆಗುತ್ತಿದೆ.ರಾಷ್ಟ್ರಗಳು ಕೇವಲ ಲೌಕಿಕ ಆಗುತ್ತಿವೆ.

ಈ ಪ್ರಾಪಂಚಿಕ ವಾದದಲ್ಲಿ Secularism–ಮಾನವತೆ ಮಾನವೀಯತೆಗಳು ಬಂದಾವೊ ಇಲ್ಲವೋ!
ವಿಶ್ವ ಮಾನವತೆ Universalism ಪ್ರಾಪಂಚಿಕವೇ? ಮಾನವತೆಯೆ ಅವ್ಯಕ್ತ ಆತ್ಮದ ಅರಿವಿನ ಮೇಲೆ ನಿಂತಿಲ್ಲವೇ?

ಮಾನವತೆ ಮಾನವೀಯತೆಗಳು ಲೌಕಿಕವೆ? ನೀತಿಯ ತಳಹದಿ ಇಲ್ಲದೆ ಲೌಕಿಕವಾದ ಎಷ್ಟು ಕಾಲ ನಿಂತೀತು? ಈಗಲೇ ಕುಸಿದು ಬಿದ್ದದೆಯಲ್ಲ.

ಮತಧರ್ಮಗಳ ಉನ್ಮತ್ತತೆಯನ್ನು ಅಡ್ಡ ತರುಬಲು ಬಂತು ಲೌಕಿಕವಾದದ ಉಪಾಯ. ಲೌಕಿಕವಾದ ಬಂದ ಮೇಲೆ ಮತೀಯ ಘರ್ಷಣೆ ನಿಂತಿತು.

ಆದರೆ ಲೌಕಿಕವಾದ ಮತಪಂಥಗಳ ನಡುವಿನ ತಾಟಸ್ಥ್ಯದಿಂದ ಚುರುಕು ಚಾರ್ವಾಕ ವಾದಕ್ಕೆ ತಿರುಗಿಬಿಟ್ಟರೆ? ಉಪಾಯವೇ ಅಪಾಯ ಆದರೆ?

ಅಂಥ ಸಂದರ್ಭದಲ್ಲಿ ನಮ್ಮ ವಿಚಾರ ಶಕ್ತಿಯನ್ನು ಅರಳಿಸಬೇಕು. 'ಧೀಯೋ ಯೋ ನಃ ಪ್ರಚೋದಯಾತ್' ಎಂಬ ಮಂತ್ರವನ್ನು ಜಪಿಸಬೇಕು.

ವಿಚಾರ ಬಲವೇ ಈ ಕಾಲದಲ್ಲಿ ಸರ್ವಬಲ. ಕತ್ತಿಗಿಂತ ಲೇಖನಿ ಹಿರಿದು 'Pen is mightier than the Sword' ಎಂಬ ಗಾದೆಯೇ ಇದೆಯಲ್ಲ.

ಈಗ ಪೂರಾ ಹೀಗೆ ಇಲ್ಲ. ಆದರೂ ಈ ಮಾತು ಬಹುಮಟ್ಟಿಗೆ ಸತ್ಯ. ಅದನ್ನು ಪೂರ್ಣ ಸತ್ಯವಾಗಿ ಮಾಡುವುದು ಲೇಖನಿ ಹಿಡಿಯುವ ಕೈಯ ಕಸುವಿನಲ್ಲದೆ. ಕವಿ ಬ್ರಹ್ಮ ಕವಿ ಪರಮೇಷ್ಠಿ ಎಂಬ ಮಾತನ್ನು ಹಿಂದೆ ಹೇಳುತ್ತಿದ್ದರು.

ಈಗಂತೂ ಕವಿ ಬ್ರಹ್ಮ ಆಗಬೇಕು. ಬ್ರಹ್ಮ ಪ್ರಕೃತಿಯನ್ನು ಸೃಷ್ಟಿ ಮಾಡಿಯಾನು.

ಜಡದಲ್ಲಿ ಜೀವ ತುಂಬಿಯಾನು.

ಲೇಖಕ-ಸಾಹಿತಿ ಜೀವನದಲ್ಲಿ ಭಾವವನ್ನು ತುಂಬಬೇಕು. ಭಾವದಲ್ಲಿ ದೇವ ಮೂಡಬೇಕು.

ವಿನೋಬಾಜಿ ಹೇಳಿದಂತೆ, ರಾಷ್ಟ್ರಗಳನ್ನು ಕಟ್ಟುವ ಶಕ್ತಿ ಮೂರು: ಧನಬಲ, ಶಸ್ತ್ರಬಲ, ಶಾಸ್ತ್ರಬಲ.

ಧನಬಲ. ಶಸ್ತ್ರಬಲಗಳ ರಾಷ್ಟ್ರಗಳ ಕಾಲ ಮುಗಿಯಿತು. ಸಾಮ್ರಾಜ್ಯವಾದ-ಬಂಡವಾಳವಾದ, ಸರ್ವಾಧಿಕಾರವಾದ-ಸೌಮ್ಯವಾದಗಳು ತಮ್ಮ ಆಯುಸ್ಸಿನ ಅಂತ್ಯಕ್ಕೆ ಮುಟ್ಟಿವೆ.

ನೂರಿನ್ನೂರು ವರ್ಷಗಳಿಂದ ಶಾಸ್ತ್ರಬಲ ಪ್ರಜಾಪ್ರಭುತ್ವವಾದ ಗರಿ ಕಟ್ಟಿಕೊಳ್ಳುತ್ತಿದೆ.ಈಗ ಅದು ಗರಿಗೆದರುವ ಕಾಲ.

ಶಾಸ್ತ್ರಬಲ ಅಥವಾ ವಿಚಾರಬಲ ಪ್ರಜಾಪ್ರಭುತ್ವದ ಆವಿಷ್ಕಾರ ಮಾಡಿಸಿದೆ. ದಂಡ ನಿರಪೇಕ್ಷ ರಾಜ್ಯವನ್ನು ತಂದಿದೆ. ಧನಬಲವನ್ನು ನಿರಸನ ಮಾಡಿ ಮಾನವ ವ್ಯಕ್ತಿತ್ವಕ್ಕೆ ಬೆಲೆ ಕೊಟ್ಟಿದೆ.

ಮನುಷ್ಯನ ವಿಭೂತಿಯನ್ನು ಗುರುತಿಸಿದೆ ಶಾಸ್ತ್ರಬಲ. ಧನಕ್ಕೆ ಅಲ್ಲ ಮತ ಜನಕ್ಕೆ ಮತ.

ಪ್ರಜಾಪ್ರಭುತ್ವ ಲೋಕದಲ್ಲಿ ಯಶಸ್ವಿ ಆಗಬೇಕಾದರೆ ಅದರ ಆಧಾರ ಆದ ಶಸ್ತ್ರಬಲವನ್ನು ಬೆಳೆಯಿಸಿಕೊಳ್ಳಬೇಕು.ನಿರ್ಭಯ ವಿಚಾರಶಕ್ತಿ ಬೆಳೆಯಬೇಕು.

ಸಾಹಿತ್ಯ ಜೀವನಸಾಹಿತ್ಯ ಆಗಬೇಕು. ಜೀವನದಲ್ಲಿ ಸತ್ಯವನ್ನು ಶೋಧಿಸಲು ಜೀವನ ಸಾಹಿತ್ಯ ಸತ್ಯಾಗ್ರಹ ಸಾಹಿತ್ಯ ಆಗಬೇಕು.

ಸತ್ಯಾಗ್ರಹ ಧನಬಲ, ಶಸ್ತ್ರಬಲಗಳ ಆಯುಧ ಅಲ್ಲ. ವಿಚಾರದ ಆಯುಧ.ವಿಚಾರದಲ್ಲಿ ಪ್ರೇಮ ತುಂಬಿ ಅದನ್ನು ಸತ್ಯ ಸಾಧನೆಗೆ ಅಸತ್ಯ ನಿರಸನಕ್ಕೆ ಉಪಯೋಗಿಸಬೇಕು.

ಸಾಂಪ್ರದಾಯಿಕ ನಾಗರಿಕತೆಯ ಮಂಟಪ ಕುಸಿದು ಬಿದ್ದಿದೆ. ವಿಚಾರ ಕಂಪದಿಂದ ಜಗತ್ತಿನ ನಾಗರೀಕತೆಗಳೆಲ್ಲ ಒಂದೇ ಗುಂಡಿಯಲ್ಲಿ ಬಂದು ಬಿದ್ದಿವೆ.

ಇದರಿಂದ ಒಂದು ಮಾತು ಕಂಡು ಬಂದಿದೆ. ಮನುಷ್ಯರು ಬೇರೆ ಬೇರೆ ಬಗೆ. 'ಪಿಂಡೇ ಪಿಂಡೇ ಮತಿರ್ಭಿನ್ನಾಃ' ಒಬ್ಬೊಬ್ಬರೂ ಬೇರೆ ಬೇರೆ.

ಇವರಲ್ಲಿ ಭ್ರಾತೃಭಾವ ಬರಬೇಕು.ಎಲ್ಲರಿಗೂ ಸಮಾನ ಆದ ಬಯಕೆ ಇವೆ,ಬೇಡಿಕೆ ಇವೆ. ಎಲ್ಲರೂ ಭೂಮಿತಾಯಿಯ ಮಕ್ಕಳೇ.

ಈ ಭಿನ್ನತೆಯನ್ನು ಕರಗಿಸಿ ಅಳಿಸಿ ಹಾಕುವುದು ಭ್ರಾತೃತ್ವ ಅಲ್ಲ, ಭಿನ್ನತೆಯನ್ನು ಅರಿತುಕೊಳ್ಳುವುದು, ಅರ್ಥಮಾಡಿಕೊಳ್ಳುವುದು ಭ್ರಾತೃತ್ವ

ಈರುಳ್ಳಿ ಒಲ್ಲದವನಿಗೆ ಬಲವಂತವಾಗಿ ಈರುಳ್ಳಿ ತಿನಿಸುವುದಲ್ಲ ಪ್ರೀತಿ, ವಿಶ್ವಾಸ. ನಾವು ಈರುಳ್ಳಿ ತಿಂದರೂ ಅವನಿಗೆ ಅದನ್ನು ಬಡಿಸದೆ ಬೇರೆ ಅವನಿಗೆ ಬೇಕಾದುದನ್ನು ಮಾಡಿ ಬಡಿಸುವುದೇ ಪ್ರೀತಿ.

ಈ ಭಿನ್ನತೆ ಇರದಿದ್ದರೆ ಸೇವೆಗೇ ಅವಕಾಶ ಇರುತ್ತಿರಲಿಲ್ಲ. ಎಲ್ಲರೂ ರೋಗಿಗಳಾದರೆ ಆರೈಕೆ ಮಾಡುವವರು ಯಾರು?

ಭಿನ್ನತೆಯ ಅರಿವು, ಭಿನ್ನತೆಯ ಆದರ ಪ್ರಜಾಪ್ರಭುತ್ವದ ಮಾನವೀಯತೆಯ ಲಕ್ಷಣ. ಆದ್ದರಿಂದಗೇ ಪ್ರಜಾಪ್ರಭುತ್ವದ ತಳಹದಿ ವಿಚಾರ-ಶಾಸ್ತ್ರಬಲ ಎನ್ನುವುದು.

ಒಂದು ರಾಷ್ಟ್ರ ಶಸ್ತ್ರಬಲದಿಂದ ಯಶಸ್ವಿ ಆಗಲು ಆ ರಾಷ್ಟ್ರದ ಜನತೆಯಲ್ಲಿ ಬಹುಮಂದಿ ಶಸ್ತ್ರಬಲ ಸಂಪನ್ನರು ಆಗಬೇಕು. ಇಲ್ಲದಿದ್ದರೆ ಆ ರಾಷ್ಟ್ರ ಯಶಸ್ವಿ ಆಗುವುದು ಕಷ್ಟ.

ಧನಬಲದಿಂದ ರಾಷ್ಟ್ರ ಯಶಸ್ವಿ ಆಗಬೇಕು ಎಂದರೆ ಆ ರಾಷ್ಟ್ರದ ರಾಷ್ಟ್ರಕರೆಲ್ಲರೂ ಧನಬಲ ಸಂಪನ್ನರು ಆಗಬೇಕು. ಬಹುಮಂದಿ ಆದರೂ.

ರಾಷ್ಟ್ರಕ್ಕೆ ಆಧಾರ ಯಾವ ಬಲವೋ ಅದು ರಾಷ್ಟ್ರಕರಲ್ಲಿ ವ್ಯಾಪಕ ಆಗಿ ಹಂಚಿ ಹರಡಿರಬೇಕು. ಕೆಲವೇ ಜನರ ಕೈಯಲ್ಲಿ ಆ ಬಲ ಉಳಿಯಬಾರದು.
ಪ್ರಜಾತಂತ್ರ ವಿಚಾರಬಲವನ್ನು ಅವಲಂಬಿಸಿದ್ದು. ಆದ್ದರಿಂದ ಪ್ರಜೆ ವಿಚಾರ ಸಂಪನ್ನರು ಆಗಬೇಕು.

ಇಷ್ಟು ದಿನ ಶಸ್ತ್ರಬಲವನ್ನು ಅದರಲ್ಲೂ ಆಳರಸರ ಶಸ್ತ್ರಬಲವನ್ನು ಅವಲಂಬಿಸಿ,ನಿಶ್ಚಿಂತರಾಗಿ ಗುಲಾಮರಂತೆ ನಾಯಿ ಬದುಕನ್ನು ಬದುಕಿದ ನಮ್ಮ ರಾಷ್ಟ್ರದಲ್ಲಿ-ಹೊಸದಾಗಿ ಬಂದ ಈ ವಿಚಾರಬಲದ ಪ್ರಜಾರಾಜ್ಯ ಸಫಲ ಆಗಬೇಕಾದರೆ, ರಾಷ್ಟ್ರದ ಕೋಟಿ ಕೋಟಿ ಪ್ರಜೆಗಳಲ್ಲಿ ವಿಚಾರದ ತೇಜಸ್ಸು ಮೂಡಿ ಬರಬೇಕು. ಅನಾಸಕ್ತ, ನಿಃಸ್ವಾರ್ಥ, ನಿಷ್ಪಕ್ಷ, ತೇಜೋವಂತ ವಿಚಾರ ಶಕ್ತಿ ಬರಬೇಕು.

ಈ ವಿಚಾರ ನಿರ್ಭಯವಾಗಿ ಪ್ರಕಟ ಆಗಬೇಕು. ಶುದ್ಧವಾಗಿ ಪ್ರಕಟ ಆಗಬೇಕು. ಆ ವ್ಯವಹಾರದಲ್ಲಿ ಏನೇ ಅಡ್ಡಿ ಆತಂಕ ಬಂದರೂ ಎದುರಿಸಬೇಕು. ಏನೇ ಕಷ್ಟ ಸಹಿಸಬೇಕಾಗಿ ಬಂದರೂ ಸಹಿಸಬೇಕು. ಅದೇ ಸತ್ಯಾಗ್ರಹ.

ಲೋಕದಲ್ಲಿಯೆ ಪ್ರಥಮ ಸತ್ಯಾಗ್ರಹಿ ಎನಿಸಿದ ಪ್ರಹ್ಲಾದ ತನ್ನ ತಂದೆಯ ದುಷ್ಟತನವನ್ನು ಎದುರಿಸಿದುದು ಇದೇ ಶಕ್ತಿಯಿಂದ.

ಇದು ಸಂಸ್ಥೆಗಳಿಂದ ಆಗುವ ಕೆಲಸ ಅಲ್ಲ. ಸಂಸ್ಥೆ-ಸಂಘಟನೆಗಳ ಜೀವಾಳ ವಿಚಾರಬಲ ಅಲ್ಲ. ಸಂಘಟನೆಯಿಂದ ದಾರ್ಢ್ಯಬಂದಿತು. ಔನ್ನತ್ಯ ಬರಲಾರದು.

ವ್ಯಕ್ತಿ ವ್ಯಕ್ತಿಯೂ ವಿಚಾರಶೀಲ ಆಗಬೇಕು. ತನ್ನ ನಡೆ ನುಡಿ ವಿಶ್ವಮಾನವ ಧರ್ಮಸಂಸ್ಥಾಪನೆಗೆ ಸಹಕಾರಿಯೇ ಅಥವಾ ವಿಚ್ಛೇದ ವಿಧ್ವಂಸಕಾರಿಯೇ?

ಲೋಕದಲ್ಲಿ ಅನ್ಯಾಯ, ಅಧರ್ಮ, ವಿರಸ, ವಿಶಮತೆಗಳಿಗೆ ನಾನು ಸಹಕಾರಿಯೇ, ಸಾಕ್ಷಿಯೇ? ಅಥವಾ ಧರ್ಮನ್ಯಾಯ, ಶಾಂತಿ ಸಾಮರಸ್ಯಗಳಿಗೆ ಸಹಕಾರಿಯೇ ನಾನು?

ಪ್ರಜಾತಂತ್ರ ಎಂದರೆ ಪ್ರಭುತ್ವದ ವಿಕೇಂದ್ರೀಕತಣ,ಪ್ರಭುತ್ವ ವಿಸರ್ಜನ. ಎಂದರೆ ಪ್ರಭುತ್ವದ ಧರ್ಮ ಸಂಸ್ಥಾಪನಾ ಕಾರ್ಯ ನ್ಯಾಯಪಾಲನಾ ಕಾರ್ಯ ಸಾಮರಸ್ಯ ಶಾಂತಿಗಳ ಸ್ಥಾಪನೆಯ ಕಾರ್ಯ ಪ್ರಜೆಯದು. ವ್ಯಕ್ತಿ ವ್ಯಕ್ತಿಯದು.

ಮನುಷ್ಯ ಮಾತ್ರ ಆದವನದು ಈ ಜವಾಬ್ದಾರಿ. ಮನುಷ್ಯನಲ್ಲಿ ಈ ತಿಳುವಳಿಕೆ, ಈ ವ್ರತ ನಿಷ್ಠೆ, ಪ್ರಜಾತಾಂತ್ರಿಕ ಜೀವನದ ಶ್ರದ್ಧೆ ಬರಬೇಕು.

ಇಲ್ಲದಿದ್ದರೆ ಪ್ರಜಾತಂತ್ರ ಶಸ್ತ್ರಬಲದ ಅಧಿನಾಯಕತನಕ್ಕೆ ಮಣಿಯುತ್ತದೆ.

(ಸಾಭಾರ-ಕಸ್ತೂರಿ)

# ನಾವು ಆಗಬಯಸಿರುವ ಅಮೆರಿಕಾ ಹೀಗಿದೆ ನೋಡಿ

*- ಡಾ.ಎ.ಎನ್.ನಾಗರಾಜ್*

ನಾನು ಅಮೇರಿಕಾದಲ್ಲಿ ಮತ್ತು ಅಮೇರಿಕದ ವ್ಯಾಪಾರೀ ಸಂಸ್ಕೃತಿಯಲ್ಲಿ ಮುಳುಗಿರುವ ಫಿಲಿಪೈನ್ಸ್ ದೇಶದಲ್ಲಿ ಒಟ್ಟು ಹನ್ನೊಂದು ವರ್ಷ ವಾಸ ಮಾಡಿದ್ದೇನೆ. ಇಂತಹ ಸಂಸ್ಕೃತಿಯ ಅನೇಕ ಹಾನಿಕರ ಪಾರಿಣಾಮಗಳನ್ನು ಸ್ವತಃ ನೋಡಿದ್ದೇನೆ. ಅವುಗಳ ಬಗ್ಗೆ ಲೇಖನಗಳನ್ನು ಮತ್ತು ಪುಸ್ತಕಗಳನ್ನು ಓದಿದ್ದೇನೆ. ನಾವು ಭಾರತದಲ್ಲಿ ಈ ವ್ಯವಸ್ಥೆಯನ್ನು ಈಗ ಸಾರಸಗಟಾಗಿ ಆಮದು ಮಾಡಿಕೊಂಡು ಅದರ ಕೆಲವು ಅಡ್ಡ ಪರಿಣಾಮಗಳನ್ನು ನೋಡುತ್ತಿದ್ದೇನೆ. ಈ ಲೇಖನದಲ್ಲಿ ಈ ಸಂಸ್ಕೃತಿಯಿಂದ ಅಮೇರಿಕದಲ್ಲಿ ಇದುವರೆಗೆ ಆಗಿರುವ ಅಂದರೆ ಮುಂದೆ ಭಾರತದಲ್ಲಿ ಆಗುವ ಕೆಲವು ಪರಿಣಾಮಗಳ ಬಗ್ಗೆ ಬರೆಯುತ್ತಿದ್ದೇನೆ.

ಅಮೆರಿಕದ ವ್ಯಾಪಾರೀ ಸಂಸ್ಕೃತಿಯ ಒಲವು ಹೆಚ್ಚಾಗಿರುವ ಭಾರತೀಯರು ಈಗ ಭಾರತದ ಆರ್ಥಿಕ ನೀತಿಯನ್ನು ರೂಪಿಸುತ್ತಿದ್ದಾರೆ. ಇವರೆಲ್ಲ ನನ್ನ ಹಾಗೆ ಅಮೇರಿಕಾದ ಈಗಿನ ಜನ ಜೀವನದಲ್ಲಿ ಎದ್ದು ಕಾಣುವ ಒಳಿತುಗಳನ್ನು ಅನುಭವಿಸಿದವರು, ನೋಡಿರುವವರು, ಅವುಗಳ ಬಗ್ಗೆ ಕೇಳಿರುವವರು, ಅಥವಾ ಓದಿರುವವರು. ಇವರಲ್ಲಿ ಅನೇಕ ರಾಜಕೀಯ ವ್ಯಕ್ತಿಗಳು, ಆರ್ಥಿಕ ತಜ್ಞರು, ವಿಜ್ಞಾನಿಗಳು, ಕೈಗಾರಿಕೋದ್ಯಮಿಗಳು ಮತ್ತು ಅಧಿಕಾರಿಗಳು ಅಮೇರಿಕದಲ್ಲಿ ವಿದ್ಯಾಭ್ಯಾಸ ಮಾಡಿದವರು ಮತ್ತು ಕೆಲವರು ಹಲವಾರು ವರ್ಷ ಅಲ್ಲಿ ಕೆಲಸ ಮಾಡಿ ಬಂದವರು. ಇಂತಹವರಲ್ಲಿ ೯೦%ರಷ್ಟು ಜನಗಳಾದರೂ ಅಲ್ಲಿಯ ಸುಖ ಸವಲತ್ತುಗಳನ್ನು ಅನುಭವಿಸಿ ಅಲ್ಲಿಯ ಆರ್ಥಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ, ವಿದ್ಯಾಭ್ಯಾಸ ಕ್ರಮ ಇವುಗಳನ್ನು ಮೆಚ್ಚಿಕೊಂಡವರು. ನನ್ನಂಥವರಿಗೆ ಕಾಣುವ ವ್ಯಾಪಾರೀ ಸಂಸ್ಕೃತಿಯ ದೋಷಗಳಾದ ವ್ಯಾಪಕವಾದ ಕ್ರೌರ್ಯ, ಅಸಮರ್ಪಕ ಮಾನವ ಸಂಬಂಧಗಳು, ಮದ್ಯ-ಮಾದಕ ದ್ರವ್ಯ ವ್ಯಸನಿಗಳು, ಅತಿ ಹೆಚ್ಚಿನ ಪ್ರಮಾಣದ ವಿವಾಹ ವಿಚ್ಛೇದನ, ವಯಸ್ಸಾದ ತಂದೆ-ತಾಯಿಯರ ಬಗ್ಗೆ ಇರುವ ಅಸಡ್ಡೆ, ವ್ಯಾಪಕ ಪರಿಸರ ಮಾಲಿನ್ಯ ಇತ್ಯಾದಿಗಳು ಇಂಥವರಿಗೆ ಕಾಣುವುದಿಲ್ಲ ಅಥವಾ ಅವು ತಾತ್ಕಣಿಕ ಪ್ರಯೋಜನಗಳ ಮಧ್ಯೆ ಮುಖ್ಯವೆನಿಸುವುದಿಲ್ಲ.ಭಾರತದ ಸಾಧಾರಣ ಜನತೆಗೆ ಮತ್ತು ಆಳುವ ವರ್ಗದ ಅನೇಕರಿಗೆ ಕೂಡ ಇವುಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇಲ್ಲ. ಆದ್ದರಿಂದಲೇ ನಾವು ದೊಡ್ಡ ಪ್ರಮಾಣದಲ್ಲಿ ಅಲ್ಲಿಯ ವ್ಯಾಪಾರೀ ಸಂಸ್ಕೃತಿಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ.

**ವಸ್ತುಗಳಿಗೆ ಅತಿ ಪ್ರಧಾನ್ಯತೆ ಮತ್ತು ಕಮರಿದ ಮಾನವ ಸಂಬಂಧಗಳು :**

ಅಮೇರಿಕದಲ್ಲಿ ವ್ಯಾಪಾರೀ ಸಂಸ್ಕೃತಿಯು ಅಲ್ಲಿಯ ಜನಜೀವನದ ಮೇಲೆ

ಆಳವಾದ ಅನೇಕ ಕೆಟ್ಟ ಪರಿಣಾಮಗಳನ್ನುಂಟು ಮಾಡಿದೆ. ಕೈಗಾರಿಕೋದ್ಯಮಿಗಳು ತಮ್ಮ ಸರಕುಗಳನ್ನು ಮಾರಾಟ ಮಾಡಲು ಜಾಹೀರಾತುಗಳ ಮೂಲಕ ಜನರ ಮನಸ್ಸಿನಲ್ಲಿ ಹಣ ಸಂಪಾದನೆ ಮಾಡುವುದು ಮತ್ತು ವಸ್ತುಗಳನ್ನು ಕೊಳ್ಳುವುದೇ ಜೀವನದಲ್ಲಿ ಸುಖ-ಸಂತೋಷಗಳನ್ನು ಪಡೆದುಕೊಳ್ಳುವುದಕ್ಕೆ ಅತ್ಯಂತ ಮುಖ್ಯವಾದದ್ದು ಎಂಬ ಗಾಢವಾದ ನಂಬಿಕೆಯನ್ನು ಬಿತ್ತಿ ಬೆಳೆಸಿವೆ. ಹಾಗೆ ಮಾಡುವುದಕ್ಕೆ ಬಹುತೇಕ ಜನಗಳು ತಮ್ಮ ಜೀವನದಲ್ಲಿ ಬೆಳಗಿನಿಂದ ಸಂಜೆಯವರೆಗೆ ಎರಡು-ಮೂರು ಕೆಲಸಗಳಲ್ಲಿ ದುಡಿಯುತ್ತಾರೆ. ಹಾಗೆ ದುಡಿದು ಮನೆಗೆ ಬಂದರೆ, ತಮ್ಮ ಹೆಂಡತಿ-ಗಂಡ-ಮಕ್ಕಳು ಮತ್ತು ಇತರರ ಜತೆ ಸನ್ಯೋನ್ಯವಾದ, ಅಮೂಲ್ಯವಾದ,ಜೀವನದಲ್ಲಿ ಅತ್ಯಂತ ತೃಪ್ತಿ, ಆನಂದಗಳನ್ನು ಕೊಡುವ ಪ್ರೀತಿ-ವಿಶ್ವಾಸ ಪ್ರಧಾನವಾದ,ಸಂಬಂಧಗಳನ್ನು ಬೆಳೆಸಿಕೊಳ್ಳುವುದಕ್ಕೆ ಬೇಕಾದ ಸಮಯ ಮತ್ತು ತಾಳ್ಮೆ ಇರುವುದಿಲ್ಲ. ಅಷ್ಟೇ ಅಲ್ಲ, ಅಂತಹ ಸಂಬಂಧಗಳ ಪ್ರಾಮುಖ್ಯತೆಯ ಬಗ್ಗೆ ಅಥವಾ ಸಾಧ್ಯತೆಯ ಬಗ್ಗೆ ಅವರಿಗೆ ಅರಿವೇ ಇರುವುದಿಲ್ಲ. ಹಣ ಸಂಪಾದನೆಗೆ ದುಡಿದ ಮೇಲೆ ತಮಗೆ ಉಳಿದಿರುವ ಅಲ್ಪ ಸಮಯದಲ್ಲಿ ಬಹು ಭಾಗವನ್ನು ತಮಗಿಷ್ಟವಾದ ಟೀವಿ ಕಾರ್ಯಕ್ರಮವನ್ನು ನೋಡುವುದರಲ್ಲಿ ಕಳೆದುಬಿಡುತ್ತಾರೆ. ಹಾಗಾಗಿ ಜನಗಳ ಮಧ್ಯೆ ಅರ್ಥಪೂರ್ಣ ಮತ್ತು ಆತ್ಮೀಯ ಸಂಬಂಧಗಳು ಬೆಳೆಯುವುದು ಅಲ್ಲಿ ತುಂಬಾ ಕಷ್ಟ. ಅಲ್ಲದೆ ತಮ್ಮ ಸರಕುಗಳನ್ನು ಹೆಚ್ಚು ಮಾರಾಟ ಮಾಡುವುದಕ್ಕೆ, ಹೊಸ ವಸ್ತುಗಳ ಬಗ್ಗೆ ಅತಿಯಾದ ವ್ಯಾಮೋಹ ಮತ್ತು ಹಳೆಯ ವಸ್ತುಗಳ ಬಗ್ಗೆ ಅಸಹನೆ ಮತ್ತು ತಾತ್ಸಾರ ಮುಂತಾದ ಜೀವನ ಧೋರಣೆಗಳನ್ನು ಜನಗಳಲ್ಲಿ ಉದ್ಯಮಿಗಳು ಮತ್ತು ಮಾರಾಟಗಾರರು ವ್ಯವಸ್ಥಿತವಾಗಿ ಬೆಳೆಸಿದ್ದಾರೆ.ಇದೇ ಪ್ರವೃತ್ತಿಯು ಮಾನವ ಸಂಬಂಧಗಳಿಗೂ ಸಹಜವಾಗಿ ವ್ಯಾಪಿಸಿಬಿಡುತ್ತದೆ. ಮದುವೆಯಾದ ಕೆಲವು ವರ್ಷಗಳಲ್ಲಿ ಹೆಂಡತಿ-ಗಂಡ ಹಳೆಯ ವಸ್ತುಗಳಂತಾಗಿ ಬಿಡುತ್ತಾರೆ.ಮನೆಯೊಳಗೆ ಮೇಕಪ್ ಮಾಡಿಕೊಳ್ಳದ, ಕೆದರಿದ ತಲೆಯ ಸಂಗಾತಿಗಿಂತ, ಮನೆಯ ಹೊರಗಡೆ ಮಿರಿ ಮಿರಿ ಮಿಂಚುವ ಹೊಸ ಸ್ನೇಹಿತ/ಸ್ನೇಹಿತೆ ಹೆಚ್ಚು ಆಕರ್ಷಕವಾಗುತ್ತಾರೆ.ಹಳೆಯ ವಸ್ತುಗಳನ್ನು ಬಿಟ್ಟು ಹೊಸ ವಸ್ತುಗಳನ್ನು ಕೊಳ್ಳುವ ಹಾಗೆ ಹಳೆಯ ಸಂಗಾತಿಯಿಂದ ವಿಚ್ಛೇದನ ಪಡೆದು ಹೊಸ ಸಂಗಾತಿಯನ್ನು ಪಡೆದುಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡು ಆಘಾತ ಮತ್ತು ನೋವುಗಳನ್ನು ಅನುಭವಿಸುವ ಮಕ್ಕಳ ಸಂಖ್ಯೆ ಅಮೇರಿಕದಲ್ಲಿ ಅಪಾರ.ಅಲ್ಲಿಯ ಅನೇಕ ರಾಜ್ಯಗಳಲ್ಲಿ ವಿವಾಹ ವಿಚ್ಛೇದನದ ಪ್ರಮಾಣವು ಶೇಕಡ೫೦ಕ್ಕಿಂತ ಹೆಚ್ಚು. ಉಳಿದ ಶೇಕಡ ೨೫ರಷ್ಟು ಸಂಸಾರಗಳಲ್ಲಿ ಗಂಡ-ಹೆಂಡಿರು ಸುಖವಾಗಿಲ್ಲದಿದ್ದರೂ ಮಕ್ಕಳಿಗೋಸ್ಕರವೋ ಅಥವಾ ಬೇರೆ ಸಂಗಾತಿಯನ್ನು ಹುಡುಕಲು ತಾಳ್ಮೆ ಇಲ್ಲದ ಕಾರಣಕ್ಕೋ ಒಟ್ಟಿಗೆ ಇರುತ್ತಾರೆ!

ಹಳೆಯ ವಸ್ತುಗಳ ಬಗ್ಗೆ ಇರುವ ತಾತ್ಸಾರ ಮತ್ತು ಜಿಗುಪ್ಸೆಯ ಧೋರಣೆಯು ಸಾಧಾರಣ ಜನಗಳಲ್ಲಿ ತಮ್ಮ ತಂದೆ-ತಾಯಿಯರೊಡನೆ ಇರುವ ಸಂಬಂಧಕ್ಕೂ ಚೆಲ್ಲುತ್ತದೆ. ಅವರೂ ಹಳೆಯ ವಸ್ತುಗಳಂತೆಯೇ ಅಲ್ಲವೇ? ಅನೇಕ ಅಮೇರಿಕನ್ನರು ತಮ್ಮ ತಂದೆಯ ಬಗ್ಗೆ ಇತರರ ಜತೆ ಮಾತನಾಡುವಾಗ 'ಆತ ನನ್ನ ಹಳೆಯ ಮನುಷ್ಯ'ಎಂದು ಹೇಳುವುದು ಅತಿ ಸಾಮಾನ್ಯ. ತಂದೆ-ತಾಯಿಯರೂ

ಕೂಡ ತಮ್ಮ ಬೆಳೆದ ಮಕ್ಕಳ ಜತೆ ಇರಲು ಬಯಸುವುದಿಲ್ಲ. ಅವರಿಗೂ ತಾವು ಹಳೆಯ 'ವಸ್ತುಗಳು', ಹೊಸ ವಸ್ತುಗಳಂತಿರುವ ಮಕ್ಕಳ ಜತೆ ವಾಸ ಮಾಡುವುದು ಕಷ್ಟ ಎಂಬ ಭಾವನೆಯು ಅಲ್ಲಿಯ ವಾತಾವರಣದಲ್ಲಿ ತಾನಾಗಿಯೇ ಬರುತ್ತದೆ. ಅದ್ದರಿಂದಲೇ ಅವರ ಇಳಿ ವಯಸ್ಸಿನಲ್ಲಿ ಅವರಿಗೆ ವೃದ್ಧಾಶ್ರಮಗಳೇ ಸ್ವಾಭಾವಿಕ ತಾಣಗಳಾಗಿಬಿಡುತ್ತವೆ.

**ಮಾದಕ ವಸ್ತುಗಳ ವ್ಯಸನಿಗಳು:**

ಆತ್ಮೀಯ ಮಾನವ ಸಂಬಂಧದಿಂದ ದೊರಕುವ ಬಹುಕಾಲ ನಿಲ್ಲುವ ಆನಂದ ತೃಪ್ತಿಗಳು ವಸ್ತುಗಳಿಂದ ದೊರಕುವುದು ಅಸಾಧ್ಯ ಆದ್ದರಿಂದಲೇ ಅವು ದೊರಕದೇ ಇರುವ ಅಮೇರಿಕನ್ನರಲ್ಲಿ ಅನೇಕರು ಮದ್ಯ ಮತ್ತು ಇತರ ಮಾದಕ ದ್ರವ್ಯಗಳಿಗೆ ಮೊರೆ ಹೋಗುತ್ತಾರೆ. ಟೀವಿ ಮತ್ತು ಇತರ ಮಾಧ್ಯಮಗಳಲ್ಲಿ ಪದೇ ಪದೇ ಲೈಂಗಿಕ ಅತ್ಯಾಚಾರ, ಕೊಲೆ ಮತ್ತು ಇತರ ಹಿಂಸಾತ್ಮಕ ದೃಶ್ಯಗಳನ್ನು ಮತ್ತೆ ಕೆಲವರು ಹೆಣ್ಣಿನ ಮೇಲೆ ಅತ್ಯಚಾರ ಮಾಡುವುದು, ಇತರ ಜನರನ್ನು ಹಣಕ್ಕಾಗಿ ಅಥವಾ ಕೊಲೆಯಿಂದ ದೊರಕುವ ವಿಕೃತವಾದ ಆನಂದಕ್ಕಾಗಿ ಕೊಲೆಮಾಡುವುದು,ಅಮಾಯಕರನ್ನು ಹಿಂಸಿಸುವುದು ಇತ್ಯಾದಿ ಮಾನವ ವಿರೋಧಿ ಕೃತ್ಯಗಳನ್ನು ಸದಾ ನೋಡುತ್ತಿರುವುದರಲ್ಲಿ ಆನಂದ ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಒಂದು ವೈಜ್ಞಾನಿಕ ಸಮೀಕ್ಷೆಯ ಪ್ರಕಾರ ಅಮೆರಿಕಾದ ಸಾಧಾರಣ ಮಕ್ಕಳು ತಮ್ಮ ಮೊದಲ ೧೮ವರ್ಷಗಳಲ್ಲಿ ಟೀವಿಯಲ್ಲಿ ಸುಮಾರು ೫೦೦೦ ಅತ್ಯಾಚಾರಗಳನ್ನೂ, ೫೦೦೦ ಕೊಲೆಗಳನ್ನೂ ಮತ್ತು ೧೦೦೦೦ ಇತರ ಹಿಂಸಾತ್ಮಕ ದೃಶ್ಯಗಳನ್ನೂ ನೋಡುತ್ತಾರಂತೆ! ಅಮೇರಿಕಾದ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು, ಅದಕ್ಕೆ ಪೂರಕವಾಗಿ ನಿರ್ಮಿಸುತ್ತಿರುವ ಹಿಂಸೆಯನ್ನು ವೈಭವೀಕರಿಸುವ ಸಿನಿಮಾಗಳು, ಟೀವಿ ದೃಶ್ಯಗಳು, ಇಂಟರ್‌ನೆಟ್‌ನಲ್ಲಿ ದೊರಕುವ ಹಿಂಸಾತ್ಮಕ ಆಟಗಳು ಮತ್ತು ದೃಶ್ಯಗಳು ಇತ್ಯಾದಿಗಳನ್ನು ಕಳೆದ ಎರಡು ಮೂರು ದಶಕಗಳಲ್ಲಿ ಬೆಂಗಳೂರಿನಂತಹ ನಗರಗಳಲ್ಲಿ ಜನಗಳು ಅಧಿಕ ಪ್ರಮಾಣದಲ್ಲಿ ನೋಡುತ್ತಿರುವುದರಿಂದ, ಅಲ್ಲಿ ಹಿಂದೆ ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದ ಕೊಲೆ ಮತ್ತು ಹೆಣ್ಣಿನ ಮೇಲೆ ಅತ್ಯಾಚಾರ ಮಾಡುವವರ ಸಂಖ್ಯೆ ಈಗ ಅತಿಯಾಗಿ ಹೆಚ್ಚಾಗುತ್ತಿದೆ.

**ಕಡೆಗಾಲದಲ್ಲಿ ತಂದೆ-ತಾಯಿಯರ ದಯನೀಯ ಸ್ಥಿತಿ:**

ಹಣ-ವಸ್ತುಗಳ ಸಂಪಾದನೆಯಲ್ಲಿ ಮುಳುಗಿ ತಮ್ಮ ಸಮಯವನ್ನೆಲ್ಲಾ ಅದಕ್ಕಾಗಿ ಮೀಸಲಿಡುವ ಅಮೇರಿಕದ ಬಹುತೇಕ ತಂದೆ-ತಾಯಿಯರು ತಮ್ಮ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರವಹಿಸುವುದಿಲ್ಲ.ತಂದೆ-ತಾಯಿಯರ ಗಮನ ಮತ್ತು ಪ್ರೀತಿ ಇಲ್ಲದೆ ಬೆಳೆದ ಮಕ್ಕಳಲ್ಲಿ ಅನಾಥ ಪ್ರಜ್ಞೆಯು ಸುಲಭವಾಗಿ ಬೆಳೆಯುತ್ತದೆ. ಮದ್ಯ-ಮಾದಕ ವಸ್ತುಗಳ ಮಾರಾಟಗಾರರ ಮತ್ತು ಜತೆಗಾರ ವ್ಯಸನಿಗಳ ಮಕ್ಕಳ ಪ್ರಭಾವಕ್ಕೆ ಇಂತಹ ಮಕ್ಕಳು ಸುಲಭವಾಗಿ ಸಿಕ್ಕಿಹಾಕಿಕೊಳ್ಳುತ್ತಾರೆ. ಆದ್ದರಿಂದಲೇ, ಮಾದಕವಸ್ತುಗಳ ವ್ಯಸನಿಗಳಾಗಿರುವ ಮಕ್ಕಳ ಸಂಖ್ಯೆಯು ಅಲ್ಲಿಯ ಗ್ರಾಮಾಂತರ ಪ್ರದೇಶಗಳ ಪ್ರೈವರಿ ಶಾಲೆಗಳಲ್ಲಿ ಕೂಡ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ! ಆದರೂ ಕೆಲವು ತಂದೆ-ತಾಯಿಯರು ಮಾತ್ರ ಪ್ರಜ್ಞಾಪೂರ್ವಕವಾಗಿ ವಸ್ತುಗಳ ಮತ್ತು

ಹಣ ಸಂಪಾದನೆಯ ಬಗ್ಗೆ ಅತಿ ಹೆಚ್ಚು ಗಮನ ಕೊಡದೆ ತಮ್ಮ ಸಂಗಾತಿಗೆ ಮತ್ತು ಮಕ್ಕಳಿಗೆ ಹೆಚ್ಚು ಗಮನ ಕೊಟ್ಟು ಉತ್ತಮವಾದ ಮತ್ತು ಆತ್ಮೀಯವಾದ ಮಾನವ ಸಂಬಂಧಗಳನ್ನು ಬೆಳೆಸಿಕೊಳ್ಳುವುದೂ ಉಂಟು.

**ಮಕ್ಕಳ ಮನಸ್ಸಿನ ಬೆಳವಣಿಗೆಯ ಮೇಲೆ ಹಾನಿಕರ ಪರಿಣಾಮಗಳು:**

ಕೆಲವು ವೈಜ್ಞಾನಿಕ ಅಧ್ಯಯನಗಳ ಪ್ರಕಾರ ಟೀವಿ-ಕಂಪ್ಯೂಟರ್ ಮುಂತಾದ ದೃಶ್ಯ ಮಾಧ್ಯಮಗಳನ್ನು ಹೆಚ್ಚು ಬಳಸುವ ಮಕ್ಕಳಲ್ಲಿ ವೈಚಾರಿಕ ಶಕ್ತಿ, ತಾಳ್ಮೆ, ದಯೆ, ಕ್ಷಮೆ, ಪ್ರೀತಿಸುವ ಶಕ್ತಿ, ಪ್ರಶಾಂತ ಮನಸ್ಥಿತಿ ಮುಂತಾದ ಗುಣಗಳನ್ನು ನಿರ್ಧರಿಸುವ ಮಿದುಳಿನ ಮುಂಭಾಗದ ಎಡಭಾಗವು ಚೆನ್ನಾಗಿ ಬೆಳೆಯುವುದಿಲ್ಲ.ಆದ್ದರಿಂದಲೇ ಅಮೆರಿಕದ ಅಂತಹ ಅನೇಕ ಮಕ್ಕಳಲ್ಲಿ ಈ ಸಕಾರಾತ್ಮಕ ಗುಣಗಳು ಬೆಳೆಯದೆ ಬದಲಿಗೆ ಬಹು ಬೇಗ ಬರುವ ಕೋಪ, ಸ್ವಾರ್ಥ, ಕ್ರೌರ್ಯ ಇತ್ಯಾದಿ ನಕಾರಾತ್ಮಕ ಗುಣಗಳನ್ನು ಬೆಳೆಸುವ ಮಿದುಳಿನ ಬಲಭಾಗವು ಚೆನ್ನಾಗಿ ಬೆಳೆದಿರುತ್ತವೆ.ಇದರ ಪರಿಣಾಮವಾಗಿ ಸಮಾಜದಲ್ಲಿ ಕೊಲೆಗಳು, ಆತ್ಮಹತ್ಯೆಗಳು, ಹಿಂಸಾತ್ಮಕ ಕೃತ್ಯಗಳು ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ.

**ಸಣ್ಣ ವ್ಯಾಪಾರಿಗಳ-ಉದ್ದಿಮೆದಾರರ ನಿರ್ನಾಮ:**

ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡುವ ಶಕ್ತಿ ಉಳ್ಳವರು ಮೊದಮೊದಲು ಎಲ್ಲ ವಸ್ತುಗಳು ಒಂದೇ ಕಡೆ ಸಿಕ್ಕುವ ಬೃಹದಾಕಾರದ 'ಮಾಲ್'ಗಳನ್ನು ಸ್ಥಾಪಿಸಿ, ಅಲ್ಲಿ ವಸ್ತುಗಳ ಬೆಲೆಯನ್ನೂ ಬಹುಮಟ್ಟಿಗೆ ಇಳಿಸಿಬಿಡುತ್ತಾರೆ. ಅಷ್ಟು ಕಡಿಮೆ ಬೆಲೆಗೆ ಸಣ್ಣ ವ್ಯಾಪಾರಿಗಳು ಮತ್ತು ಉದ್ದಿಮೆದಾರರು ವಸ್ತುಗಳನ್ನು ಉತ್ಪಾದಿಸುವುದು ಅಥವಾ ಮಾರುವುದು ಅಸಾಧ್ಯವಾಗಿ ಕಾಲಕ್ರಮೇಣ ಅವರುಗಳು ದಿವಾಳಿಯಾಗಿ ತಮ್ಮ ಅಂಗಡಿಗಳನ್ನು ಅಥವಾ ಉದ್ಯಮಗಳನ್ನು ಮುಚ್ಚಿಬಿಡುತ್ತಾರೆ. ಇಂತಹ ಮುಚ್ಚಿರುವ ಅಂಗಡಿಗಳಿರುವ ಪೇಟೆಗಳ ನಿರ್ಜನ ಬೀದಿಗಳು ಅನೇಕ ಊರುಗಳಲ್ಲಿ ಅತಿ ಸಾಮಾನ್ಯ. ಅಮೇರಿಕಾದಲ್ಲಿ ಈಗ ಸಣ್ಣ ಉದ್ಯಮಿಗಳಿಗೆ ಅವಕಾಶಗಳು ಅತ್ಯಂತ ಕಡಿಮೆ.

**ಬಡವ ಬಲ್ಲಿದರ ನಡುವಿನ ಕಂದರ:**

ಬಹುತೇಕ ಉದ್ಯಮಗಳು ಕೆಲವೇ ಕೋಟ್ಯಾಧಿಪತಿಗಳ ಅಧೀನದಲ್ಲಿವೆ. ಶೇಕಡ ೯೯ಕ್ಕಿಂತ ಹೆಚ್ಚು ಜನ ಇವರುಗಳ ಅಧೀನದಲ್ಲಿ ಕೆಲಸ ಮಾಡುವವರು. ಹಲವು ವರ್ಷಗಳಿಗೊಮ್ಮೆ ಇಡೀ ಆರ್ಥಿಕ ವ್ಯವಸ್ಥೆಯು ಕುಸಿದು ಬಿದ್ದಾಗ ಲಕ್ಷಾಂತರ ಜನ ತಮ್ಮ ಕೆಲಸಗಳನ್ನು ಕಳೆದುಕೊಳ್ಳುತ್ತಾರೆ. ತಮ್ಮ ಮನೆಗಳ ಮೇಲಿರುವ ಸಾಲಗಳನ್ನು ತೀರಿಸಲಾರದೆ, ಸಾಲಗಾರರಿಗೆ ಅಡವಿಟ್ಟಿರುವ ತಮ್ಮ ಮನೆಗಳನ್ನು ಕಳೆದುಕೊಂಡು ತಮ್ಮ ಹಳೆಯ ಕಾರುಗಳಲ್ಲೇ ವಾಸ ಮಾಡುತ್ತಿರುವುದನ್ನು ನಾನು ನೋಡಿದ್ದೇನೆ. ಅದೇ ಸಮಯದಲ್ಲಿ ಕೋಟ್ಯಾಧಿಪತಿಗಳು ತಮ್ಮ ಐಶ್ವರ್ಯವನ್ನು ಮತ್ತೂ ಹೆಚ್ಚಿಸಿಕೊಳ್ಳುತ್ತಾರೆ. ಈಗಲೂ ಶಿಕಾಗೊ,ನ್ಯೂಯಾರ್ಕ್ ಮುಂತಾದ ಪಟ್ಟಣಗಳಲ್ಲಿ ಆರ್ಥಿಕವಾಗಿ ಅನುಕೂಲವಾಗಿರುವ ಜನಗಳು ಪಟ್ಟಣದ ಒಂದು ಭಾಗದಲ್ಲಿ ವಾಸಿಸುತ್ತಿದ್ದರೆ, ಆ ಭಾಗಕ್ಕೆ ಸೇರಿದಂತಿರುವ ಮತ್ತೊಂದು ಭಾಗದಲ್ಲಿ ಕಡುಬಡವರು ವಾಸಿಸುತ್ತಿರುತ್ತಾರೆ.ಬಡವರು ಉಳ್ಳವರಿಗೆ ತೊಂದರೆ ಕೊಡದಂತೆ ಪೋಲೀಸರು

ಸಾಧ್ಯವಾದಷ್ಟು ರಕ್ಷಣೆ ಕೊಟ್ಟರೂ, ಉಳ್ಳವರು ನಿಶ್ಚಿಂತೆಯಿಂದ ಇರುವಂತಿಲ್ಲ. ಹೋದ ವರ್ಷದ ನನ್ನ ಅಮೆರಿಕಾ ಪ್ರವಾಸದಲ್ಲಿ, ಶಿಕಾಗೊ ನಗರದಲ್ಲಿ ನನ್ನ ಮಗಳು ವಾಸಮಾಡುತ್ತಿರುವ ಮನೆಯಿಂದ ಅರ್ಧ ಕಿಲೊಮೀಟರು ದೂರದಲ್ಲಿರುವ ಕರಿಯ ಜನಗಳ ವಾಸಸ್ಥಳಗಳ ಹತ್ತಿರಕ್ಕೂ ಸುಳಿಯುವುದು ಅಪಾಯಕರ ಎಂದು ನನ್ನ ಮಗಳು ಎಚ್ಚರಿಕೆ ಕೊಟ್ಟಿದ್ದಳು. ಎರಡು ವರ್ಷದ ಹಿಂದೆ ನಾನು ಅಲ್ಲಿಗೆ ಭೇಟಿ ಕೊಟ್ಟಿದ್ದಾಗ ಅಲ್ಲಿಯ ಪರಿಸ್ಥಿತಿಯು ಇಷ್ಟೊಂದು ಕೆಟ್ಟಿರಲಿಲ್ಲ. ಏಕೆಂದರೆ, ಪ್ರತಿ ವರ್ಷ ಅಲ್ಲಿ, ಬಡವರ ಮತ್ತು ಐಶ್ವರ್ಯವಂತರ ಮಧ್ಯೆ ಇರುವ ಅಂತರ ಹೆಚ್ಚಾಗುತ್ತಿದೆ.ಇಂತಹ ಬಡ ಜನಗಳು ಹಣಕ್ಕಾಗಿ ಕಳ್ಳತನ ಮಾಡುವುದಲ್ಲದೆ, ಕೊಲೆ ಮಾಡುವುದಕ್ಕೂ ಹೇಸುವುದಿಲ್ಲ. ಹಾಗೆ ಮಾಡುವುದೇ ಅನೇಕರ ವೃತ್ತಿಯಾಗಿಬಿಟ್ಟಿದೆ.

**ಪರಿಸರ ಮಾಲಿನ್ಯ:**

ಅಮೇರಿಕದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಹುತೇಕ ಉದ್ಯಮಗಳು ಖಾಸಗಿ ವಲಯದಲ್ಲಿವೆ. ಯಾವ ಖಾಸಗಿ ಉದ್ಯಮವಾದರೂ ಅವುಗಳ ಮುಖ್ಯ ಉದ್ದೇಶ ಹೇಗಾದರೂ ಏನಾದರೂ ಮಾಡಿ ಅತ್ಯಧಿಕ ಲಾಭ ಗಳಿಸುವುದು. ಅಲ್ಲದೆ, ಯಾವುದೇ ವಸ್ತುವಿನ ಉತ್ಪಾದನೆ ಮತ್ತು ಮಾರಾಟದಿಂದ ಅತಿ ಹೆಚ್ಚು ಲಾಭ ಪಡೆಯಬೇಕಾದರೆ ಅದನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಬೇಕು ಮತ್ತು ಮಾರಾಟ ಮಾಡಬೇಕು. ಆ ವಸ್ತುವು ಬಹುಕಾಲ ಬಾಳುವ ರೀತಿಯಲ್ಲಿ ಅದನ್ನು ವಿನ್ಯಾಸ ಗೊಳಿಸಿದರೆ ಅದು ಹೆಚ್ಚು ಮಾರಾಟವಾಗುವುದಿಲ್ಲ. ಹಾಗಾಗಿ ಅನೇಕ ವಸ್ತುಗಳ ಉತ್ಪಾದಕರು ಅವು ಹೆಚ್ಚು ಕಾಲ ಬಾಳದ ರೀತಿಯಲ್ಲಿ ಅವನ್ನು ವಿನ್ಯಾಸಗೊಳಿಸುತ್ತಾರೆ. ಅವು ಹೆಚ್ಚು ಆಕರ್ಷಕವಾಗುವುದಕ್ಕೆ ಅವುಗಳ ಉತ್ಪಾದನೆಯಲ್ಲಿ, ಮಾನವರ ಆರೋಗ್ಯಕ್ಕೆ ಮತ್ತು ಪರಿಸರಕ್ಕೆ ಹಾನಿಕರವಾದ ಅನೇಕ ರಾಸಾಯನಿಕಗಳನ್ನು ಬಳಸುತ್ತಾರೆ. ಇದರ ಮತ್ತು ರಾಸಾಯನಿಕ ಕೃಷಿಯ ಪರಿಣಾಮವಾಗಿ ಸಾವಿರಾರು ಜನಗಳಿಗೆ ಕ್ಯಾನ್ಸರುಗಳು,ಅಲರ್ಜಿಗಳು ಮತ್ತು ಅಂಗವಿಕಲ ಮಕ್ಕಳ ಜನನಕ್ಕೆ ಕಾರಣವಾಗುತ್ತಿವೆ. ಇಂತಹ 'ಅಭಿವೃದ್ಧಿ' ಚಟುವಟಿಕೆಗಳಿಂದ ಕೆಲವರು ಮಾತ್ರ ಹೆಚ್ಚು ಲಾಭಗಳಿಸಿಕೊಂಡು ಶ್ರೀಮಂತರಾಗುತ್ತಾರೆ. ಆದರೆ ಲಕ್ಷಾಂತರ ಜನಗಳು ಬಡವರಾಗಿಯೇ ಉಳಿದು, ಅವರ ಆರೋಗ್ಯ ಹಾಳಾಗಿ ಅವರ ಜೀವನ ನರಕಮಯವಾಗುತ್ತಿದೆ.

ಅಮೇರಿಕದಲ್ಲಿ ಪ್ರತಿ ವರ್ಷ ಲಕ್ಷಾಂತರ ಹಳೆಯ ಕಾರುಗಳು, ಕೋಟ್ಯಾಂತರ ಹಳೆಯ ಟೈರುಗಳು, ಬಾಟಲುಗಳು, ಹಲವಾರು ಕೋಟಿ ಟನ್ನುಗಳಷ್ಟು ಕೈಗಾರಿಕೆಗಳಿಂದ ಹೊರಬರುವ ಹೊಗೆ, ಲಕ್ಷಾಂತರ ಟನ್ನು ಕೀಟನಾಶಕಗಳು, ವಿಕಿರಣ ವಸ್ತುಗಳು, ಪಾದರಸ, ಆರ್ಸೆನಿಕ್ ಧಾತು, ನೈಟ್ರೇಟುಗಳು, ಪರಿಸರದಲ್ಲಿ ಎಂದೆಂದೂ ನಾಶವಾಗದೆ ಉಳಿದುಕೊಳ್ಳುವ ಡಿಟರ್ಜೆಂಟುಗಳು, ಪ್ಲಾಸ್ಟಿಕ್ ಪದಾರ್ಥಗಳು ಇತ್ಯದಿಗಳು ಬೃಹತ್ ಪ್ರಮಾಣದಲ್ಲಿ ಪರಿಸರವನ್ನು ಕಲುಷಿತಗೊಳಿಸುತ್ತಿವೆ. ಅಲ್ಲದೆ, ಗಾಳಿಯಲ್ಲಿ ಅನೇಕ ಕೈಗಾರಿಕೆಗಳಿಂದ ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿರುವ ಇಂಗಾಲದ ಮತ್ತು ಇತರ ಧಾತುಗಳ ಆಕ್ಸೈಡುಗಳು ಭೂಮಿಯ ತಾಪ ಮಾನವನ್ನು ಹೆಚ್ಚಿಸಿ, ಉತ್ತರ ಮತ್ತು ದಕ್ಷಿಣ ಧೃವಗಳಲ್ಲಿ ಮತ್ತು ಹಿಮಾಲಯ ಮುಂತಾದ ಪರ್ವತಗಳಲ್ಲಿ ಶೇಖರವಾಗಿರುವ ಮಂಜುಗೆಡ್ಡೆಯ ಪರ್ವತಗಳನ್ನು ಕರಗಿಸಿ ಸಮುದ್ರಗಳ ನೀರಿನ

ಮಟ್ಟವನ್ನು ಹೆಚ್ಚಿಸುತ್ತಿವೆ.

ವಿಜ್ಞಾನಿಗಳ ಪ್ರಕಾರ, ಭೂಮಿಯ ತಾಪಮಾನವು ಹೀಗೆಯೇ ಹೆಚ್ಚುತ್ತಿದ್ದರೆ, ಮುಂದಿನ ಎರಡು-ಮೂರು ದಶಕಗಳಲ್ಲಿ, ಸಮುದ್ರ ಮಟ್ಟದಲ್ಲಿರುವ ಅನೇಕ ಜನಭರಿತ ಪಟ್ಟಣಗಳು ಮತ್ತು ದ್ವೀಪಗಳು ಮುಳುಗಿ ಹೋಗಿ ಲಕ್ಷಾಂತರ ಜನಗಳು ನಿರ್ವಸಿತರಾಗುತ್ತಾರೆ. ಇಂಗಾಲದ ಆಕ್ಸೈಡುಗಳನ್ನು ಹೀರಿಕೊಳ್ಳುತ್ತಿದ್ದ ಲಕ್ಷಾಂತರ ಎಕರೆ ಕಾಡುಗಳು ನಾಶವಾಗಿರುವುದರಿಂದ ಕೂಡ, ಗಾಳಿಯಲ್ಲಿ ದೊಡ್ಡ ಪ್ರಮಾಣದಲ್ಲಿ ತುಂಬಿಕೊಳ್ಳುತ್ತಿರುವ ಕೆಲವು ಅನಿಲಗಳು ಮಳೆಯ ನೀರಿನಲ್ಲಿ ಕರಗಿ, ಆಮ್ಲಗಳು ತುಂಬಿದ ಮಳೆ ಸುರಿದು, ಭೂಮಿಯ ತಾಪಮಾನ ಹೆಚ್ಚುತ್ತಿದೆ. ಪರಮಾಣು ಕೈಗಾರಿಕೆಯಲ್ಲಿ ಪ್ರಪಂಚದಾದ್ಯಂತ ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿರುವ ಪ್ಲುಟೋನಿಯಂ ಎಂಬ ಧಾತುವು ಇದುವರೆಗೆ ಪ್ರಪಂಚದಲ್ಲಿ ಪ್ರಾಕೃತಿಕವಾಗಿ ಗಣನೀಯ ಪ್ರಮಾಣದಲ್ಲಿ ಇರದೇ ಇದ್ದ ಅತ್ಯಂತ ವಿಷ ಪ್ರಾಯ ವಸ್ತು. ಐದು ಕೇಜಿ ಪ್ಲುಟೋನಿಯಂ ಧಾತುವು ಪ್ರಪಂಚದ ಎಲ್ಲ ಜನರ ದೇಹಗಳಿಗೂ ಸಮನಾಗಿ ಸೇರಿದರೆ ಅದು ಎಲ್ಲರನ್ನೂ ಕೊಲ್ಲುವಷ್ಟು ವಿಷಕಾರಕ ವಸ್ತು. ಇದು ಈಗ ಸುಮಾರು ೩೦೦೦ ಟನ್ನುಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಪಂಚದ ಅನೇಕ ದೇಶಗಳಲ್ಲಿ ಶೇಖರವಾಗಿದೆ! ಭಯೋತ್ಪಾದಕ ಉಗ್ರರ ಕೈಗೆ ಇದು ಸಿಕ್ಕದಂತೆ ತಡೆಯುವುದು ಸುಲಭವಲ್ಲ.

**ರಾಜಕೀಯದ ಮೇಲಾಗುವ ಪರಿಣಾಮಗಳು:**

ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಐಶ್ವರ್ಯದ ಬಲದಿಂದ ತಮ್ಮ ಹಿತಾಸಕ್ತಿಗಳಿಗೆ ವಿರುದ್ಧವಾಗಿ ವರ್ತಿಸಿದ ಸರ್ಕಾರಗಳನ್ನು ಈಜಿಪ್ಟ್, ಇಂಡೋನೇಷಿಯ, ಲಿಬ್ಯ, ಇರಾಕ್, ಚಿಲಿ, ಡಾಮಿನಿಕಲ್ ರಿಪಬ್ಲಿಕ್ ಇತ್ಯಾದಿ ದೇಶಗಳಲ್ಲಿ ಉರುಳಿಸಿ, ತಮಗೆ ಬೇಕಾದ, ತಮ್ಮ ಹಿತಾಸಕ್ತಿಗಳನ್ನು ಕಾಯುವ ಸರ್ಕಾರಗಳನ್ನು ರಚಿಸಿಕೊಂಡಿವೆ. ಭಾರತದಲ್ಲಿ ಕೂಡ, ಕೇಂದ್ರದಲ್ಲಿ ಇದುವರೆಗೆ ಅಧಿಕಾರದಲ್ಲಿದ್ದ ಬಹುತೇಕ ಸರ್ಕಾರಗಳು ಬಹುರಾಷ್ಟ್ರೀಯ ಕಂಪನಿಗಳ ಸೇವಕರಾಗಿಯೇ ಕೆಲಸ ಮಾಡಿವೆ.ಈ ಪರಿಣಾಮಗಳನ್ನು ತಪ್ಪಿಸಬೇಕಾದರೆ, ಇವೆಲ್ಲ ಪರಿಣಾಮಗಳ ಬಗ್ಗೆ ಅರಿವಿರುವ ಜನಗಳು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಕೊಳ್ಳಬೇಕು. ತಮಗೆ ಹಣ, ಮದ್ಯ ಇತ್ಯಾದಿ ಸವಲತ್ತುಗಳನ್ನು ಕೊಡುವವರಿಗೆ ಓಟು ಮಾಡದೆ ನಿಜವಾಗಿಯೂ ಜನತೆಯ ಸೇವಕರಾಗಿರುವ, ಅವರ ಹಿತವನ್ನು ಕಾಯುವ ಪ್ರತಿನಿಧಿಗಳನ್ನೆ ಚುನಾಯಿಸಬೇಕು. ಅಲ್ಲಿಯವರೆಗೆ, ಬಹುತೇಕ ಜನಗಳ ವಿರೋಧಿಗಳಾಗಿರುವ, ಬಹುರಾಷ್ಟ್ರೀಯ ಕಂಪನಿಗಳ ಹಿತ ಕಾಪಾಡುವ ಜನಪ್ರತಿನಿಧಿಗಳೇ ಹೆಚ್ಚು ಹಚ್ಚಾಗಿ ಆಯ್ಕೆಯಾಗಿ ಬರುತ್ತಾರೆ. ಬಡತನದ ನಿವಾರಣೆ, ಎಲ್ಲರಿಗೂ ಸಮಾನ ಅವಕಾಶಗಳು, ಪರಿಶುದ್ಧ ಪರಿಸರ ಇತ್ಯಾದಿಗಳು ಇರಬೇಕೆಂದು ನಂಬುವ ಸಮಾಜವಾದಿಗಳ ಕನಸುಗಳೆಲ್ಲ ಕನಸಾಗಿಯೇ ಉಳಿದುಕೊಳ್ಳುತ್ತವೆ. ಹಾಗಾಗಿ ಈಗ ದೇಶಾದ್ಯಂತ ಬೀಸತೊಡಗಿರುವ ರಾಜಕೀಯ ಬದಲಾವಣೆಯ ಗಾಳಿಗೆ ನಾವು ಸ್ಪಂದಿಸಬೇಕಿದೆ.

(ಸಾಭಾರ-ಹೊಸಮನುಷ್ಯ)

* * *

# ಜನಪದ ಸೇವಾ ಟ್ರಸ್ಟ್ ಸಮಾಚಾರ

______ಪ್ರಾಯೋಜಿತ ಶಿಬಿರಗಳಲ್ಲಿ ಯುವಕರು ಭಾಗವಹಿಸುವುದು ಸಾಮಾನ್ಯ. ಈ ರೂಢಿಗೆ ಅಪವಾದಾತ್ಮಕವಾಗಿ ಒಂದು ಯುವ ಶಿಬಿರ ಇತ್ತೀಚೆಗೆ ಹೊಸ ಜೀವನ ದಾರಿಯಲ್ಲಿ ನಡೆಯಿತು.ಈ ಮೊದಲು ಯಾವುದೋ ಒಂದು ಶಿಬಿರದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಶಿಬಿರ ಜೀವನ ಮತ್ತು ವಿಚಾರಗಳಿಂದ ಪ್ರಭಾವಿತರಾಗಿ ಕೆಲವು ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಒಗ್ಗೂಡಿ ತಮ್ಮ ಸ್ವಂತ ಖರ್ಚಿನಲ್ಲಿ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಅವರು ಶ್ರೀರಂಗಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು. ಶನಿವಾರ ಮತ್ತು ಭಾನುವಾರ ಎರಡು ದಿನ ಶಿಬಿರದಲ್ಲಿ ಇದ್ದು ಅನೇಕ ವಿಷಯ ತಿಳಿದುಕೊಂಡರು. ಶಿಬಿರಾರ್ಥಿಗಳಿಗೆ ಆತಿಥ್ಯವನ್ನು ಜನಪದ ಸೇವಾ ಟ್ರಸ್ಟ್ ಒದಗಿಸಿತ್ತು. ಶಿಬಿರದಲ್ಲಿ ಸುಮಾರು ೧೬ ರಿಂದ ೧೭ ವಿದ್ಯಾರ್ಥಿಗಳಿದ್ದರು ಮತ್ತು ವಿದ್ಯಾರ್ಥಿನಿಯರು ಇದ್ದರು. ಮ್ಯಾನ್ ಸಂಸ್ಥೆಯ ಮನು ಶಿಬಿರದ ನಿರ್ದೇಶಕರಾಗಿದ್ದರು. ಸಂತೋಷ ಕೌಲಗಿ ಸಹ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಶಿಬಿರ ಯಶಸ್ವಿಯಾಗಿ ನಡೆಯಿತು. ಅದೇ ಕಾಲೇಜಿನ ಇನ್ನು ಕೆಲವು ವಿದ್ಯಾರ್ಥಿಗಳು ಶಿಬಿರ ನಡೆಸಲು ಮುಂದಾಗಿದ್ದಾರೆ. ಇದೊಂದು ಸ್ವಾಗತಾರ್ಹ ಬೆಳವಣಿಗೆ. ಮಾರ್ಚ ೮ರಂದು ಟ್ರಸ್ಟಿನ ದತ್ತು ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಐದು ತಿಂಗಳ ಹೆಣ್ಣು ಮಗುವನ್ನು ಮೈಸೂರಿನ ದಂಪತಿಗಳಿಗೆ ದತ್ತು ಪೂರ್ವ ಪೋಷಣೆಗಾಗಿ ಕೊಡಲಾಯಿತು.

ಪ್ರತಿ ವರ್ಷದಂತೆ ಶಿವಮೊಗ್ಗ ಜಿಲ್ಲೆಯ ಸಾಗರ ಬಳಿಯ ಹೆಗ್ಗೋಡಿನಲ್ಲಿ ನಡೆಯುವ ಚರಕೋತ್ಸವದಲ್ಲಿ ಟ್ರಸ್ಟಿನ ಕಾರ್ಯದರ್ಶಿಯವರು ಅತಿಥಿಯಾಗಿ ಭಾಗವಹಿಸಿದ್ದರು.

ಮೈಸೂರು ನಗರದಲ್ಲಿಯ ಸಾವಯವ ಕೃಷಿ ಉತ್ಪನ್ನಗಳ ಮಾರಾಟ ಮಳಿಗೆಯವರು ತಮ್ಮ ವ್ಯವಹಾರಕ್ಕಾಗಿ ಜನಪದ ಖಾದಿಯನ್ನು ಖರೀದಿಸಿದರು.

# ಜನಪದ ನಿಲಯದ ಅಂತರಂಗದಲ್ಲಿ.. ೧೨೧

*– ಸುರೇಂದ್ರ ಕೌಲಗಿ*



**ತ**ನ್ನ ಜೀವಮಾನದ ೫೪ನೇ ವರ್ಷದಲ್ಲಿರುವ ಜನಪದ ಸೇವಾ ಟ್ರಸ್ಟ್ ತನ್ನ ಕೆಲವು ಸಫಲತೆಗಳೊಂದಿಗೆ ವಿಫಲತೆಗಳ ಬಗ್ಗೆಯೂ ಜ್ಞಾಪಿಸಿಕೊಳ್ಳುವುದು ಉಚಿತವೆಂದೆನಿಸುತ್ತದೆ. ಈಗ ಇಲ್ಲಿ ಪ್ರಸ್ತಾಪಿಸಲಾಗುತ್ತಿರುವ ವಿಷಯ ಒಂದು ವಿಫಲತೆಯ ವಿಷಯ. ಯಾವ ಉದ್ದೇಶಗಳಿಗಾಗಿ ಜನಪದ ಸೇವಾ ಟ್ರಸ್ಟಿನ ಸ್ಥಾಪನೆಯಾಯಿತೋ ಆ ಉದ್ದೇಶಗಳಲ್ಲಿ ಕೆಲವನ್ನಾದರೂ ಸಾಧಿಸಬಹುದಾಗಿದ್ದ ಅವಕಾಶವನ್ನ ಕಳೆದುಕೊಂಡ ವ್ಯಥೆ ಇಲ್ಲಿ ಪ್ರಸ್ತುತವಾಗಿದೆ. ವಿಫಲತೆಯ ಕಾರಣಕ್ಕಾಗಿ ಯಾರೋಬ್ಬರನ್ನು ಗುರಿ ಪಡಿಸುತ್ತಿಲ್ಲ. ಸಾಮೂಹಿಕ ಪ್ರಯತ್ನದಿಂದಾಗಿ ರಚಿತವಾದ ಟ್ರಸ್ಟ್ ತನ್ನ ಉದ್ದೇಶಗಳ ನೆರವೇರಿಕೆಯಲ್ಲಿ ಸೋತಿದ್ದರೆ ಅದಕ್ಕೆ ಸಾಮೂಹಿಕ ಪ್ರಯತ್ನದ ಮತ್ತು ಸಂಘಟನಾ ಶಕ್ತಿಯ ಅಭಾವ ಕಾರಣ. ವರ್ತಮಾನದ ಪರಿಸ್ಥಿತಿಯಂತೆಯೇ ೫೦ ವರ್ಷಗಳ ಹಿಂದೆ ಕೂಡ ರಾಜ್ಯ ಶಕ್ತಿ ಮತ್ತು ಧನಶಕ್ತಿಗಳು ಸಂಸ್ಥೆಯನ್ನು ಬೆಳೆಸಲು ಅಗತ್ಯವಾಗಿದ್ದವು.ಆದರೆ ಟ್ರಸ್ಟ್ ಇಟ್ಟುಕೊಂಡಿದ್ದ ಗಾಂಧೀ ವಿಚಾರಧಾರೆ ಈ ಎರಡು ಶಕ್ತಿಗಳನ್ನು ದೂರವಿಡುವಂತೆ ಮಾಡಿತ್ತು. ಧನಶಕ್ತಿಯನ್ನು ಸಂಚಯಿಸಲು ಇದ್ದುಳ್ಳವರ ಬಳಿ ತಾನಾಗಿಯೇ ಕೇಳಿಕೊಂಡು ಹೋಗುವ ಮನೋ ಭೂಮಿಕೆ ಇಲ್ಲದೆ ಇದ್ದುದರಿಂದ ಮತ್ತು ರಾಜ್ಯ ಶಕ್ತಿಯನ್ನು ಅವಲಂಬಿಸಿ ಕಾರ್ಯಕ್ರಮ ರೂಪಿಸಿಕೊಳ್ಳುವ ಅದರ ಜಾಯಮಾನ ಇಲ್ಲದೆ ಇದ್ದುದರಿಂದ ಸಹಜವಾಗಿಯೇ ಟ್ರಸ್ಟ್ ಈ ಎರಡು ಶಕ್ತಿಗಳಿಂದ ತನ್ನ ೫೪ ವರ್ಷಗಳ ಸೇವಾ ಅವಧಿಯಲ್ಲಿ ದೂರ ಉಳಿಯಲು ಬಯಸಿತು. ಟ್ರಸ್ಟಿನ ಕೆಲ ಸೇವಾ ಕಾರ್ಯಗಳನ್ನು ನೋಡಿ ಮತ್ತು ತಿಳಿದು ಅನೇಕ ದಾನಿಗಳು ಸ್ವಯಂ ಪ್ರೇರಣೆಯಿಂದ ಕೊಟ್ಟ ಹಣವನ್ನು ಸ್ವೀಕರಿಸಲಾಗುತ್ತಿತ್ತೆ ವಿನಃ ಕೇಳಿಕೊಂಡು ಹೋಗುವ ರೂಢಿಯಿರಲಿಲ್ಲ. ಇಂಥ ಸನ್ನಿವೇಶದಲ್ಲಿ ಸಂಸ್ಥೆಯನ್ನು ಕಟ್ಟಲು ಅತ್ಯಗತ್ಯವಾಗಿದ್ದ ಸಂಘಟನಾ ಚಾತುರ್ಯ ಹೊರ ಹೊಮ್ಮಲಿಲ್ಲ.ಅನೇಕ ಯೋಜನೆಗಳು ಕಾರ್ಯಗತವಾಗಲು ಸಾಧ್ಯವಾಗಲಿಲ್ಲ.

ಅಂಥ ವಿಫಲತೆಯ ದೃಷ್ಟಾಂತ ಇಲ್ಲಿದೆ.

೧೯೬೦ರ ದಶಕದಲ್ಲಿ, ಸಾಮಾಜಿಕವಾಗಿ ತೊಂದರೆಗೆ ಒಳಗಾದ ವಯಸ್ಕ ಮಹಿಳೆಯರಿಗಾಗಿ ಸಂಕ್ಷಿಪ್ತ ಶಿಕ್ಷಣ ಶಾಲೆಯನ್ನು ಪ್ರಾರಂಭಿಸಲಾಯಿತು. ಮತ್ತು ಈ ಶಾಲೆಯಲ್ಲಿ ಪ್ರವೇಶ ಪಡೆಯುವವರು ವಿಧವೆಯರು, ಪರಿತ್ಯಕ್ತೆಯರು ಮತ್ತು ಅವಿವಾಹಿತ ಮಹಿಳೆಯರು ಆಗಿದ್ದರು. ಅವರಿಗೆ ಎರಡು ವರ್ಷಗಳ ಅವಧಿಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಿದ್ಧಮಾಡಿ ಖಾಸಗಿ ವಿದ್ಯಾರ್ಥಿಗಳನ್ನಾಗಿ ಪರೀಕ್ಷೆಗೆ ಕುಳಿತುಕೊಳ್ಳುವಂತೆ ಮಾಡಬೇಕಾಗಿತ್ತು. ಈ ರೀತಿಯ ಎರಡು ವರ್ಷಗಳ ತರಬೇತಿಗೆ ೩೦ ವಿದ್ಯಾರ್ಥಿನಿಯರಂತೆ ಐದು ತರಬೇತಿಗಳನ್ನು ನಡೆಸಲಾಯಿತು. ಅಲ್ಲಿಗೆ ಈ ಯೋಜನೆ ಮುಗಿಯುವ ವೇಳೆಗೆ

೧೫೦ ಮಹಿಳೆಯರಿಗೆ ಈ ಸೌಲಭ್ಯ ದೊರೆಯಿತು. ಕೇವಲ ಎಸ್.ಎಸ್.ಎಲ್.ಸಿ ಪರೀಕ್ಷೆ ಪಾಸು ಮಾಡಿದರೆ ಅವರ ಜೀವನಕ್ಕೆ ಹೆಚ್ಚಿನ ಪ್ರಯೋಜನವಿಲ್ಲವೆಂದು ಅನಿಸಿತು. ಅವರಿಗೆ ಯಾವುದಾದರೂ ಕೈಗಾರಿಕಾ ತರಬೇತಿಯನ್ನು ಕೊಟ್ಟರೆ ಅವರ ಜೀವನಕ್ಕೆ ಆರ್ಥಿಕ ಸಹಾಯ ಸಿಗಬಹುದೆಂದು ಆಲೋಚಿಸಿ ಒಂದು ಮುದ್ರಣಾಲಯವನ್ನು ಪ್ರಾರಂಭಿಸಲಾಯಿತು. ಅರವತ್ತು ವರ್ಷಗಳ ಹಿಂದೆ ಮುದ್ರಣ ಕೈಗಾರಿಕೆಯು ಗೃಹ ಕೈಗಾರಿಕೆಯಾಗಿತ್ತು. ಅನೇಕ ಕಡೆ ಸಣ್ಣ ಸಣ್ಣ ಮುದ್ರಣ ಯಂತ್ರಗಳನ್ನು ಇಟ್ಟುಕೊಂಡು ಜೀವನ ನಡೆಸುತ್ತಿದ್ದ ಜನರು ದೊಡ್ಡ ಸಂಖ್ಯೆಯಲ್ಲಿದ್ದರು. ಅಕ್ಷರ ಜೋಡಣೆ ಕೆಲಸ ,ಮುದ್ರಣದ ಕೆಲಸ, ಪುಸ್ತಕ ಹೊಲಿಯುವ ಕೆಲಸ ಇತ್ಯಾದಿ ಎಲ್ಲ ಕ್ರಿಯೆಗಳು ಮಾನವ ಶಕ್ತಿಯಿಂದಲೇ ನಡೆಯುತ್ತಿದ್ದುವಾದ್ದರಿಂದ ಮುದ್ರಣ ಕ್ಷೇತ್ರದಲ್ಲಿ ಬಹಳಷ್ಟು ಜನರಿಗೆ ಉದ್ಯೋಗವಕಾಶಗಳು ಇದ್ದವು. ಅಕ್ಷರ ಜೋಡಣೆ ಕೆಲಸಕ್ಕಂತೂ ಮಹಿಳಾ ಕೆಲಸಗಾರರಿಗೆ ಹೆಚ್ಚಿನ ಬೇಡಿಕೆಯಿತ್ತು. ಮುದ್ರಣಾಲಯ ತರಬೇತಿ ಘಟಕದಲ್ಲಿ ಸಂಕ್ಷಿಪ್ತ ಶಿಕ್ಷಣ ಶಾಲೆಯಲ್ಲಿ ಓದಿದ್ದ ಮಹಿಳೆಯರಿಗೆ ತರಬೇತಿಯನ್ನು ಕೊಡಲು ಪ್ರಾರಂಭಿಸಲಾಯಿತು. ಸುಮಾರು ೧೦-೧೨ ಹೆಣ್ಣು ಮಕ್ಕಳು ತರಬೇತಿಗೆ ಸೇರಿಕೊಂಡರು. ತರಬೇತಿ ಮುಗಿದ ಮೇಲೆ ಅವರಿಗೆಲ್ಲ ಸಂಬಳ ಕೊಟ್ಟು ಮುದ್ರಣಾಲಯದ ಖಾಯಂ ಕೆಲಸಗಾರರನ್ನಾಗಿ ಮಾಡಿಕೊಳ್ಳಲಾಯಿತು. ಮುದ್ರಣಾಲಯಕ್ಕೆ ಜನಪದ ಸೇವಾ ಟ್ರಸ್ಟ್ ಮುದ್ರಣಾಲಯ ಎಂದು ನಾಮಕರಣ ಮಾಡಲಾಯಿತು. ಇದು ಹಲವಾರು ವರ್ಷಗಳ ಕಾಲ ನಡೆಯಿತು. ಮುದ್ರಣ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನ, ಸ್ವಯಂ ಚಾಲಿತ ಯಂತ್ರೋಪಕರಣಗಳು ಬಂದ ಮೇಲೆ ಹಳೆಯ ತಾಂತ್ರಿಕತೆಯ ಮುದ್ರಣಾಲಯಗಳಿಗೆ ಕೆಲಸವಿಲ್ಲದಂತಾಗಿ ಅವು ಕ್ರಮೇಣ ಮುಚ್ಚುತ್ತಾ ಬಂದವು. ಅದರ ಪರಿಣಾಮ ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದ ಮೇಲೂ ಆಯಿತು. ಅನಿವಾರ್ಯವಾಗಿ ಮುಚ್ಚಬೇಕಾಯಿತು. ಆದರೆ ಟ್ರಸ್ಟ್ ವಿಫಲವಾದದ್ದು ಈ ಹಂತದಲ್ಲಿಯೇ. ಸುಮಾರು ೧೫೦ಜನ ಮಹಿಳೆಯರು ಸಂಪರ್ಕದಲ್ಲಿದ್ದಾಗಲೇ ದೂರ ದೃಷ್ಟಿಯಿಂದ ಅವರ ಜೀವನ ನಿರ್ವಹಣೆಗಾಗಿ ಯಾವುದಾದರೊಂದು ಸಾಮಾಜಿಕ-ಆರ್ಥಿಕ ಯೋಜನೆಯನ್ನು ಪ್ರಾರಂಭಿಸಬಹುದಾಗಿತ್ತು. ಮುದ್ರಣಾಲಯದ ಸ್ಥಳದಲ್ಲಿ ಬೇರೊಂದು ರೀತಿಯ ಉದ್ಯೋಗ ಪ್ರಾರಂಭಿಸಿ ಅವರಿಗೆ ಉದ್ಯೋಗ ಕೊಡಬಹುದಾಗಿತ್ತು. ಖಾದಿ-ಗ್ರಾಮೊದ್ಯೋಗ ಗೃಹೋದ್ಯೋಗಗಳನ್ನು ಪ್ರಾರಂಭಿಸಿ ಉದ್ಯೋಗ ಕೊಡಬಹುದಾಗಿತ್ತು. ಅಲ್ಲದೆ ಹೊಸ ಕಾಲದ ಅಗತ್ಯಕ್ಕನುಗುಣವಾದ ಶೈಕ್ಷಣಿಕ ಕಾರ್ಯಕ್ರಮವನ್ನು ಅವರಿಗಾಗಿ ರೂಪಿಸಿ ಅವರ ಜೀವನ ಉತ್ತಮಗೊಳ್ಳುವಂತೆ ಮಾಡಬಹದಾಗಿತ್ತು. ಒಂದು ವೇಳೆ ಅಂಥ ಪ್ರಯತ್ನವೇನಾದರೂ ನಡೆದು ಉದ್ಯೋಗ ಮತ್ತು ಶಿಕ್ಷಣದ ಕಾರ್ಯಕ್ರಮಗಳು ನಡೆದಿದ್ದರೆ ಆ ಹೆಣ್ಣು ಮಕ್ಕಳೇ ಟ್ರಸ್ಟಿನ ಕೆಲಸಕ್ಕೆ ಸಹಾಯಕರಾಗಬಹುದಿತ್ತು. ಸಂಸ್ಥೆಯು ಬೆಳೆಯುತ್ತಿತ್ತು.ಅವರಿಗೂ ಜೀವನ ಆಗುತ್ತಿತ್ತು. ಆ ಮಹಿಳಾ ಶಕ್ತಿಯನ್ನು ಉಪಯೋಗಿಸಿಕೊಂಡು ಅನೇಕ ಪ್ರಕಾರದ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳಬಹುದಾಗಿತ್ತು. ಇಂಥ ಅಗತ್ಯವಾದ ಸಾಹಸವನ್ನು ಮಾಡುವ ಸಾಮೂಹಿಕ ಪ್ರಯತ್ನ, ಯೋಚನೆ ಮತ್ತು ನೇತೃತ್ವದ ಅಭಾವ ಟ್ರಸ್ಟಿನ ಆಡಳಿತ ಮಂಡಳಿಯಲ್ಲಿ ಇಲ್ಲದೇ ಹೋಯಿತು. ಇದೊಂದು ಟ್ರಸ್ಟಿನ ಬೆಳವಣಿಗೆಯಲ್ಲಿ ಉಂಟಾದ ದೊಡ್ಡ ತಪ್ಪೆಂದು ಅನಿಸುತ್ತಿದೆ. ಆದರೆ ಕಾಲ ಮಿಂಚಿ ಹೋಗಿರುವುದರಿಂದ ಚಿಂತಿಸಿ ಫಲವಿಲ್ಲ.

# ಸರ್ವೋದಯ ಆಂದೋಲನದ ಮುನ್ನಡೆ

## ಮತದಾರರ ಪ್ರಣಾಳಿಕೆ :-

ಲೋಕಸಭಾ ಚುನಾವಣೆ, ೨೦೦೪ ಪ್ರಜಾಪ್ರಭುತ್ವದಲ್ಲಿ ಸ್ವಾಭಾವಿಕ ಮತ್ತು ಸಹಜ ಕ್ರಿಯೆ. ಆದರೆ ದುರದೃಷ್ಟವಶಾತ್ ನಮ್ಮ ದೇಶದಲ್ಲಿ ಚುನಾವಣೆ ಎಂದರೆ ಎಲ್ಲ ಪ್ರಕಾರದ ಸಣ್ಣತನವನ್ನು ಮತ್ತು ದೌರ್ಬಲ್ಯಗಳನ್ನು ಅದು ವ್ಯಕ್ತಿಯದ್ದಾಗಿರಬಹುದು ಅಥವಾ ಸಮಾಜದ್ದಾಗಿರಬಹುದು ಅದನ್ನು ಬಹಿರಂಗ ಪಡಿಸುವುದೇ ಆಗಿದೆ. ಕಟುತ್ವ, ವಿರೋಧತ್ವ ಮತ್ತು ಸಂಕುಚಿತತತ್ವಗಳು ಚುನಾವಣೆ ಹತ್ತಿರ ಬಂದಂತೆಲ್ಲಾ ಹೆಚ್ಚಾಗುತ್ತಿವೆ. "ಚುನಾವಣೆ ಎಂದರೆ ಆತ್ಮಸ್ತುತಿ ಮಾಡುವ ಬೇರೆಯವರ ತೇಜೋವಧೆ ಮಾಡುವ ಮತ್ತು ಮಿಥ್ಯೆ ಪ್ರಚಾರ ಮಾಡುವ ಒಂದು ಮಹೋತ್ಸವ" ಎಂದು ಆಚಾರ್ಯ ವಿನೋಬಾ ಭಾವೆ ಬಣ್ಣಿಸಿದ್ದಾರೆ.

ಈಗ ಚುನಾವಣೆ ಮುನ್ನ ನಾವು ಮತದಾರರ ಪ್ರಣಾಳಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಗಾಂಧೀ ವಿಚಾರದ ನಾವು ಎಲ್ಲ ರಾಜಕೀಯ ಪಕ್ಷಗಳಿಗೆ ಕಾರ್ಯಕರ್ತರಿಗೆ ಮತ್ತು ಬೆಂಬಲಿಗರಿಗೆ ವಿನಂತಿಸಿಕೊಳ್ಳುವುದೇನೆಂದರೆ ನಿಮ್ಮ ಅಸ್ಮಿತೆಯನ್ನು ಇಷ್ಟೊಂದು ಕೀಳುಮಟ್ಟಕ್ಕೆ ತೆಗೆದುಕೊಂಡು ಹೋಗಬೇಡಿ. ಚುನಾವಣೆ ನಂತರವೂ ನೀವು ತಲೆ ಎತ್ತಿ ಓಡಾಡಲು ಸ್ಥಳವಿಲ್ಲದಂತೆ ಮಾಡಿಕೊಳ್ಳಬೇಡಿ. ನೀತಿ ಮತ್ತು ಸಭ್ಯತೆಯನ್ನು ಕಾಪಾಡಿಕೊಂಡು ಬರುವುದು ನಾಗರೀಕ ಸಮಾಜದ ಪ್ರತಿಯೊಬ್ಬನ ಜವಾಬ್ದಾರಿಯಾಗಿದೆ. ಈ ಸಮಾಜದಲ್ಲಿ ಕೇವಲ ನಮ್ಮ ರಾಜಕೀಯ ಶತ್ರುಗಳು ಮಾತ್ರ ಇಲ್ಲ, ನಮ್ಮ ಮಕ್ಕಳು ಮತ್ತು ಕುಟುಂಬದವರೂ ಕೂಡ ಇದ್ದಾರೆ ಎಂದು ಜ್ಞಾಪಕ ಇಟ್ಟುಕೊಳ್ಳಬೇಕು. ವಾತಾವರಣವನ್ನು ನಾವು ವಿಷಯುಕ್ತವನ್ನಾಗಿ ಮಾಡಿದರೆ ಅದು ನಮಗೂ ಕೂಡ ಅಪಾಯವನ್ನುಂಟು ಮಾಡುವುದು. ಆದ್ದರಿಂದ ಅಂಥ ವಿಷದಿಂದ ನಮ್ಮನ್ನು ಮತ್ತು ಸಮಾಜವನ್ನೂ ರಕ್ಷಿಸಿಕೊಳ್ಳಬೇಕು.

ಈ ದೇಶದಲ್ಲಿ ಅನೇಕ ರಾಜಕೀಯ ಪಕ್ಷಗಳಿವೆ. ಅವು ಸಂಖ್ಯೆಗೆ ಮಹತ್ವ ಕೊಡುತ್ತವೆ ವಿನಹ ಮೌಲ್ಯಗಳಿಗಲ್ಲ. ಎಲ್ಲ ರಾಜಕೀಯ ಪಕ್ಷಗಳ ನಡವಳಿಕೆ ಒಂದೇ ತೆರನಾಗಿರುತ್ತದೆ. ಅವು ಹೋಗುವ ದಿಕ್ಕು ಕಾರ್ಯಕ್ರಮಗಳು ನೀತಿಗಳು ಎಲ್ಲ ಹಂತಗಳಲ್ಲಿಯೂ ವ್ಯವಹಾರವೂ ಕೂಡ ಒಂದೇ ತೆರನಾಗಿರುತ್ತದೆ. ೫೪೨ ಸದಸ್ಯರನ್ನು ಹೊಂದಿರುವ ನಮ್ಮ ಸಂಸತ್ತು ಮೇಲುವರ್ಗದ ಜನರ ಕೂಟವಾಗಿದೆ. ಸಮಯ ಕಳೆಯುವ ಕೂಟವಾಗಿದೆ. ಸಂಗೀತ ಕುರ್ಚಿಯ ಆಟದಂತೆ ರಾಜಕೀಯ ಆಟಗಳು ನಡೆಯುತ್ತವೆ.ರಾಜಕೀಯ ಪಕ್ಷಗಳು ಬಹು ದೊಡ್ಡ ಹಣದ ಮೊತ್ತದಿಂದ ಈ ಆಟ ಆಡುತ್ತವೆ.

ಇಂದಿನ ಹಾಗೆ ಮತದಾರರು ಅಸಂಘಟಿತರಾಗಿ ಉಳಿದುಕೊಂಡರೆ ಮತ್ತು ಉದಾಸೀನವಾಗಿ ಉಳಿದುಕೊಂಡರೆ ಯಾವುದೇ ತತ್ವವಿಲ್ಲದ ಮತ್ತು ಮೌಲ್ಯವಿಲ್ಲದ ಅಧಿಕಾರದಲ್ಲಿರುವ ರಾಜಕಾರಣಿಗಳು ಮತದಾರರನ್ನು ತಮ್ಮ ತಮ್ಮ ಇಷ್ಟದಂತೆ

ಕುಣಿಸುತ್ತಾರೆ. ಆದ್ದರಿಂದ ಮತದಾರರಾದ ನಾವು ಅಭ್ಯರ್ಥಿಗಳನ್ನು ಚೆನ್ನಾಗಿ ಪರೀಕ್ಷಿಸಿ ಯಾರು ಯೋಗ್ಯರೊ ಮತ್ತು ನಂಬಿಕೆಗೆ ಅರ್ಹರೊ ಅಂಥವರಿಗೆ ಮತ ಕೊಡಬೇಕು. ಇಂದು ನಮ್ಮ ದೇಶದ ಜನ ಜೀವನ ಭ್ರಷ್ಟ ರಾಜಕಾರಣಿಗಳ, ಕಾರ್ಪರೇಟರ್‌ಗಳ ಮತ್ತು ಅಧಿಕಾರಶಾಹಿಗಳ ಹಿಡಿತದಲ್ಲಿದೆ.ತೀರ್ಮಾನ ಕೈಗೊಳ್ಳುವುದರಿಂದ ಹಿಡಿದು ಅದನ್ನು ಕಾರ್ಯಗತ ಮಾಡುವ ವರೆಗೆ ಎಲ್ಲವೂ ಅವರ ಕೈಯಲ್ಲಿದೆ. ಒಂದು ಕಾಲಕ್ಕೆ ಪ್ರಜಾಪ್ರಭತ್ವ ಜನರ, ಜನರಿಂದ, ಜನರಿಗಾಗಿ ಎಂಬ ವ್ಯಾಖ್ಯೆಯನ್ನು ಹೊಂದಿತ್ತು. ಇಂದು ಈ ವ್ಯಾಖ್ಯೆ ಆಮೂಲಾಗ್ರವಾಗಿ ಬದಲಾಗಿದೆ.ಪ್ರಜಾಪ್ರಭುತ್ವದ ಹೆಸರಿನಲ್ಲಿ ಕೇಂದ್ರಿತ ಪ್ರಭುತ್ವವಿದೆ. ಅದು ಜನತೆಯನ್ನು ಮೀರಿದುದ್ದಾಗಿದೆ. ಆದ್ದರಿಂದ ಈ ಚುನಾವಣೆ ಪ್ರಜಾಪ್ರಭುತ್ವವನ್ನು ಉಳಿಸಲು ಕೊನೆಯ ಅವಕಾಶವಾಗಿದೆ ಎಂದು ಒತ್ತಾಯ ಪೂರ್ವಕ ಹೇಳುತ್ತಿದ್ದೇವೆ.

ಅಭ್ಯರ್ಥಿಗಳನ್ನು ಪರೀಕ್ಷಿಸುವಾಗ ಅವರು ಭ್ರಷ್ಟರೇ, ಕುಡುಕರೇ ಅಥವಾ ಮದ್ಯ ವ್ಯವಹಾರದಲ್ಲಿ ತೊಡಗಿದ್ದಾರೆಯೇ ಎಂಬುದನ್ನು ಪರಿಶೀಲಿಸಬೇಕು. ಸಾರ್ವಜನಿಕ ಯೋಜನೆಗಳನ್ನು ತಮ್ಮ ಅಥವಾ ತಮ್ಮ ಬಂಧುಗಳ ಕೈಯಲ್ಲಿ ಇರಿಸಿಕೊಂಡಿದ್ದಾರೆಯೇ ಎಂದು ಪರೀಕ್ಷಿಸಿಕೊಳ್ಳಬೇಕು. ಜಾತಿವಾದಿಗಳು, ಕೋಮುವಾದಿಗಳನ್ನು ದೂರ ಇಡಬೇಕು. ಅಂಥವರಿಗೆ ಮತ ಹಾಕಕೂಡದು. ಯಾವುದೇ ಪಕ್ಷದ ಅಂಥ ಅಭ್ಯರ್ಥಿಗೆ ಮತ ಚಲಾಯಿಸುವುದೆಂದರೇ ಆತ್ಮಹತ್ಯೆ ಮಾಡಿಕೊಂಡಂತೆ.

ನಮಗೆ ಅಭಿವೃದ್ಧಿ ಬೇಕಿದೆ ಆದರೆ ಕೇವಲ ಮಾತುಗಾರಿಕೆಯ ಅಭಿವೃದ್ಧಿಯಲ್ಲ ಪ್ರತ್ಯಕ್ಷ ಅಭಿವೃದ್ಧಿ. ನಾಳೆಯಲ್ಲ ಇಂದು. ಬಾಯಾರಿದ ಮನುಷ್ಯನಿಗೆ ಕುಡಿಯಲು ತಕ್ಷಣ ನೀರು ಬೇಕು ಮನೆಯಿಲ್ಲದವರಿಗೆ ಮನೆ ಬೇಕು, ರೋಗಿಗೆ ಔಷಧ ಬೇಕು, ಮಕ್ಕಳಿಗೆ ಶಾಲೆಗಳು ಬೇಕು. ಪುಸ್ತಕ ಮತ್ತು ಅಧ್ಯಾಪಕರು ಬೇಕು. ಪ್ರೀತಿ ಮತ್ತು ಶಿಕ್ಷಣ ಸಿಗುವಂತ ಶಾಲೆಬೇಕು.

ಮತದಾರರ ನಿಯಂತ್ರಣದಲ್ಲಿ ಇರುವಂಥ ಪ್ರಭುತ್ವವೇ ನಿಜವಾದ ಪ್ರಭುತ್ವ ಎನಿಸಿಕೊಳ್ಳುವುದು ಆದ್ದರಿಂದ ಮತದಾರರು ಸಂಘಟಿತರಾಗಬೇಕು ಮತ್ತು ತಮ್ಮ ತಮ್ಮ ಕ್ಷೇತ್ರಗಳಲ್ಲಿ ವೇದಿಕೆಯನ್ನು ರಚಿಸಿಕೊಳ್ಳಬೇಕೆಂದು ನಾವು ವಿನಂತಿಸುತ್ತೇವೆ. ಈ ವೇದಿಕೆಯಲ್ಲಿ ತೀರ್ಮಾನ ಕೈಗೊಂಡು ಅದರಂತೆ ನಡೆಯಬೇಕು.ಇದು ಜನತೆಯ ರಾಜಕಾರಣ ಅದನ್ನು ಪರಿಶೋಧಿಸಬೇಕು ಮತ್ತು ಕ್ರಿಯಾಶೀಲಗೊಳಿಸಬೇಕು. ಮತ್ತು ನಮ್ಮ ಆಸ್ತಿ ಯಾವುದು ಸರಿಯೆಂದು ಅನಿಸುತ್ತದೋ ಅದರಂತೆ ಯೋಚಿಸಿ ಮತಹಾಕಬೇಕು.

(ಗಾಂಧೀ ಸ್ಮಾರಕ ನಿಧಿಯ ದಕ್ಷಿಣ ಭಾರತದ ಎಲ್ಲ ರಾಜ್ಯಗಳ ಪ್ರತಿನಿಧಿಗಳ ಸಭೆ ಬೆಂಗಳೂರಿನಲ್ಲಿ ಜನವರಿ ೨೦೧೪ ೧೮ ಮತ್ತು ೧೯ರಂದು ನಡೆಯಿತು ಅದರಲ್ಲಿ ರೂಪಿಸಿದ ಪ್ರಣಾಳಿಕೆ ಇದು)

* * *

## ಪತ್ರಿಕೆಯ ಒಡೆತನ ಮತ್ತು ಇತರ ವಿವರಗಳ ಪ್ರಕಟಣೆ

ಪ್ರಾರೂಪ ೪ [ವಿಧಿ-೮]

| | | |
|---|---|---|
| ೧. | ಪ್ರಕಟನೆಯ ಸ್ಥಳ | : ಮೇಲುಕೋಟೆ |
| ೨. | ಪ್ರಕಟನೆಯ ನಿಯತಕಾಲಿಕತೆ | : ತಿಂಗಳಿಗೊಮ್ಮೆ |
| ೩. | ಮುದ್ರಕರ ಹೆಸರು | : ಸಂಕೇತ್ ಮುದ್ರಣ |
| | ಭಾರತದ ಪ್ರಜೆಯೇ? | : ಹೌದು |
| | ವಿಳಾಸ | : ಸಂಕೇತ್ ಮುದ್ರಣ<br>ಕಲ್ಯಾಣಿ ಬೀದಿ, ಮೇಲುಕೋಟೆ |
| ೪. | ಪ್ರಕಾಶಕರ ಹೆಸರು | : ಸುರೇಂದ್ರ ಕೌಲಗಿ |
| | ಭಾರತದ ಪ್ರಜೆಯೇ? | : ಹೌದು |
| | ವಿಳಾಸ | : ಕಲ್ಯಾಣಿ ಬೀದಿ, ಮೇಲುಕೋಟೆ |
| ೫. | ಗೌ/ಪ್ರಧಾನ ಸಂಪಾದಕರ ಹೆಸರು | : ಸುರೇಂದ್ರ ಕೌಲಗಿ |
| | ಭಾರತದ ಪ್ರಜೆಯೇ? | : ಹೌದು |
| | ವಿಳಾಸ | : ಕಲ್ಯಾಣಿ ಬೀದಿ, ಮೇಲುಕೋಟೆ |

೬. ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಗಳ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳದ ಶೇ.೧ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರಾದವರ ಹೆಸರು ಮತ್ತು ವಿಳಾಸ : ಜನಪದ ಸೇವಾ ಟ್ರಸ್ಟ್,
ಮೇಲುಕೋಟೆ – ೫೭೧೪೩೧

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು ನಾನು ಸುರೇಂದ್ರ ಕೌಲಗಿ ಘೋಷಿಸುತ್ತೇನೆ.

ದಿನಾಂಕ: ೭-೩-೨೦೧೪
ಮೇಲುಕೋಟೆ-೫೭೧೪೩೧

ಪ್ರಕಾಶಕರ ಸಹಿ
ಸುರೇಂದ್ರ ಕೌಲಗಿ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..............................................................................

..............................................................................................

..............................................................................................

**_JANAPADA VICHARA_**
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh Mudrana, Melkote.